ಮಾನಸಿ

ತಿಂಗಳ ಪತ್ರಿಕೆ ವಿಶೇಷ ಸಂಚಿಕೆ

ಏಪ್ರಿಲ್-ಮೇ ೧೯೯೧

ವಿಜಯಾ ದಬ್ಬೆಯವರ "ಮಹಿಳೆ, ಸಾಹಿತ್ಯ, ಸಮಾಜ"
ಕುರಿತ ಒಂದು ವಿವೇಚನೆ.

ಧ್ವನಿ ಎತ್ತಬಲ್ಲವೇ ನೊಂದ ಆತ್ಮಗಳು?

ಕಾಶ್ಮೀರದ ದಿದ್ದಾ

ಮದುವೆಯಿಲ್ಲದ ಹುಡುಗಿ.

ಹೆಣ್ಣು ಮಗು ಮತ್ತು ವಿದ್ಯಾಭ್ಯಾಸ.

ದೇವದಾಸಿಯರ ಮದುವೆ.

ಅಮ್ಮ, ನಾನು, ಗಾಂಧಿ.

ಮಾನಸ

ಸಂಪುಟ: ೩ ಸಂಚಿಕೆ: ೪

ಏಪ್ರಿಲ್–ಮೇ ೧೯೯೧


ಸಂಪಾದಕೀಯ ಮಂಡಳಿ:
ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ದು. ಸರಸ್ವತಿ,
ಸವಿತ ಎ., ಗೀತಾ ಜಿ. ಎಸ್., ಗಾಯಿತ್ರಿ ವಿ.

ಸಲಹೆ—ಸಹಕಾರ
ಇಳಾವಿಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ)
ಬೆಂಗಳೂರು—**560067**

ಬಿಡಿಪ್ರತಿ:2 ರೂ.
ಸೂಚನೆ: ವಾರ್ಷಿಕ ಚಂದಾ:**20**ರೂ.
ಆಜೀವ ಚಂದಾ: **250**ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ..... ....



ಸಂಪಾದಕೀಯ

ಈ ಬಾರಿಯ ಮತದಾನ, ಚುನಾವಣೆಯ ಪರಿಹಾಸ್ಯ ಎಲ್ಲರಿಗೂ ತಿಳಿದದ್ದೇ. ಸುಭದ್ರ, ಅಭದ್ರ, ರಾಮರಾಜ್ಯ ಮುಂತಾದ ಘೋಷಣೆಗಳ ಅಡಿಯಲ್ಲಿ ಪ್ರತಿಯೊಂದು ಪಕ್ಷದವರೂ ತಾವು ಚುನಾಯಿಸಿ ಬಂದಲ್ಲಿ ಸದಾ ಸೇವೆಗೆ ಸಿದ್ಧ ಎಂಬಂತಹ ಮಾಮೂಲಿ ಮಾತುಗಳನ್ನೇ ಆಡುತ್ತಿದ್ದಾರೆ. ಇವೆಲ್ಲದರ ಪರಿಹಾಸ್ಯ, ಅಪನಂಬಿಕೆಗಳಡಿಯಲ್ಲಿಯೇ ಇಂದು ನಾವು ಮತದಾನಕ್ಕೆ ಒತ್ತಾಯಪೂರ್ವಕವಾಗಿ ಇಳಿಯಬೇಕಾಗಿದೆ.

ಇಷ್ಟರವರೆಗಿನ ಸರ್ಕಾರಗಳು ಮಹಿಳೆಯರಿಗೆ ನೀಡಿದ್ದಾದರೂ ಏನನ್ನು? ಅಥವಾ ನಾವು ಈಗ ಮತದಾನ ಮಾಡಿ ಚುನಾಯಿಸುವ ಸರಕಾರ ನಮಗೆ ಮಾಡುವುದಾದರೂ ಏನನ್ನು? ಚಾರಿತ್ರಿಕವಾಗಿ ಮಹಿಳೆಯರ ಬದುಕು ನಾಲ್ಕು ಗೋಡೆಗಳ ಮಧ್ಯೆ ಬಂಧಿತವಾಗಿರುವುದನ್ನೇನೂ ಯಾವ ಸರ್ಕಾರವೂ ಬದಲಾಯಿಸಲಾರದು, ಅಥವಾ ಬೆಳೆಯುತ್ತಿರುವ ಬಂಡವಾಳಶಾಹಿ ಆರ್ಥಿಕತೆಯ ಹಂತದಲ್ಲಿ ಅನಿವಾರ್ಯವಾಗಿ ದುಡಿಮೆಗೆ ಮುಂದಾಗಿರುವ ಮಹಿಳಾ ಕಾರ್ಮಿಕ ಶಕ್ತಿಗೆ ಒಳ-ಹೊರಗೆ ದುಡಿಯುವ ದ್ವಂದ್ವವನ್ನೇನೂ ಯಾವ ಸರ್ಕಾರವೂ ಮೂಲಭೂತವಾಗಿ ಹೋಗಲಾಡಿಸುವುದಿಲ್ಲ. ಮನೆ, ಮಕ್ಕಳು, ಅಡಿಗೆ ಮುಂತಾದ ಜವಾಬ್ದಾರಿಗಳೊಂದಿಗೆ ಆರ್ಥಿಕತೆಯ ನೊಗವನ್ನೂ ಹೊತ್ತು ಆಯುಸ್ಸನ್ನು ಬೇಗ ಎಣಿಸಬೇಕಾದ ಪರಿಸ್ಥಿತಿ ಇಂದು ಮಹಿಳೆಗೆ ಬಂದೊದಗಿದೆ.

ಈ ರೀತಿಯ ಒಳಗಿನ ಬೇಗೆ ನಮ್ಮ ನಿಮ್ಮೊಳಗೆಲ್ಲಾ ಇದೆ. ಇಂತಹ ಪರಿಸ್ಥಿತಿಯಲ್ಲಿ ಇಂತಹ ಚುನಾವಣೆಗಳಿಗೆ ನಾವು ಹೇಗೆ ಪ್ರತಿಕ್ರಿಯಿಸಬೇಕು? ಮತದಾನ ಮಾಡುವುದೇ? ಮತದಾನವನ್ನೇ ಬಹಿಷ್ಕರಿಸಿ ಮಹಿಳಾ ಶಕ್ತಿಯ ತೋರಿಸುವುದೇ? ಅಥವಾ ನಿಧಾನವಾಗಿ, ಮನೆಗಳಲ್ಲಿ ದುಡಿಯುವ ಮಹಿಳೆಯರು, ಮಹಿಳಾ ಕಾರ್ಮಿಕರು, ಬೇರೆ ಬೇರೆ ಕಡೆ ದುಡಿಯುವ, ಅಸಂಘಟಿತ ಮಹಿಳೆಯರೆಲ್ಲರು ಸೇರಿ ಮಹಿಳಾ ಪಕ್ಷವೊಂದನ್ನು ರೂಪಿಸಿದರೆ ಹೇಗೆ? ಯೋಚಿಸಬೇಕಾದ ವಿಚಾರ.

ವಿಜಯಾ ದಬ್ಬೆಯವರ–'ಮಹಿಳೆ, ಸಾಹಿತ್ಯ, ಸಮಾಜ' ಕುರಿತು ಒಂದು ವಿವೇಚನೆ:

–ಮಧುಮತಿ ರುಕ್ಕೋಜಿ

ಮಹಿಳೆಯರ ಶೋಷಣೆ ಕುರಿತು ಸಾಕಷ್ಟು ಚರ್ಚೆಗಳಾಗಿವೆ. ಅದರಿಂದ ಕೆಲವೊಮ್ಮೆ ಸಂಧಾನಗಳಾಗಿರಬಹುದು. ಅಥವಾ ಪ್ರತಿಭಟನೆ ಎನ್ನುವುದು ಕೆಲವರ ಹಾಸ್ಯಕ್ಕೆ, ವ್ಯಂಗ್ಯಕ್ಕೆ ವಸ್ತುವಾಗಿರಬಹುದು. ಆದರೆ ಈ ಬಗೆಯ ಪ್ರತಿಭಟನೆ ಅಥವಾ ಚಳುವಳಿ ಅರ್ಥಪೂರ್ಣ ಎನ್ನಿಸುವುದು, ಅದರಲ್ಲಿ ತೊಡಗಿದ ಕೆಲವರಾದರೂ ಸಮಸ್ಯೆಯ ಆಳವಾದ ಅಧ್ಯಯನ ಮಾಡಿ, ವಸ್ತುಸ್ಥಿತಿಯನ್ನು ಗ್ರಹಿಸಿ, ಇನ್ನು ಆಗಬೇಕಾಗಿರುವ ಸಂಗತಿಗಳ ಬಗ್ಗೆ ಒಂದು ಸ್ಪಷ್ಟ ನಿಲುವು ತಳೆದಾಗ ಮಾತ್ರ. ಇಂಥ ಒಬ್ಬ ದೃಢ ನಿಲುವಿನ, ವಿಚಾರವಂತ ಲೇಖಕಿ, ವಿಮರ್ಶಕಿ ವಿಜಯಾ ದಬ್ಬೆಯವರು. "ಅರ್ಥ", "ಇರುತ್ತವೆ" ಕೃತಿಗಳ ನಂತರ ಪ್ರಕಟಗೊಂಡಿರುವ ಅವರ "ಮಹಿಳೆ, ಸಾಹಿತ್ಯ, ಸಮಾಜ" ಮೇಲೆ ಹೇಳಿದ ಪಕ್ವ ನಿಲುವಿನ ಕೃತಿ. ಇಲ್ಲಿ ಒಂದು ಆರೋಗ್ಯಪೂರ್ಣವಾದ ಮನಸ್ಸು ನಮ್ಮೊಂದಿಗೆ ಸಂವಾದಿಸುತ್ತದೆ.

ಇದರಲ್ಲಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ಲೇಖನಗಳಿವೆ. ಇವಿಷ್ಟೂ ಲೇಖನಗಳಲ್ಲಿ ಬೇರೆ ಬೇರೆ ರಂಗಗಳಲ್ಲಿ ದುಡಿದ ಸ್ತ್ರೀಯರು, ಅವರು ಎದುರಿಸಿದ, ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಇವೆಲ್ಲಕ್ಕೂ ಅಂತ್ಯ ಕಾಣಿಸಬೇಕಾದರೆ, ಮಹಿಳೆಯರು, "ಕ್ರಮಿಸಲೇಬೇಕಾದ ಪ್ರಯಾಸದ ದಾರಿ" ಇತ್ಯಾದಿಯ ಬಗ್ಗೆ ವಿಜಯಾ ಬೆಳಕು ಚೆಲ್ಲುತ್ತಾರೆ. ಆದರೆ ಶೋಷಣೆಗೊಳಗಾದ ಪ್ರತಿ ಹೆಣ್ಣು ಇದನ್ನು ಕ್ರಮಿಸಲೇಬೇಕಾದುದು ಎಷ್ಟು ಅನಿವಾರ್ಯ ಎನ್ನುವ ಅರಿವು ಮತ್ತು ನಿಲುವು. ಅವರು ವಸ್ತುಸ್ಥಿತಿಯನ್ನು ಗ್ರಹಿಸುವ ತೀವ್ರತೆಯನ್ನು, ಪ್ರಬುದ್ಧತೆಯನ್ನು ಮನವರಿಕೆ ಮಾಡಿಕೊಡುತ್ತದೆ.

ಸಮಾಜ, ಹೆಣ್ಣಿನ ದುಡಿಮೆ ಮತ್ತು ತಾಯ್ತನದ ಹಕ್ಕನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಹೇಗೆ ಮಹಿಳೆಯರಿಗೆ ಸಹನೆ, ಕ್ಷಮೆ ಮತ್ತು ವಿಧೇಯತೆಗಳನ್ನು ಬೋಧಿಸುತ್ತಾ ನಡೆದಿದೆ ಎಂದು ಗುರುತಿಸುವ ವಿಜಯಾ ಕೌಟುಂಬಿಕ ಜವಾಬ್ದಾರಿಗಳನ್ನು ನಯವಾಗಿ ಮಹಿಳೆಯ ಹೆಗಲಿಗೇರಿಸಿ "ಕೂಪಮಂಡೂಕಳಾಗಿ" ಉಳಿಯಲು ಎಂಥ ಸುವರ್ಣಾವಕಾಶ ಒದಗಿಸಿದೆ ಈ ಸಮಾಜ! ಎಂದು ಕಟುವಾಗಿ ಟೀಕಿಸುತ್ತಾರೆ. ಹಂತ ಹಂತವಾಗಿ ಸ್ತ್ರೀಯನ್ನು ದಾಸ್ಯಕ್ಕೆ ತಯಾರು ಮಾಡುವ ಈ ಸಮಾಜ "ಹೊತ್ತಾಗಿ ನೀಡಿದರೂ ಉಣಬೇಕು" ಮುಂತಾಗಿ ಬುದ್ಧಿವಾದ ಹೇಳುತ್ತಾ ನಡೆದಿದ್ದರೂ, ಆಯಾ ಸಂದರ್ಭಕ್ಕೆ ಅನುಗುಣವಾಗಿ ಅಲ್ಲಲ್ಲೇ ಸ್ವಲ್ಪ ಮಟ್ಟಿನ ಪ್ರತಿಭಟನೆಯಾದರೂ ಹೆಣ್ಣುಮಕ್ಕಳಿಂದ ನಡೆದಿದೆ ಎಂದು ಹೇಳುತ್ತಾ "ಹೆಣ್ಣೆ ನೀ ಗಂಡನ್ನ ಕೂಡಿಕೊಂಡ್ಯ; ಮಂಡೂಕ ಸರ್ಪದ ನೆಳಲಿಗೆ ಹೋದಂತೆ" ಎಂದು ಹೇಳಿ ತನ್ನ ಆಸೆಯ ಗಂಡನ್ನು ಹುಡುಕಿಕೊಡುವುದು ಹೆಣ್ಣಿಗೆ ಸಹಜ. ಆದರೆ ಮುಂದೆ ತಾನು ಬಸವನಂತೆ ಈ ಗಂಡಿನ ಮುಂದೆ ಶಿರಬಾಗಿಸಬೇಕಾದ ದುರಂತದ ಬಗ್ಗೆ ತಮ್ಮ ನೋವು ವ್ಯಕ್ತಪಡಿಸುವ ಬೇಗೆರೆ ಜಾನಕಮ್ಮ ಎನ್ನುವ ಲೇಖಕಿಯ ಸಾಲನ್ನು ಉದಾಹರಿಸುತ್ತಾ, ಕೆಲ ವಿಮರ್ಶಕರು ಭಾವಿಸಿದಂತೆ ಶೋಷಣೆಯ ವಿರುದ್ಧವಾದ ಪ್ರತಿಭಟನೆ ತೀರ ಇತ್ತೀಚಿನದಲ್ಲ ಎಂದು ವಾದಿಸುತ್ತಾರೆ. ಮುಂದುವರಿದು, ಸಂಚಿ ಹೊನ್ನಮ್ಮನನ್ನು ಪ್ರಸ್ತಾಪಿಸಿ ರಾಜಾಶ್ರಯದಲ್ಲಿ ಕವಿತೆ ರಚಿಸುತ್ತಿದ್ದ ಆಕೆ, ಹೆಣ್ಣಿನ ಬವಣೆಯನ್ನು ಅರಿತವಳಾಗಿಯೂ, ಗಂಡನ ಮನವರಿತು ನಡೆಯುವುದೇ ಹೆಣ್ಣಿಗೆ ಶ್ರೇಯಸ್ಕರ ಎಂದು ಬೋಧಿಸಿದ್ದರೆ, ಅದಕ್ಕೆ ಅವಳಿದ್ದ ಸಾಮಾಜಿಕ ಪರಿಸರವೇ ಕಾರಣ ಎನ್ನುತ್ತಾರೆ. ಅಂದರೆ ಅವಳಿದ್ದ ಸಾಂಪ್ರದಾಯಿಕ ವಾತಾವರಣದಲ್ಲಿ "ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು" ಎನ್ನುವುದಕ್ಕಿಂತ ಶಕ್ತವಾದ ಪ್ರತಿಭಟನೆಯನ್ನು ತೋರುವು

ದಕ್ಕೆ ಸಾಧ್ಯವಿರಲಿಲ್ಲ ಎನ್ನುವ ಅವರ ಅಭಿಪ್ರಾಯ ಅತ್ಯಂತ ಸಮಂಜಸವಾದುದಾಗಿದೆ. ಸ್ವಾತಂತ್ರ್ಯಾನಂತರ ಬರೆಯಲಾರಂಭಿಸಿದ ಎಚ್. ವಿ. ಸಾವಿತ್ರಮ್ಮ ಆಗಲೀ, ದೇವಾಂಗನಾ ಶಾಸ್ತ್ರಿ ಆಗಲೀ ಅಥವಾ ಈಚಿನ ವೀಣಾ ಶಾಂತೇಶ್ವರ ಆಗಲೀ, ತಮ್ಮ ಕೃತಿಗಳಲ್ಲಿ ವ್ಯಕ್ತ ಮಾಡುವ ಪ್ರತಿಭಟನೆ ಹಾಗೂ ಸ್ತ್ರೀಪರ ಕಾಳಜಿ ಹೊನ್ನಮ್ಮನಲ್ಲಿದ್ದ ಸ್ತ್ರೀಪರವಾದ ಎಚ್ಚರಕ್ಕಿಂತ ಭಿನ್ನ ಹಾಗೂ ಶಕ್ತವಾಗಿರುವುದಕ್ಕೆ, ಅವರಿಗೆ ಸಿಕ್ಕ ವಿದ್ಯಾಭ್ಯಾಸ ಹಾಗೂ ಸಾಂಸ್ಕೃತಿಕ ಬದುಕಿನಲ್ಲಾಗಿರುವ ಬದಲಾವಣೆಗಳೇ ಕಾರಣ ಎಂದು ಭಾವಿಸುವ ವಿಜಯಾ ಈ ಎರಡೂ ಬಗೆಯ ಲೇಖಕಿಯರನ್ನು ಭಿನ್ನ ನೆಲೆಯಲ್ಲಿಟ್ಟು ವಿವೇಚಿಸುತ್ತಾರೆ.

ತಿರುಮಲಾಂಬಾ, ರಾಜವಾಡೆ ಮುಂತಾದವರು ತಮ್ಮ ಬದುಕು ಮತ್ತು ವೃತ್ತಿಗಳಲ್ಲಿ ಬಂದ ವೈರುಧ್ಯಗಳನ್ನು ಹೇಗೆ ಧೈರ್ಯವಾಗಿ ಎದುರಿಸಿದರು ಎಂದು ವಿವರಿಸುತ್ತಾ, ವಿದ್ಯಾಭ್ಯಾಸದ ಫಲವಾಗಿ ಇವರಲ್ಲಿ "ವಿಧವಾ ಸಮಸ್ಯೆ"ಯ ಬಗ್ಗೆ ಮೂಡಿದ ಎಚ್ಚರವನ್ನು ಗುರುತಿಸುತ್ತಾರೆ. ದೇವಾಂಗನಾ ಶಾಸ್ತ್ರಿಯಂಥ ಸೂಕ್ಷ್ಮಸಂವೇದಿ ಲೇಖಕಿ ವೈಧವ್ಯದ ನರಕವನ್ನು ಸಶಕ್ತವಾಗಿ ಖಂಡಿಸುವುದರ ಮೂಲಕ ಹೇಗೆ ತಮ್ಮ ಮಿತಿಗಳಲ್ಲಿ ಕೂಡ ತಮ್ಮ ಅನುಭವಗಳಿಗೆ ಪ್ರಾಮಾಣಿಕ ಅಭಿವ್ಯಕ್ತಿ ಒದಗಿಸಿದರು ಎಂದು ಹೇಳುವಾಗ, ಹಂತಹಂತವಾಗಿ ರೂಪುತಳೆದ ಸ್ತ್ರೀಯರ ಪ್ರತಿಭಟನೆಯ ಬಗೆಗಿನ ವಿಜಯಾ ಅವರ ವಾದಕ್ಕೆ ಪುಷ್ಟಿ ಸಿಕ್ಕಂತಾಗುತ್ತದೆ.

ಹೀಗೆ ಸಾಂಪ್ರದಾಯಿಕವಾಗಿ ಯೋಚಿಸಿದ ಹೊನ್ನಮ್ಮನನ್ನೂ, ಇಂದಿನ ಲೇಖಕಿಯರನ್ನೂ ಭಿನ್ನ ನೆಲೆಗಳಲ್ಲಿಟ್ಟು ನೋಡುತ್ತಾ, ವಚನಕಾಲದಲ್ಲಿ ಹೆಣ್ಣಿಗೆ "ಮುಕ್ತಿ ತಂದುಕೊಡುವ ಕುಟುಂಬ"ವನ್ನು ತಿರಸ್ಕರಿಸಿ, ಪಾರಮಾರ್ಥಿಕ ಬದುಕಿಗೆ ನಡೆದ ಅಕ್ಕಮಹಾದೇವಿಯನ್ನು ಕುರಿತು ವಿವೇಚಿಸುತ್ತಾರೆ. ಅಂದಿಗೂ, ಇಂದಿಗೂ ಒಂದು ಬಗೆಯ ಅಚ್ಚರಿ ಹುಟ್ಟಿಸುತ್ತಾ ಇರುವ ಮಹಾದೇವಿ, ತನ್ನ ದಿಗಂಬರತ್ವವೇ ಮೊದಲಾಗಿ, ಹಲವು ವಿಷಯಗಳ ಬಗ್ಗೆ ಅನುಭವ ಮಂಟಪದಲ್ಲಿ ಬಸವಾದಿಗಳ ಎದುರು ಸಮಜಾಯಿಷಿ ನೀಡಿದ ನಂತರವೇ, ಅವಳನ್ನು ಆ ವೇದಿಕೆಗೆ ತಕ್ಕವಳೆಂದು ಸ್ವೀಕರಿಸಿದ್ದನ್ನು ನೋಡಿದರೆ ಅಂದೂ ಕೂಡ, ಸಾಮಾಜಿಕ ಸ್ಥಿತ್ಯಂತರವಾಗುತ್ತಿದ್ದ ಕಾಲದಲ್ಲೂ, ಹೆಣ್ಣಿನ ಬಗ್ಗೆ ಎಂಥ ಕಟ್ಟುಪಾಡು, ಪಕ್ಷಪಾತ ಧೋರಣೆ ಇತ್ತು ಎನ್ನುವುದು ವ್ಯಕ್ತವಾಗುತ್ತದೆ. ಒಂದು ವೇಳೆ ಹೆಣ್ಣು ಐಹಿಕ ನೆಲೆಯಲ್ಲಿ ಅಕ್ಕನಂತೆ ಸ್ವತಂತ್ರ ನಿರ್ಧಾರ ತಳೆದು ತಾನು, ಬೇಕಾದವರೊಡನೆ ಬೇಕಾದಂತೆ ಬದುಕಿದರೆ, ಈ ಸಮಾಜ ಅದನ್ನು ಯಾವ ರೀತಿ ಸ್ವೀಕರಿಸಬಲ್ಲುದು? ಐಹಿಕ ನೆಲೆಯಲ್ಲಿ ಹೆಣ್ಣಿಗೆ ಏಕೆ ಈ ಬಗೆಯ ಸ್ವಾತಂತ್ರ್ಯವಿಲ್ಲ? ಲೌಕಿಕ ಬದುಕಿನಲ್ಲಿ ಹೆಣ್ಣೊಬ್ಬಳು ಈ ರೀತಿ ಪರಿಪೂರ್ಣತೆ ಸಾಧಿಸಿದ್ದು ಇದೆಯೆ? ಎಂದು ಪ್ರಶ್ನಿಸುತ್ತಾರೆ. ಇದೇ ಪ್ರಶ್ನೆಯನ್ನು ಇಂಗ್ಲೀಷ್ ಸಾಹಿತ್ಯದಲ್ಲಿ ವರ್ಜೀನಿಯಾ ವುಲ್ಫ್ ಎಂಬ ಲೇಖಕಿ ಕೇಳುತ್ತಾಳೆ. ಇದುವರೆಗೂ ಯಾವ ಹೆಣ್ಣಾದರೂ ಒಂದು ದೇಹವಾಗಿ ತನಗೆ ಏನೇನು ಬಯಕೆ, ಕಾಮನೆಗಳಿವೆ ಎನ್ನುವುದನ್ನು ಪೂರ್ಣವಾಗಿ ತನ್ನ ಬದುಕಲ್ಲಾಗಲೀ, ಕೃತಿಯಲ್ಲಾಗಲಿ ವ್ಯಕ್ತಪಡಿಸಿದ್ದಾಳೆಯೆ? ಎನ್ನುವ ಆಕೆಯ ಪ್ರಶ್ನೆಯನ್ನು ಇವತ್ತಿಗೂ ಕೇಳುತ್ತಲೇ ಇದ್ದೇವೆ. "ಇತರರು ಕೋಳಿಯ ಮಾಂಸವನ್ನು ತಿಂದರೆ, ಮನೆಯೊಡತಿ ಕೊನೆಗುಳಿದ ಅದರ ಕಾಲನ್ನು ತಿನ್ನುತ್ತಾಳೆ" ಎನ್ನುವ ವರ್ಜೀನಿಯಾಳ ಮಾತಿನಲ್ಲಿ ಅರ್ಥವಿದೆ. ಗಂಡಸರಿಗೆ ಶೋಷಿಸುವುದು ರಕ್ತಗತವಾಗಿರುವಂತೆ, ಹೆಂಗಸರಿಗೆ ತನ್ನನ್ನು ಕೊಂದುಕೊಂಡು ಇತರರಿಗೆ ದೇವತಾ ಸ್ವರೂಪಳಂತೆ(ಏಂಜೆಲ್ ಇನ್ ದಿ ಹೌಸ್ — ವರ್ಜೀನಿಯಾ ವುಲ್ಫ್) ವರ್ತಿಸುವುದು ರಕ್ತಗತವಾಗಿರುವವರೆಗೆ ಈ ಪ್ರಶ್ನೆ ಬಹುಶಃ ಏಳುತ್ತಲೇ ಇರುತ್ತದೆ.

ಈ ಮೇಲಿನ ಪ್ರಶ್ನೆಯನು ಪರೋಕ್ಷವಾಗಿಯಾದರೂ ತಮ್ಮ ಕಾದಂಬರಿಗಳ ಮೂಲಕ ಕೇಳಿಕೊಂಡವರು ತ್ರಿವೇಣಿ. ಈ ಲೇಖಕಿ ಕುಟುಂಬದ ವರ್ತುಲದಲ್ಲೇ ಸಿಕ್ಕು ನರಳುವ, ಗಂಡಸಿನ ಕಾಮುಕ್ಕೆ, ಕ್ರೌರ್ಯಕ್ಕೆ, ಜಡ್ಡಿಗೆ ಆಹಾರವಾಗುವ ಹೆಣ್ಣುಗಳ ಒಳತೋಟಿಗಳನ್ನು ಹೇಗೆ ಭಿನ್ನವಾಗಿ ವ್ಯಕ್ತಪಡಿಸಿದರು ಎನ್ನುವುದನ್ನು ಗುರುತಿಸುವ ವಿಜಯಾ, ತ್ರಿವೇಣಿ ಒಬ್ಬ ಶ್ರೇಷ್ಠ ಕಾದಂಬರಿಕಾರ್ತಿ ಅಲ್ಲದಿರಬಹುದು— ಆದರೆ ಅವರ ಕಾದಂಬರಿಗಳು ಸ್ತ್ರೀಯರಿಂದ ರಚಿತವಾದ ಬರಹಗಳ ಅಧ್ಯಯನದ ಹಾದಿಯಲ್ಲಿ ಐತಿಹಾಸಿ

ಕವಾಗಿ ಅನನ್ಯವಾದುದಾಗಿವೆ ಎನ್ನುತ್ತಾರೆ, ಕೃತೀಯದರ್ಜೆಯ ಕಾದಂಬರಿಕಾರ್ತಿ ಎಂದು ಸುರೂಸಗಟಾಗಿ ತ್ರಿವೇಣಿಯನ್ನು ತಿರಸ್ಕರಿಸಿದ ನವ್ಯರಿಗಿಂತ ಭಿನ್ನವಾಗಿ ಯೋಚಿಸುವ ವಿಜಯಾ ಇಲ್ಲಿ ಅವರ ಕುರಿತು ಕೆಲವು ಸೂಕ್ಷ್ಮಗಳನ್ನು ಹೊರಗೆಡವಿದ್ದಾರೆ,

ಪ್ರಗತಿಪರ ಧೋರಣೆಯಿಂದ ಬರೆದ ಕಾರಂತ, ನಿರಂಜನ ಹಾಗೂ ಚದುರಂಗರ ಕೃತಿಗಳೂ ಇಲ್ಲಿ ಚರ್ಚಿತವಾಗಿವೆ, ಈ ಲೇಖಕರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಇತರ ಲೇಖಕರಿಂದ ಸೃಷ್ಟಿಯಾದ ಸ್ತ್ರೀ ಪಾತ್ರಗಳಿಗಿಂತ ಹೇಗೆ ಭಿನ್ನವಾಗಿ ರೂಪುಗೊಡವು ಎಂದು ಹೇಳುತ್ತ ಕಾರಂತರ ಕಾದಂಬರಿಗಳಲ್ಲಿ ಮೂಡಿಬರುವ ಗ್ರಾಮೀಣ ಹೆಣ್ಣುಮಕ್ಕಳಾದ ಪಾರೋತಿ, ಮೂಕಾಂಬು ಮುಂತಾದವರಲ್ಲಿ ಇರುವ ಗಟ್ಟಿತನ ಕಲಿತ ಹೆಣ್ಣುಮಕ್ಕಳ ಪಾತ್ರದಲ್ಲಿ ಇರದಿರುವುದು, ಅವರ ಅನುಭವ ಪ್ರಪಂಚ ಮತ್ತು ಪ್ರಗತಿಶೀಲತೆಯ ಮಿತಿಗಳ ಬಗ್ಗೆ ನಮ್ಮಲ್ಲಿ ಮೂಡಿಸುವ ಪ್ರಶ್ನೆಗಳನ್ನು ವ್ಯಕ್ತಪಡಿಸುತ್ತಾರೆ. ಹಾಗೆ ನಿರಂಜನ "ಅಭಯ", "ಕೊನೆಯ ಗಿರಾಕಿ" ಇನ್ನಿತರ ಕೃತಿಗಳನು ಚರ್ಚಿಸುತ್ತಾ ಅಲ್ಲಿ ಬರುವ ಸಂಸಮ್ಮ ಇತ್ಯಾದಿ ಸ್ತ್ರೀಯರು ವಸ್ತುಸ್ಥಿತಿಯ ಅರಿವುಳ್ಳವರು ಮತ್ತು ಈ ಅರಿವು ಅವರಿಗೆ ಜೀವನದ ಕಹಿಯಿಂದ ಬಂದದ್ದು ಹಾಗೇ ಇತರರು ತಮ್ಮಂತೆ ನರಳದಿರಲಿ ಎಂದು ಆಶ್ರಯವಾಗುವವರು. ಅಂದರೆ ಜೀವನದಲ್ಲಿ ಕಹಿ ಉಂಡೂ ಸಿನಿಕರಾಗದವರು. ಈ ಪಾತ್ರಗಳಲ್ಲಿರುವ ವಸ್ತುನಿಷ್ಠತೆಯನ್ನು ಮೆಚ್ಚುವ ವಿಜಯಾ ಮುಂದುವರಿದು ಚದುರಂಗರ "ವೈಶಾಖ" ಕೈಗೆತ್ತಿಕೊಳ್ಳುತ್ತಾರೆ. ಇಲ್ಲಿ ಬರುವ "ರುಕ್ಮಿಣಿ" ಹೇಗೆ ದಲಿತ ಹುಡುಗನಲ್ಲಿ ಅನುರಕ್ತಳಾಗಿ, ಆಕ್ರಮಣಶೀಲಳಾಗಬಲ್ಲಳು, ಸ್ವತಃ ತಾನು ತನ್ನ ಮಾವನಿಂದ ಅತ್ಯಾಚಾರಕ್ಕೊಳಗಾಗಿದ್ದರೂ, ತನಗಿಂತ ಮಾನಸಿಕವಾಗಿ ದುರ್ಬಲನಾದ ದಲಿತ ಹುಡುಗನನ್ನು ತನ್ನ ತೃಪೆಗಾಗಿ ಬಳಸಿಕೊಳ್ಳಬಲ್ಲಳು ಎನ್ನುವುದನ್ನು ಗಮನಿಸಿದಾಗ, "ಬಯಕೆಗೆ ಹೆಣ್ಣು ಗಂಡಿನ ಭೇದ ಮಾಡದ" ಚದುರಂಗರು "ಹೆಣ್ಣು ಒಂದು ರೀತಿಯಲ್ಲಿ ಗಂಡಿಗಿಂತಲೂ ಶ್ರೇಷ್ಠಳು, ಅವಳ ಮೇಲೆ ವಿಶೇಷ ಜವಾಬ್ದಾರಿಯಿದೆ" ಎಂದು ಹುಲಿಯಿಂದ ಪಾರುಮಾಡಿ ದರಿಯತ್ತ ತಳ್ಳುವ ನಿರಂಜನರಿಗಿಂತ ಚದುರಂಗ ಹೆಚ್ಚು ಪ್ರಗತಿಶೀಲರೇನೋ ಎಂದು ಅಭಿಪ್ರಾಯ ಪಡುತ್ತಾರೆ ವಿಜಯಾ,

ಒಟ್ಟಿನಲ್ಲಿ ಹೆಣ್ಣನ್ನು ಬರೀ "ಬೆದೆ ಕಡಸಾಗಿ" ನೋಡುತ್ತಾ ಬಂದಿರುವ ನವ್ಯ ಲೇಖಕರಿಗಿಂತ ಭಿನ್ನವಾಗಿ ಯೋಚಿಸಿದ ಈ ಲೇಖಕರನು ಈ ಕೃತಿಯಲ್ಲಿ ಚರ್ಚಿಸಿರುವುದು ಸಂದರ್ಭೋಚಿತವಾಗಿದೆ,

ಇನ್ನು ಈ ಸಂಕಲನದಲ್ಲಿರುವ "ವಿಧವಾ ಸಮಸ್ಯೆ" ಕುರಿತಾದ ಅನುವಾದಿತ ಲೇಖನ ಮಾಹಿತಿಪೂರ್ಣವಾಗಿದ್ದು ಎಲ್ಲರೂ ಓದಬೇಕಾದ ಲೇಖನವಾಗಿದೆ, ಮೇಲ್ನೋಟಕ್ಕೆ ಸರಳವಾಗಿ ಕಾಣುವ ಈ ಸಮಸ್ಯೆ ಮತ್ತು ಮರುವಿವಾಹ ಎಂಥ ಸಾಂಪ್ರದಾಯಿಕ ಇಕ್ಕಟ್ಟಿನಲ್ಲಿ ಸಿಕ್ಕಿದೆ ಎನ್ನುವುದು ಆ ಲೇಖಕಿ ನಡೆಸಿರುವ ಸಮೀಕ್ಷೆಯಿಂದ ಮನವರಿಕೆಯಾಗುತ್ತದೆ, ವೇದಕಾಲದಲ್ಲಿ ಪತಿಯ ಮರಣಾ ನಂತರ ಮೈದುನನನ್ನು ವರಿಸಲು (ಶಾಸ್ತ್ರೋಕ್ತವಾಗಿ) ಸಾಧ್ಯವಿದ್ದ, ನಿಯೋಗದಿಂದ ಮಕ್ಕಳನ್ನು ಪಡೆಯಲು ಸಾಧ್ಯವಿದ್ದ ಸ್ತ್ರೀಯರು, ಇಂದು ಈ ಅಣುಯುಗದಲ್ಲಿ ವಿದ್ಯಾವಂತೆಯರಾಗಿ, ಉದ್ಯೋಗಸ್ಥೆಯರಾಗಿದ್ದೂ ಮರುವಿವಾಹದ ಬಗ್ಗೆ ಮುಕ್ತವಾಗಿ ಮಾತನಾಡಲೂ ಹೆದರುತ್ತಾರೆಂದರೆ ಎಂಥ ವಿಪರ್ಯಾಸ!

ಹೀಗೆ ಜನಪದ ಕವಯಿತ್ರಿಯರು, ಅಕ್ಕಮಹಾದೇವಿ, ಇತರ ವಚನಕಾರ್ತಿಯರಿಂದ ಹಿಡಿದು ಇಂದಿನ ಸಾವಿತ್ರಮ್ಮ, ವೀಣಾ ಶಾಂತೇಶ್ವರರವರೆಗೆ ಎಲ್ಲರ ಸತ್ವ ಹಾಗೂ ದೌರ್ಬಲ್ಯಗಳನ್ನು ಗುರುತಿಸುತ್ತಾ ಮಹಿಳಾಸಾಹಿತ್ಯ, ಸಾಹಿತ್ಯ ಸಮ್ಮೇಳನಗಳ ಪ್ರಸ್ತುತತೆಯ ಬಗ್ಗೆ ತಮ್ಮದೇ ಆದ ನಿಲುವು ಮಂಡಿಸುತ್ತಾ, ಸಾಗುವ ವಿಜಯಾ ಅವರ ಈ ಕೃತಿಯಲ್ಲಿ "ಮಹಿಳಾ ಕಾವ್ಯ" ಕುರಿತು ಒಂದು ವಿಸ್ತೃತವಾದ ಚರ್ಚೆಯಿಲ್ಲದಿರುವುದೇ ಒಂದು ಸಣ್ಣ ಕೊರತೆ. ಕಾವ್ಯದ ವಿಪುಲ ಸೃಷ್ಟಿ ಸ್ತ್ರೀಯರಿಂದ ಆಗಿರದಿದ್ದರೂ ಕೆಲವು ಮುಖ್ಯ ಸಂಕಲನಗಳನ್ನಾದರೂ ಚರ್ಚಿಸಬಹುದಿತ್ತೇನೋ. ಅದನ್ನು ಅವರ ಮುಂದಿನ ಕೃತಿಯಲ್ಲಿ ನಿರೀಕ್ಷಿಸುತ್ತಾ ಈ ಕೃತಿ ಎಲ್ಲ ಎಚ್ಚೆತ್ತ ಸ್ತ್ರೀಯರು ಹಾಗೂ ಎಚ್ಚರಗೊಳ್ಳಬಯಸುವ ಸ್ತ್ರೀ ಪುರುಷರು ಓದಲೇಬೇಕಾದದ್ದು ಎಂದು ಹೇಳಿದರೆ ಅತಿಶಯವಿಲ್ಲ.

ಧ್ವನಿ ಎತ್ತಬಲ್ಲವೇ ನೊಂದ ಆತ್ಮಗಳು?

ಪ್ರೇಮಾವತಿ.

ಅಷ್ಟೇನು ಸುಂದರಿಯಲ್ಲದ ಕೃಷ್ಣವರ್ಣದ, ಮುಗ್ಧ ಮುಖದ ಹುಡುಗಿ ಗಿರಿಜಾ ಸಾಕಷ್ಟು ವರದಕ್ಷಿಣೆಯಿತ್ತು ತಂದೆತಾಯಿಗಳು ಆಕೆಯ ಮದುವೆಯನ್ನು ಮಾಡಿದರು. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಯಲ್ಲಿ ಆಕೆಯ ಬದುಕು ಸಾಗಿತು. ತಂದೆಯ ಮನೆಯಲ್ಲಿ ಸುಖವಾಗಿ ಬೆಳೆದವಳು. ಬದುಕಿನ ಯಾವುದೇ ಏರುಪೇರುಗಳನ್ನು ಕಂಡರಿಯದವಳು. ಮದುವೆಯಾಗಿ ಎರಡು ವರ್ಷಕ್ಕೆ ಒಂದು ಗಂಡುಮಗವೂ ಆಯಿತು. ಬದುಕು ಹೀಗೇ ಸಾಗಿತ್ತು ಗಂಡನ ಮನೆಯಲ್ಲಿ. ಮನೆಯ ಒಳಗೆ ಮಾತ್ರವಲ್ಲದೆ ಹೊರಗೆ ಗದ್ದೆಯಲ್ಲೂ ಕೆಲಸ ಮಾಡಬೇಕು. ಅತ್ತೆ, ಮಾವ, ಅತ್ತಿಗೆ, ಮೈದುನರ ತುಂಬಿದ ಮನೆ, ಗಿರಿಜಳಿಗೆ ಗಂಡನ ಒಂದೊಂದೇ ಗುಣಗಳು ಗೊತ್ತಾಗತೊಡಗಿದವು. ಇಸ್ಪೀಟು, ಜೂಜಾಟಗಳ ಹವ್ಯಾಸದಲ್ಲಿ ಮುಳುಗಿ ಹೋಗಿದ್ದ ಸೋಮಾರಿ ಆತ. ಹೆಂಡತಿಯ ಒಂದೊಂದೇ ಆಭರಣಗಳನ್ನು ಆತ ಕೇಳತೊಡಗಿದ. ಆಕೆ ಪ್ರತಿಭಟಿಸಿದರೆ ಹೊಡೆತಗಳ ಸುರಿಮಳೆ.

ಅಂದು ಗದ್ದೆಯಲ್ಲಿ ಸಂಜೆಯವರೆಗೂ ಕೆಲಸ ಮಾಡಿ ಮನೆಗೆ ಬಂದ ಗಿರಿಜಳಿಗೆ ಗಂಡನ ಕೆರಳಿದ ಮುಖ ಕಂಡು ಭೀತಿಯಾಯಿತು. ಬಂದವನೇ ಆಕೆಯ ಉಂಗುರಕ್ಕಾಗಿ ಪೀಡಿಸಿದ. ಆಕೆ ಪ್ರತಿಭಟಿಸಿದಾಗ ಮೈ ಮುರಿಯೆ ಹೊಡೆದು ಆಕೆಯನ್ನು ಹೊರಗೆ ಹಾಕಿದ. ತುಂಬು ಕುಟುಂಬದ ಜನರೆಲ್ಲ ಎಲ್ಲಿದ್ದರೋ ಈ ಸಂದರ್ಭದಲ್ಲಿ. ತಾಯಿಯ ಯಾವುದೇ ಗೋಳನ್ನರಿಯದ ಮಗು ತನ್ನ ಪಾಡಿಗೆ ತಾನು ನಿದ್ರಿಸುತ್ತಲಿತ್ತು. ದಟ್ಟವಾಗಿ ಹರಡಿದ್ದ ಕತ್ತಲೆಯಲ್ಲಿ ಗಿರಿಜಳಿಗೆ ಕಾಣಿಸಿದ್ದು ಒಂದೇ ದಾರಿ, ಮನೆಯ ಎದುರಿನ ಹೊಂಡ. ಬೆಳಗಾಗುವ ಹೊತ್ತಿಗೆ ಗಿರಿಜ ಹೆಣವಾಗಿದ್ದಳು. ವಿಷಯ ತಿಳಿದ . ಹೆತ್ತ ತಾಯಿ ತಂದೆಗಳು ಗೋಳಾಡಿದರು. ತಮ್ಮ ಮಗಳಿಗಾದ ಅನ್ಯಾಯದ ಬಗ್ಗೆ ಕೆರಳಿದರು.

ಆದರೆ ಗಿರಿಜಳಿಗಾದ ಅನ್ಯಾಯದ ಪೂರ್ಣ ಭಾಗ ಆಕೆಯ ಸತ್ತ ನಂತರದ ವ್ಯವಹಾರಗಳಲ್ಲೇ ಎಂದು ನನಗನಿಸುತ್ತದೆ. ಮುಗಿಸಲೇಬೇಕಾದ ಕಥೆ ಎಂಬಂತೆ ಇದನ್ನು ಒಂದು ವ್ಯವಹಾರವಾಗಿಸಿದರು. ಹೇಗಿದ್ದರೂ ಸತ್ತದ್ದು ಸತ್ತ ಹಾಗೆ ಇನ್ನೇನು ಬದುಕಿ ಬರಲು ಸಾಧ್ಯವೇ ಇದನ್ಯಾಕೆ ದೊಡ್ಡ ಹಗರಣ ಮಾಡಬೇಕು ಎಂಬುದು ಮಧ್ಯಸ್ಥಿಕೆಯವರ ಮಾತಾಯಿತು. ಪೋಲೀಸ್ ಅಧಿಕಾರಿಗಳಿಗೆ, ತಹಶಿಲ್ದಾರರ ಪ್ರಶ್ನೆಗಳಿಗೆಲ್ಲ ತಂದೆ ತಾಯಿಯ ಕಡೆಯವರು ಯಾವುದೇ ತಕರಾರನ್ನೇ ಎತ್ತಲಿಲ್ಲ. ಧ್ವನಿ ಎತ್ತಬೇಕಾದ ಹೆತ್ತ ಹೊಟ್ಟೆಯೇ ಮೌನವಾದಾಗ ಗಿರಿಜಳಿಗಾದ ಅನ್ಯಾಯವನ್ನು ಪ್ರತಿಭಟಿಸುವವರಾರು? ಆಕೆಯ ಸಾವಿಗಿಂತ ಆಕೆಗಾದ ಅನ್ಯಾಯ ಭೀಕರ ಎನ್ನಿಸುತ್ತದೆ. ಬದುಕಿದ್ದಾಗ ಸಿಗದ ನ್ಯಾಯ ಸತ್ತ ಮೇಲೂ ಸಿಗದಾಯಿತು. ಕಾರಣವೇ ಗೊತ್ತಿಲ್ಲದ ಆತ್ಮಹತ್ಯೆಯಾಯಿತು ಗಿರಿಜಳ ಸಾವು.

ಹೀಗೇ ಅದೆಷ್ಟೋ ಹೆಣ್ಣು ಮಕ್ಕಳು ಗಂಡಿನ ದೌರ್ಜನ್ಯಕ್ಕೆ ಒಳಗಾಗಿ ಸಾವನ್ನಪ್ಪುತ್ತಾರೆ. ಆದರೆ ಸಾವಿನ ಕಾರಣ ಮಾತ್ರ ಬೆಳಕಿಗೆ ಬಾರದು. ನೊಂದ ಆತ್ಮಗಳು ಧ್ವನಿ ಎತ್ತಬಲ್ಲವೆ? ಇಂತಹ ಅನ್ಯಾಯಗಳೆಲ್ಲ ಹೀಗೆ ನಡೆಯುತ್ತಾ ಇರಬೇಕೆ? ಇವುಗಳಿಗೆ ಪರಿಹಾರವೆಂತು? ಹೀಗಾಗಿಯೇ ಅನ್ಯಾಯ, ದೌರ್ಜನ್ಯಗಳಿಗೆ ಕಾರಣರಾದವರು ನಮ್ಮಲ್ಲಿ ಪ್ರಬಲರಾಗುತ್ತಾ ಸಾಗಿದ್ದಾರೆ.

ಕಾಶ್ಮೀರದ ದಿದ್ದಾ

ಡಾ|| ಎಚ್ ಎಸ್ ಉಷಾರಾಣಿ.

ಇಂದು ಉಗ್ರಗಾಮಿಗಳ ಚಟುವಟಿಕೆಗಳಿಂದ ಕಾಶ್ಮೀರ ತತ್ತರಿಸಿದೆ. ಭೌಗೋಳಿಕವಾಗಿ ಆಯ ಕಟ್ಟಿನ ಸ್ಥಳದಲ್ಲಿರುವ ಕಾಶ್ಮೀರಕ್ಕೆ ಈ ತೆರನಾದ ವಾತಾವರಣ ಹೊಸತಲ್ಲ ಎಂಬುದನ್ನು ಇತಿಹಾಸದ ಪುಟಗಳು ತಿಳಿಸುತ್ತವೆ. ಅದರಲ್ಲೂ ಮಹಿಳೆಯೊರ್ವಳು ಪ್ರಾಚೀನ ಕಾಲದಲ್ಲಿ ಅರ್ಧ ಶತಮಾನ ಕಾಲ ಕಾಶ್ಮೀರವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಳೆಂಬುದು ಅಚ್ಚರಿಯನ್ನುಂಟುಮಾಡುವ ಸಂಗತಿ.

ಸೈನಿಕ ಪಂಗಡಗಳಿಂದ ತಂತ್ರಿಗರು ಮತ್ತು ಏಕಾಂಗರ ನಡುವೆ ಅಧಿಕಾರಕ್ಕಾಗಿ ಪೈಪೋಟಿ ನಡೆಯುತ್ತಿದ್ದ ಕಾಲವದು (೧೦ನೆ ಶತಮಾನ). ತಂತ್ರಿ ಎಂಬುದು ಬುಡಕಟ್ಟಿನ ಹೆಸರು. ಇವರು ಕಾಲ್ದಳದಲ್ಲಿದ್ದರು. ಏಕಾಂಗರ ಕರ್ತವ್ಯಗಳೇನೆಂದು ನಿರ್ದಿಷ್ಟವಾಗಿ ಗೊತ್ತಾಗುವುದಿಲ್ಲ. ಅವರು ಅಂಗರಕ್ಷಕರ, ಅಲ್ಲದೆ ಇತ್ತೀಚಿನವರೆಗೂ ಕಂದಾಯ ವಸೂಲಿ ಕಾರ್ಯದಲ್ಲಿ ನೆರವಾಗುತ್ತಿದ್ದ "ಪಲ್ಟನ್ ನಿಜಾಮತ್" ರೆಜಿಮೆಂಟ್‌ನ ಕಾರ್ಯಗಳನ್ನು ಏಕಾಂಗರು ನಿರ್ವಹಿಸುತ್ತಿದ್ದರೆಂದು ವಿದ್ವಾಂಸರ ಅಭಿಮತ. ಇವರ ಪ್ರಭಾವದಿಂದಾಗಿ ಕ್ರಿ.ಶ. ೯೦೬ ರಿಂದ ೯೩೯ ರ ವರೆಗೆ ಎಂಟು ಮಂದಿ ಕಾಶ್ಮೀರದ ಸಿಂಹಾಸನವನ್ನಾಕ್ರಮಿಸಿದ್ದರು. ೯೩೯ ರಲ್ಲಿ ಅಧಿಕಾರಕ್ಕೆ ಬಂದ ಯಶಸ್ಕರನಿಂದ ಉತ್ಪಾಲರ ಆಳ್ವಿಕೆ ಕೊನೆಗೊಂಡಿತು. ಆತನ ಉತ್ತರಾಧಿಕಾರಿ ಸಂಗ್ರಾಮದೇವನನ್ನು ಮಂತ್ರಿ ಪರ್ವಗುಪ್ತ ಪದಚ್ಯುತಗೊಳಿಸಿ ೯೪೯ರಲ್ಲಿ ಪಟ್ಟಕ್ಕೆ ಬಂದ. ಈತನ ಮಗ ಕ್ಷೇಮಗುಪ್ತ. ಇವನ ಆಳ್ವಿಕೆಯ (೯೫೦–೯೫೮) ಮುಖ್ಯ ಘಟನೆಯೇ ದಿದ್ದಾಳೊಡನೆ ಆತನ ವಿವಾಹ. ದಿದ್ದಾಳ ಆಗಮನ ಕಾಶ್ಮೀರದ ರಾಜಕೀಯಕ್ಕೆ ಮೆರುಗನ್ನು ನೀಡಿತು.

ದಿದ್ದಾ ಲೊಹಾರದ (ಇಂದಿನ ಲೋಹರಿನ್ ಕಣಿವೆ. ಪೂಂಚ್ ಜಿಲ್ಲೆಗೆ ಸೇರಿದೆ.) ಸಿಂಹರಾಜನ ಮಗಳು. ಕಾಬೂಲಿನ ಶಾಹಿರಾಜ ಭೀಮನ ಮೊಮ್ಮಗಳು (ತಾಯಿಯ ಕಡೆಯಿಂದ). ಲೊಹಾರದ ಲೊಹಾರರು "ಭಟ್ಟಿ" ಎಂಬ ರಜಪೂತ ಪಂಗಡಕ್ಕೆ ಸೇರಿದವರು. (೧೦ ನೆ ಶತಮಾನದಲ್ಲಿ ಉತ್ತರ ಭಾರತದಾದ್ಯಂತ ರಜಪೂತ ಪಂಗಡಗಳ ಪ್ರಭಾವವಿದ್ದುದನ್ನು ಇದು ಸ್ಪಷ್ಟಪಡಿಸುತ್ತದೆ.) ಕ್ಷೇಮಗುಪ್ತ ದ್ವಾರಪಾಲಕ ಫಲ್ಗುಣನ ಮಗಳು ಚಂದ್ರಲೇಖಳನ್ನೂ ವರಿಸಿದ್ದ. ಆದಾಗ್ಯೂ ದಿದ್ದಾಳ ಪ್ರಭಾವ ಸಾಕಷ್ಟಿತ್ತು ಎಂಬುದನ್ನು ಆತನ ನಾಣ್ಯಗಳಲ್ಲಿರುವ "ದಿದ್ದಾಕ್ಷೇಮ" ಪದ ಪುಷ್ಟೀಕರಿಸುತ್ತದೆ. ಕ್ಷೇಮಗುಪ್ತ ೯೫೮ ರಲ್ಲಿ ಕಾಲವಾದಾಗ ಅಂದಿನ ಸಂಪ್ರದಾಯದಂತೆ ಸತಿಯನ್ನಾಚರಿಸುವ ಬದಲು, ದಿದ್ದಾ ಕಾಶ್ಮೀರ ಕಣಿವೆಯ ರಕ್ಷಣೆಗೆ ಟೊಂಕ ಕಟ್ಟಿ ನಿಂತಳು. ಪುತ್ರ ಅಭಿಮನ್ಯುವಿನ ರಾಜಪ್ರತಿನಿಧಿಯಾಗಿ ಆಡಳಿತ ಸೂತ್ರ ಹಿಡಿದ ದಿದ್ದಾಳ ಕಾರ್ಯ ವೈಖರಿಯನ್ನು ತಿಳಿಯಲು ಆಸಕ್ತಿ ಮತ್ತು ಕುತೂಹಲ ಇದೇ ತಾನೇ?

ರಾಜಪ್ರತಿನಿಧಿ ದಿದ್ದಾಳ ಸ್ಥಾನ ಭದ್ರವಾಗಿರಲಿಲ್ಲ. ಆಕೆ ಸಿಂಹಾಸನಕ್ಕೆ ಹಕ್ಕು ಚಲಾಯಿಸುವ ಸ್ಪರ್ಧಿಗಳನ್ನೆದುರಿಸಬೇಕಾಗಿತ್ತು. ನಾದಿನಿಯರ ಪುತ್ರರಾದ ಮಹಿಮನ್ ಮತ್ತು ಪಟಲ ರಾಜಕುಮಾರರಂತೆ ಅರಮನೆಯಲ್ಲೇ ಬೆಳೆದುದರಿಂದ ಸಿಂಹಾಸನಕ್ಕಾಗಿ ದಂಗೆ ಎದ್ದರು. ಅವರನ್ನು ಅರಮನೆಯಿಂದ ಹೊರಹಾಕಿದಳು. ಮಹಿಮನ್ ತನ್ನ ಮಾವ ಶಕ್ತಿಸೇನನ ಆಶ್ರಯ ಪಡೆದ. ಲಲಿತಪುರದ (ಇಂದಿನ ಲಿಡ್‌ಪುರ) ಬ್ರಾಹ್ಮಣರ ಬೆಂಬಲವು ಆತನಿಗಿದ್ದಿತು. ಇದರಿಂದ ದಂಗೆ ಉಲ್ಬಣಿಸುವುದನ್ನರಿತ ದಿದ್ದಾ, ಬ್ರಾಹ್ಮಣರಿಗೆ ಧನಕನಕಗಳನ್ನು ನೀಡಿ ತನ್ನತ್ತ ಒಲಿಸಿಕೊಂಡಳು. ಅಷ್ಟೇ ಅಲ್ಲದೆ ಮನುಷ್ಯ ಅಧಿಕಾರ ಬಯಸುವುದು ಸಹಜವೆಂಬುದನ್ನು

ಮನಗಂಡು ಬ್ರಾಹ್ಮಣರಿಗೆ ಉನ್ನತ ಹುದ್ದೆಗಳನ್ನು ನೀಡಿದಳು. ಯಶೋಧರನೆಂಬ ಬ್ರಾಹ್ಮಣ ಸೇನಾಧಿಪತಿ ಹುದ್ದೆಯನ್ನಲಂಕರಿಸಿದ. ಆಕೆಯ ವ್ಯಾವಹಾರಿಕ ಕುಶಲತೆಯೇ ಮಹಿಮನ್ ಮತ್ತು ಆತನ ಬೆಂಬಲಿಗರನ್ನು ಬೇರ್ಪಡಿಸಿತು. ಕೊನೆಗೆ ಚಾಣಾಕ್ಷತನದಿಂದ ಮಹಿಮನ್‌ನನ್ನು ಕೊನೆಗಾಣಿಸಿ ಪ್ರತಿಸ್ಪರ್ಧಿಯಿಂದ ಮುಕ್ತಳಾದಳು.

ಕಾಲಧರ್ಮಕ್ಕನುಗುಣವಾಗಿ ನೆರೆಹೊರೆಯ ರಾಜ್ಯಗಳ ಮೇಲೆ ಯುದ್ಧ ಮಾಡಬೇಕಿತ್ತು. ಯಶೋಧರನಿಗೆ ಶಾಹಿ ರಾಜ್ಯದ ಮೇಲೆ ದಂಡೆತ್ತಿ ಹೋಗಲು ಆದೇಶಿಸಲಾಗಿತ್ತು. ಅದರಂತೆ ದಂಡೆತ್ತಿ ಹೋದ ಯಶೋಧರನಿಗೆ ಶಾಹಿ ರಾಜ್ಯದ ತಕ್ಕಣ ಶರಣಾಗತವಾದ. ಇದರಿಂದ ಸಂಪ್ರೀತನಾದ ಯಶೋಧರ ರಾಜ್ಯ ಹಿಂತಿರುಗಿಸಿ ಕಪ್ಪಕಾಣಿಕೆ ಪಡೆದು ಕಾಶ್ಮೀರಕ್ಕೆ ಮರಳಿದ. ಆದರೆ ದಿಗ್ವಿಜಯಗೈದು ಹಿಂತಿರುಗಿದ ಯಶೋಧರನಿಗೆ ಸಂಭ್ರಮದ ಸ್ವಾಗತಕ್ಕೆ ಬದಲಾಗಿ ಗಡಿಪಾರು ಶಿಕ್ಷೆ ಕಾದಿತ್ತು. ಕಾರಣ ಯಶೋಧರನ ಏಳಿಗೆಯನ್ನು ಸಹಿಸದವರು ಆತನ ಗೈರು ಹಾಜರಿಯಲ್ಲಿ ಸತತವಾಗಿ ಚಾಡಿ ಚುಚ್ಚಿದರು. ತಕ್ಕಣನ ಬಗ್ಗೆ ಆತ ಸ್ವ-ವಿವೇಚನೆಯಿಂದ ಅನುಸರಿಸಿದ ಕ್ರಮ ಚಾಡಿಮಾತಿಗೆ ಪುಷ್ಟಿ ನೀಡಿತು. ದಿದ್ದಾಳ ನಿರ್ಧಾರ ಯಶೋಧರ ದಂಗೆ ಏಳಲು ಪ್ರೇರೇಪಿಸಿತು.

ಯಶೋಧರನ ದಂಗೆಯನ್ನಡಗಿಸಲು ಮಂತ್ರಿಶ್ರೇಷ್ಠ ನರವಾಹನನ ಸ್ವಾಮಿನಿಷ್ಠೆ ಪ್ರಮುಖ ಪಾತ್ರ ವಹಿಸಿತು. ದಂಗೆಕೋರರು ರಾಜಧಾನಿಗೆ ಮುತ್ತಿಗೆ ಹಾಕಿದಾಗ ನರವಾಹನ ಮತ್ತು ಆತನ ಅನುಯಾಯಿಗಳನ್ನು ಹೊರತುಪಡಿಸಿ ಉಳಿದವರೆಲ್ಲರೂ ಆಕೆಯ ಪಕ್ಷ ತ್ಯಜಿಸಿದ್ದರು. ಇಡೀ ಅರಮನೆಯಲ್ಲಿ ಒಮ್ಮೆ ದಿದ್ದಾ ಏಕಾಂಗಿಯಾಗಿದ್ದಳು. ಪ್ರಾರಂಭದಲ್ಲಿ ದಂಗೆಕೋರರ ಕೈ ಮೇಲಾಯಿತು. ಸೈನ್ಯದಲ್ಲಿದ್ದ ಏಕಾಂಗರು ತೋರಿದ ಪರಾಕ್ರಮದಿಂದಾಗಿ ವಿಜಯಲಕ್ಷ್ಮಿ ದಿದ್ದಾಳತ್ತ ವಾಲತೊಡಗಿದಳು. ಅಂತಿಮವಾಗಿ ನರವಾಹನನ ಕಾರ್ಯಾಚರಣೆಯಿಂದ ದಂಗೆಕೋರರ ಯೋಜನೆ ತಲೆಕೆಳಗಾದವು. ಯಶೋಧರ ಹಾಗೂ ಆತನ ಬೆಂಬಲಿಗರನ್ನು ಸೆರೆಹಿಡಿದು ನಿಷ್ಕರುಣೆಯಿಂದ ಗಲ್ಲಿಗೇರಿಸಲಾಯಿತು.

ಎಂತಹ ಪ್ರಾಮಾಣಿಕ ವ್ಯಕ್ತಿಗೂ ಈ ದುರ್ಜನರ ನಡುವೆ ಸಜ್ಜನರಿಗೆ ಎಂದಿಗೂ ಕಾಲವಿಲ್ಲ. ನರವಾಹನನಂತಹ ಪ್ರಾಮಾಣಿಕ ವ್ಯಕ್ತಿಗೂ ಈ ಗತಿ ಬಂದಿತು. ರಾಷ್ಟ್ರದ ಅಭದ್ರತೆಗೆ ಕಾರಣಕರ್ತರಾದ ಭ್ರಷ್ಟ ಹಾಗೂ ಅಪ್ರಾಮಾಣಿಕ ಅಧಿಕಾರಿಗಳನ್ನು ತೆಗೆದುಹಾಕಲು ಕೈಗೊಂಡ ಕ್ರಮದಿಂದಾಗಿ ರಕ್ಕ ಸೈನ್ಯದ ಮುಖ್ಯಸ್ಥನಾಗಿ, ಸಿಂಧು ರಾಜಭಂಡಾರಿಯಾಗಿ, ನರವಾಹನ "ರಾಜಾನಕ" ಎಂಬ ಬಿರುದು ಪಡೆದು ಮುಖ್ಯ 'ಸಲಹೆಗಾರನಾಗಿ(ಪ್ರಧಾನ ಮಂತ್ರಿ) ನೇಮಕಗೊಂಡರು. ನರವಾಹನನ ಅಭ್ಯುದಯದ ಬಗ್ಗೆ ಅಸೂಯೆಯಿಂದಿದ್ದ ಸಹೋದ್ಯೋಗಿಗಳಲ್ಲಿ ಸಿಂಧು ಒಬ್ಬ. ಅವನು ನರವಾಹನ ಸಿಂಹಾಸನವನ್ನು ಕಬಳಿಸಲು ಹವಣಿಸುತ್ತಿರುವನೆಂದು ಆತನತ್ತ ವಿಶೇಷ ಗಮನ ಹರಿಸಬೇಕೆಂದು ದಿದ್ದಾಳಿಗೆ ಎಚ್ಚರಿಕೆ ನೀಡಿದ. ಅಷ್ಟಕ್ಕೆ ತೃಪ್ತನಾಗದ ದಿನೇ ದಿನೇ ಅವರ ನಡುವಿನ ಅಂತರ ಹೆಚ್ಚಿಸಿದ. ಹೀಗಾಗಿ ನರವಾಹನ ದಿದ್ದಾಳಿಂದ ಅವಮಾನಿತನಾಗುವ ಪ್ರಸಂಗಗಳು ಹೆಚ್ಚಿದವು. ಕೊನೆಗೊಮ್ಮೆ ದುಷ್ಟರ ಪ್ರಪಂಚದಿಂದ ನಿರ್ಗಮಿಸಲು ನಿರ್ಧರಿಸಿದ ನರವಾಹನ ಆತ್ಮಹತ್ಯೆ ಮಾಡಿಕೊಂಡ.

ಶತ್ರುವೆಂದು ಪರಿಗಣಿಸಲ್ಪಟ್ಟವರು ವಿಷಮ ಪರಿಸ್ಥಿತಿಯಲ್ಲಿ ಮಿತ್ರರಾಗುತ್ತಾರೆ. ದಿದ್ದಾಳಿಗೆ ಇದರ ಅನುಭವವಾಗಿತ್ತು. ಉದಾ: ಅಂದು ಪ್ರಬಲ ಶಕ್ತಿಯಾಗಿ ಉದಯಿಸತೊಡಗಿದ್ದ ಡಾಮರರನು (ಜಹಗೀರುದಾರರು) ಬಗ್ಗು ಬಡಿಯಲು ಶತ್ರುವೆಂದು ಪರಿಗಣಿಸಲ್ಪಟ್ಟಿದ್ದ ಫಲ್ಗುಣನೇ ನೆರವಾದ. ಉತ್ತರ ಘೋಷ ಗ್ರಾಮದ ಸಂಗ್ರಾಮ ಡಾಮರನ ಮಕ್ಕಳ ಪ್ರಾಬಲ್ಯವನ್ನಡಗಿಸಲು ದಿದ್ದಾ ದಮನಕಾರಿ ನೀತಿಯನ್ನನುಸರಿಸಿದಾಗ ಅವರು ತಲೆ ತಪ್ಪಿಸಿಕೊಂಡು ತಮ್ಮ ಹುಟ್ಟೂರಿಗೆ ತೆರಳಿ, ದ್ವಾರಪಾಲಕ ಕಯ್ಯಕನನ್ನು ಕೊಂದ ಅವಮಾನವನ್ನು ಉಪೇಕ್ಷಿಸಿ ಡಾಮರರೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಮುಂದಾಗಿದ್ದಳು. ಆದರೆ ಇದು ತಾತ್ಕಾಲಿಕವಾಗಿತ್ತು. ದಂಗೆಕೋರರಿಗೆ ಹೆಚ್ಚಿನ ಡಾಮರ ಮುಖ್ಯಸ್ಥರ ಬೆಂಬಲವಿತ್ತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ರಕ್ಕ ಕಾಲವಾದ. ಆತನ ಸ್ಥಾನವನ್ನಲಂಕರಿಸಲು ಫಲ್ಗುಣನೆ ಸಮರ್ಥ ವ್ಯಕ್ತಿ ಎಂಬ ಅರಿವು ಆಕೆಗಾಯಿತು. ಪೂಂಚ್‌ನಲ್ಲಿದ್ದ ಫಲ್ಗುಣನಿಗೆ ಕರೆ ಕಳುಹಿಸಿದಳು.

ದಿದ್ದಾ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿರುವ ವಿಚಾರ ತಿಳಿದ ಫಲ್ಗುಣ ತನಗಾದ ಅವಮಾನವನ್ನು ಮರೆತು (ಕ್ಷೇಮಗುಪ್ತ ಮಡಿದಾಗ ಆತನ ಮಾವ ಹಾಗೂ ಪ್ರಧಾನಿ ಫಲ್ಗುಣ ಸಿಂಹಾಸನವನ್ನಾಕ್ರಮಿಸಲು ಯತ್ನಿಸುತ್ತಿರುವನೆಂಬ ಪಿತೂರಿ ನಡೆಸಿದಾಗ, ಸವತಿಯ ತಂದೆಯ ಬಗ್ಗೆ ಅಸೂಯೆಯಿಂದಿದ್ದ ದಿದ್ದಾ ಆ ಸುದ್ದಿಯನ್ನು ನಂಬುವಂತಾಗಿತ್ತು. ಇದರ ಬಗ್ಗೆ ಸುಳಿವು ಸಿಕ್ಕಿದೊಡನೇ ತಡ ಫಲ್ಗುಣ ಸ್ವತಃ ನಿವೃತ್ತಿ ಬಯಸಿ ರಾಜಧಾನಿಯಿಂದ ಹೊರಟಿದ್ದ. ಅಂತಹವನನ್ನು ಶಂಕಿಸಿ ಕರೆತರಲು ಆದೇಶ ನೀಡಿದಾಗ ರೋಷಾವೇಶದಿಂದ ರಾಜಧಾನಿಗೆ ಹಿಂತಿರುಗಿ ಬರುತ್ತಿದ್ದ ಫಲ್ಗುಣ ಮಾರ್ಗ ಮಧ್ಯದಲ್ಲಿ ತನ್ನ ನಿಲುವು ಬದಲಾಯಿಸಿ ಪೂಂಚ್‌ಗೆ ತೆರಳಿದ್ದ.) ಆಕೆಗೆ ಸಹಾಯ ಮಾಡಲು ಮುಂದಾದ ಆತನ ಶಕ್ತಿ ಸಾಮರ್ಥ್ಯಗಳಿಂದಾಗಿ ಡಾಮರರ ಉಪಟಳದಿಂದ ತಾತ್ಕಾಲಿಕವಾಗಿ ಪಾರಾಗುವಂತಾಯಿತು. ಪರಿಣಾಮವಾಗಿ ಹಲವು ಕಾಲ ರಾಜ್ಯದಲ್ಲಿ ನೆಮ್ಮದಿಯುಂಟಾಯಿತು.

ದಿದ್ದಾ ತನ್ನ ಪತಿಯ ಮರಣದ ಬಳಿಕ ಚಾರಿತ್ರ್ಯಕ್ಕೆ ಪ್ರಾಧಾನ್ಯತೆ ನೀಡಿರಲಿಲ್ಲ. ಆಕೆ ಖಾಸಗಿ ಜೀವನದಲ್ಲಿ ಸ್ವೇಚ್ಛಾಚಾರಿಯಾಗಿದ್ದಳು. ಸ್ವಚ್ಛಂದ ಪ್ರವೃತ್ತಿಗೆ ಲಿಂಗ ಭೇದವಿಲ್ಲ ತಾನೆ! ಹಾಗಾಗಿ ಅಧಿಕಾರಿಗಳಲ್ಲೂ ನೈತಿಕ ಮಟ್ಟ ಕುಸಿಯಿತು. ಇದರ ಪ್ರಭಾವ ಪ್ರಜೆಗಳ ಮೇಲುಂಟಾಯಿತು. ದಬ್ಬಾಳಿಕೆಯಿಂದ ಕೂಡಿದ ಆಡಳಿತದಿಂದಾಗಿ ಪ್ರಜೆಗಳು ರೋಸಿ ಹೋಗಿದ್ದರು.


ಮಹಿಳೆಯರಲ್ಲಿ ಸರ್ವೆ ಸಾಮಾನ್ಯವಾಗಿ ಕಂಡು ಬರುವ ಧಾರ್ಮಿಕ ಶ್ರದ್ಧೆ ದಿದ್ದಾಳಲ್ಲಿ ಅಭಾವ ವೈರಾಗ್ಯದಂತಿತ್ತು. ಅಭಿಮನ್ಯು ಹದಿನಾಲ್ಕು ವರ್ಷಗಳ ಕಾಲ (೯೫೮–೯೭೨) ಅಧಿಕಾರದಲ್ಲಿದ್ದು ಮರಣ ಹೊಂದಿದಾಗ ಆಕೆ ವಿರಕ್ತಳಾದಳು. ಪುತ್ರ ಶೋಕದಿಂದಾಗಿ ಆಕೆ ಕೆಲವು ಕಾಲ ದೈವ ಭಕ್ತಳಾಗಿದ್ದಳು. ಮೊಮ್ಮಗ ನಂದಿಗುಪ್ತನನ್ನು ಸಿಂಹಾಸನಕ್ಕೆ ತಂದು ಭಕ್ತಿ-ಭಾವೋದ್ರೇಕದಿಂದ ಕೂಡಿದ ಜೀವನವನ್ನಾರಂಭಿಸಿದಳು. ಈ ಅವಧಿಯಲ್ಲಿ ಆಕೆಗೆ ಚೈತನ್ಯ ತುಂಬಿದವನು ಸಿಂಧುವಿನ ಸಹೋದರ ಭುಯ್ಯ. ದಿದ್ದಾಳ ಸಂಧಾರ್ಮಿತ ಜೀವನದಿಂದಾಗಿ ಅನೇಕ ಮಠಗಳು ದೇವಾಲಯಗಳು ಮತ್ತು ವಿಹಾರಗಳು ಶಂಕುಸ್ಥಾಪನೆ ಕಂಡವು. ವಿವಿಧೆಡೆಗಳಲ್ಲಿ ಒಟ್ಟು ೬೪ ಕಟ್ಟಡಗಳಿಗೆ ಶಿಲಾನ್ಯಾಸ ಕಾರ್ಯ ನೆರವೇರಿಸಿದಳೆಂದು ಪ್ರತೀತಿ ಇದೆ. ಅವುಗಳಲ್ಲಿ ದಿದ್ದಸ್ವಾಮಿ ವಿಷ್ಣು ದೇವಾಲಯ, ದಿದ್ದಾಪುರ ಮತ್ತು ಕನಕಪುರ ಪಟ್ಟಣಗಳು ಮತ್ತು ದಿದ್ದಾಮಠ ಮುಖ್ಯವಾದವು. ವಿಹಾರಗಳ ನಿರ್ಮಾಣದಿಂದಾಗಿ ಹನ್ನೊಂದನೆ ಶತಮಾನದವರೆಗೂ ಬೌದ್ಧಧರ್ಮ ರಾಜಾಶ್ರಯ ಪಡೆದಿತ್ತೆಂಬುದು ನಿರ್ವಿವಾದ. ತಾರಾಭೃಕುಟಿಯನ್ನೊಳಗೊಂಡ ಬೋಧಿಸತ್ವನ ಶಿರದ ಮೇಲೆ ಧ್ಯಾನಿ ಬುದ್ಧನಿರುವ ಕಂಚಿನ ಪ್ರತಿಮೆ ದೊರೆತಿದೆ.

ರಾಜಪ್ರತಿನಿಧಿಯಾಗಿದ್ದ ದಿದ್ದಾ ವಾಸ್ತವವಾಗಿ ಕಾಶ್ಮೀರ ಕಣಿವೆಯ ಒಡತಿಯಾದುದು ಸ್ವಾರಸ್ಯಕರವಾಗಿದೆ. ೯೫೮–೯೭೨ ರವರೆಗೆ ಆಡಳಿತ ನಿರ್ವಹಿಸುತ್ತಿದ್ದ ದಿದ್ದಾಳಲ್ಲಿ ಅಧಿಕಾರ ದಾಹವಿದ್ದುದು ಸಹಜ. ಹಾಗಾಗಿ ತನ್ನ ಹಾದಿಯಲ್ಲಿ ಮುಳ್ಳಿನಂತಿದ್ದ ಮೊಮ್ಮಕ್ಕಳಾದ ನಂದಿಗುಪ್ತ (೯೭೨–೯೭೩), ತ್ರಿಭುವನ (೯೭೩–೯೭೫) ಮತ್ತು ಭೀಮ ಗುಪ್ತರನ್ನು (೯೭೫–೯೮೧) ಅಭಿಚಾರದಿಂದ ನಿವಾರಿಸಿದಳು. ಫಲ್ಗುಣ ಮರಣ ಹೊಂದಿದ. ಸಿಂಹಾಸನಕ್ಕಿದ್ದ ಪ್ರತಿಸ್ಪರ್ಧಿಗಳನ್ನು ಹತ್ತಿಕ್ಕಿದ ಬಳಿಕ ಅಧಿಕಾರ ಆಕೆಯ ಕೈ ಸೇರಿತ್ತು. ಹೀಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ದಿದ್ದಾ ಶತಮಾನ ಕಾಲ ರಾಜಕೀಯ ರಂಗದಲ್ಲಿ ಮುಂದುವರಿಯುವಂತಾಯಿತು.

ಸಾಮ್ರಾಜ್ಞಿ ದಿದ್ದಾಳ ಆಳ್ವಿಕೆಯಲ್ಲಿ ತುಂಗನ ಪ್ರಭಾವ ಹೆಚ್ಚಾಗಿತ್ತು. ಗೋಪಾಲಕರಾಗಿದ್ದ ತುಂಗ ಹಾಗೂ ಆತನ ಐವರು ಸಹೋದರರು ಭೀಮ ಗುಪ್ತನ ಕಾಲದಲ್ಲೇ ಬಂದಿದ್ದರು. ದಿದ್ದಾಳ ವಿಶ್ವಾಸಕ್ಕೆ ಪಾತ್ರನಾದ ತುಂಗ ಹರಿಕಾರನ ಹುದ್ದೆಯಿಂದ ಯಶಸ್ಸಿನ ಮೆಟ್ಟಲೇರತೊಡಗಿದ. ಇದು ಉಚ್ಚಾಟಿಸಲ್ಪಟ್ಟಿದ್ದ ಅಧಿಕಾರಿಗಳನ್ನು ಕೆರಳಿಸಿತು. ಆದರೆ ತುಂಗನ ಶೌರ್ಯ ಮತ್ತು ದಿದ್ದಾಳ ಕುಯುಕ್ತಿ ಪದಚ್ಯುತ ಅಧಿಕಾರಿಗಳ ಯೋಜನೆಯನ್ನು ನಿಷ್ಕ್ರಿಯಗೊಳಿಸಿದವು ಉದಾಹರಣೆಗೆ, ಅತೃಪ್ತ ಅಧಿಕಾರಿಗಳು ಪಿತೂರಿ ನಡೆಸಿ ಲೋಹಾರದ ವಿಗ್ರಹರಾಜ (ಸಹೋದರನ ಮಗ) ಕಾಶ್ಮೀರದ ಮೇಲೆ ದಾಳಿ ಮಾಡಲು ಪ್ರೇರೇಪಿಸಿದರು

19ನೇ ಪುಟ ನೋಡಿ.

ಮದುವೆಯಿಲ್ಲದ ಹುಡುಗಿ



ಮೂವತ್ತು ದಾಟಿದರೂ
ಮದುವೆಯಿಲ್ಲದ ಹುಡುಗಿ
ಸದಾ ನಿಡುಸುಯ್ಯುತ್ತಾಳೆ.

ಬೆಳಗಾಗೆದ್ದು ಹೊರಬಂದರೆ
ಎದುರು ಮನೆ ಸೂರಲ್ಲಿ
ಗುಬ್ಬಚ್ಚಿ ಗುಕ್ಕಿಡುತ್ತಿರುವುದ ಕಂಡು
ದುಃಖಿಸುತ್ತಾಳೆ.

ಮೊನ್ನೆ ಮೊನ್ನೆ ತಾನೇ, ತನ್ನ ಕಣ್ಣೆದುರೇ
ದೊಡ್ಡ ಹಸು ಈದಿದ್ದ
ಪುಟ್ಟ ಗೌರಿಯ ಹೊಟ್ಟೆಯುಬ್ಬಿ
ಕೆಚ್ಚಲಿಳಿಬಿದ್ದಿರುವುದ ಕಂಡು
ತುಟಿ ಕಚ್ಚುತ್ತಾಳೆ.

ರಾತ್ರಿ ಥಕ್ಕನೆ ಎಚ್ಚರಾಗಿ ಕಣ್ಬಿಟ್ಟರೆ
ಹಾಳು ಗೋಡೆಯ ಮೇಲೆ
ಹಿಂದೆ ತತ್ತಿ ಹೊತ್ತ ಜಿರಲೆ
ಮೇಲೇರಲು ತಿಣುಕಾಡುತ್ತಿರುವುದ ಕಂಡು
ಮಂಕಾಗುತ್ತಾಳೆ.

ಹಠಾತ್ತಾಗಿ ರಸ್ತೆಯಲ್ಲಿ ಸಿಕ್ಕ ಹಳೆ ಗೆಳತಿ
ಎತ್ತಿಕೊಂಡಿದ್ದ ತನ್ನ ಕೈಗೂಸಿಗೆ
ಮುತ್ತಿಕ್ಕಿದ್ದ ಕಂಡು
ಅತ್ತೇ ಬಿಡುತ್ತಾಳೆ.

ಹೀಗೆ ಎಲ್ಲೆಲ್ಲೂ
ಸೃಷ್ಟಿಯನ್ನೇ ಕಂಡು
ತನ್ನ ದೃಷ್ಟಿಯನ್ನೇ ದೂಷಿಸುತ್ತಾಳೆ.

ಸಾಧಾರಣ ರೂಪು
ವರದಕ್ಷಿಣೆ ಕೊಡಲಾಗದ ಸ್ಥಿತಿ
ಆರ್ಥಿಕ ಅಸ್ಥಿರತೆಯಲ್ಲಿ
ಜೀವ ಸಹಜ ತುಡಿತಗಳು
ಬಾಡಿ ಹೋಗುತ್ತಿರುವಾಗಲೂ
ಕಾಣದ ರಾಜಕುಮಾರನ
ಹಗಲುಗನಸು ಕಾಣುತ್ತಾ
ಬೆಚ್ಚಗಾಗುತ್ತಾಳೆ.

ಇಂದಿರಾ ಕನಕೇಶ್

ಸಂಗಾತಿಯ ಆಯ್ಕೆ ಸ್ವಾತಂತ್ರ್ಯ

ಪಿ. ಆರ್. ಸಾವಿತ್ರಿ.

ಜೀವನದಲ್ಲಿ ವಿವಾಹವೊಂದು ಪವಿತ್ರ ಬಾಂಧವ್ಯ, ಹೆಣ್ಣು ಗಂಡುಗಳು ಪರಸ್ಪರ ಸಮ್ಮತಿಸಿ ಆಗಬೇಕಾದ ಕಾರ್ಯ. ಜೀವನದುದ್ದಕ್ಕೂ ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು, ಒಬ್ಬರ ಭಾವನೆಗಳಿಗೆ ಮತ್ತೊಬ್ಬರು ಸ್ಪಂದಿಸಿ, ಪರಸ್ಪರ ತ್ಯಾಗ, ಸಹಕಾರದಿಂದ ಜೀವನಪರ್ಯಂತ ಸಹಬಾಳ್ವೆ ನಡೆಸಿದಾಗ ಜೀವನ ಮಧುರವಾಗುತ್ತದೆ.

ಹೀಗೆ ಬದುಕಿನ ಪ್ರಮುಖ ಘಟ್ಟವಾದ ವೈವಾಹಿಕ ಕ್ರಿಯೆಯಲ್ಲಿ ನಮ್ಮ ಎಷ್ಟು ಹೆಣ್ಣು ಮಕ್ಕಳಿಗೆ ತಮ್ಮ ಜೀವನ ಸಂಗಾತಿಯ ಆಯ್ಕೆಯ ಸ್ವಾತಂತ್ರ್ಯವಿದೆ ಎಂಬುದು ನಮ್ಮನ್ನೇ ನಾವು ಕೇಳಿಕೊಳ್ಳಬೇಕಾದ ಗಮನಾರ್ಹ ಪ್ರಶ್ನೆ. ಹಿಂದೆಲ್ಲಾ ಬಾಲ್ಯ ವಿವಾಹದಲ್ಲಿ ಹೆಣ್ಣಿಗಿರಲಿ, ಗಂಡಿಗೂ ಆಯ್ಕೆಯ ಪ್ರಶ್ನೆಯೇ ಇಲ್ಲದೆ ಪೋಷಕರೆ ಮಕ್ಕಳ ಭವಿಷ್ಯ ನಿರ್ಧರಿಸುತ್ತಿದ್ದರು. ನಮಗೆ ಬೇಕಾದವರನ್ನು ಕೈ ಹಿಡಿಯಬೇಕು ಎಂಬುದಕ್ಕಿಂತ ಕೈ ಹಿಡಿದವರೊಂದಿಗೆ ಹೊಂದಿಕೊಂಡು ಬಾಳ್ವೆ ಸಾಗಿಸಬೇಕು ಎಂಬುದು ನಮ್ಮ ಹಿಂದೂ ಪರಂಪರೆಯಲ್ಲಿ ರಕ್ತಗತವಾಗಿ ಹೋಗಿದೆ. ಆದರೀಗ ಮುಂದುವರೆಯುತ್ತಿರುವ ಸಮಾಜದಲ್ಲಿ ಬಾಲ್ಯವಿವಾಹ ಕಾನೂನು ಬಾಹಿರವಾಗಿದೆ.

ಸಂಪ್ರದಾಯದ ಕಟ್ಟು ಕಟ್ಟಳೆಗಳಿಗೆ ಭದ್ರವಾಗಿ ಅಂಟಿಕೊಂಡ ನಾವು ಮುಂದುವರಿಯುತ್ತಿದ್ದೇವೆ ಎಂದು ಮೇಲಿಂದ ಮೇಲೆ ಹೇಳಿಕೊಳ್ಳುವಂತಹ ಸಮಾಜದಲ್ಲಿ ವಿವಾಹದ ವಿಚಾರಗಳಲ್ಲಿ ಎಷ್ಟರ ಮಟ್ಟಿಗೆ ಬದಲಾಗಿದ್ದೇವೆ? ಹೆಣ್ಣನ್ನು ನೋಡುವುದಕ್ಕಾಗಿಯೇ ಆಧುನಿಕತೆಯ ನೆರಳಿನಲ್ಲಿಯೂ ಒಂದು ಸನ್ನಿವೇಶವನ್ನು ಸೃಷ್ಟಿಸಿ ಬಿಡುತ್ತೇವೆ. ಪ್ರದರ್ಶನದ ವಸ್ತುವಾದ ಹೆಣ್ಣು ಅಲ್ಲಿ ನೆರೆದ ಎಲ್ಲ ಕಣ್ಣುಗಳ ಪರಿಶೀಲನೆಗೆ ಆ ಕ್ಷಣಕ್ಕೆ ಆಹಾರವಾಗಿಬಿಡುತ್ತಾಳೆ!

ಇಲ್ಲೆಲ್ಲ ಹಿರಿಯರ ಮಾತಿಗೆ ಪ್ರಾಧಾನ್ಯತೆ ನಿಜ. ಆದರೆ ಗಂಡಿನ ಒಪ್ಪಿಗೆ ಸಹ ಹೆಚ್ಚು ಪ್ರಮುಖವಾಗುತ್ತದೆ. ಹೆಣ್ಣಿಗೆ ಇಷ್ಟವಿರಲಿ ಇಲ್ಲದಿರಲಿ ಹಿರಿಯರು ಒಪ್ಪಿದ ಮೇಲೆ ಅದಕ್ಕಿಂತ ಹೆಚ್ಚಾಗಿ ವರ ಒಪ್ಪಿದ ಮೇಲೆ ಒಪ್ಪುವುದು ಸಹಜ ಹಾಗೂ ಅನಿವಾರ್ಯವಾಗಿಬಿಡುತ್ತದೆ. ಪೋಷಕರ ಅಧಿಕಾರವಾಣಿ ಅನೇಕ ಕಡೆ ಚುರುಕಾಗುತ್ತದೆ.

ಎಷ್ಟೇ ವಿದ್ಯಾವಂತ ಸ್ತ್ರೀಯರಾದರೂ ಸಹ ನಾವು ಒಪ್ಪಿದವರನ್ನು ವಿವಾಹ ಆಗುವುದಕ್ಕಿಂತ ನಮ್ಮನ್ನು ಬಹಳ ಮೆಚ್ಚಿದವರನ್ನು ವಿವಾಹವಾದರೆ ಹೆಚ್ಚು ಸುಖವಾಗಿದ್ದೇವು ಎಂಬೆಲ್ಲ ತರ್ಕಗಳೊಂದಿಗೆ ಗಂಡಿಗೆ ಪ್ರಾಮುಖ್ಯತೆ ನೀಡುತ್ತಾರೆ. ಎಂದರೆ ಇಲ್ಲಿ ಅಭಿರುಚಿ, ಆಯ್ಕೆ, ಪ್ರೀತಿ-ಪ್ರೇಮ ಎಲ್ಲ ಗಂಡಿನ ಸಹಜ ಸ್ವತ್ತು ಎಂಬಂತೆ ಭ್ರಮಿಸಿ ಬಿಟ್ಟಾಗ ತಮ್ಮ ಆಸೆ–ಆಕಾಂಕ್ಷೆ ಕನಸುಗಳೆಲ್ಲ ಭ್ರಮನಿರಸನವಾಗುವುದಕ್ಕೆ ಹಾದಿ ಮಾಡಿಕೊಟ್ಟಂತಾಗುತ್ತವೆ.

ಇನ್ನು ಸಾಂಪ್ರದಾಯಿಕವಲ್ಲದ ಸಜಾತಿ ಹಾಗೂ ಅಂತರಜಾತಿ ಪ್ರೇಮವಿವಾಹಗಳ ಬಗ್ಗೆ ನೋಡಿದಾಗ ಇಬ್ಬರೂ ಪರಸ್ಪರ ಒಪ್ಪಿ ಆಗುವ ವಿವಾಹಗಳು ಎಂಬುದೇನೋ ನಿಜ. ಆದರೆ ಸೂಕ್ಷ್ಮವಾಗಿ ಗಮನ ಹರಿಸಿದಾಗ ಎಷ್ಟರಮಟ್ಟಿಗೆ ಹೆಣ್ಣು ತನ್ನ ಸಂಗಾತಿಯ ಆಯ್ಕೆಯನ್ನು ತಾನೇ ಮಾಡಿಕೊಳ್ಳಬಲ್ಲಳು? ಎಷ್ಟೇ ವಿದ್ಯಾವಂತ ಹೆಣ್ಣಾದರೂ ತಾನಾಗಿ ಇಚ್ಛಿಸಿದ ಗಂಡನ್ನು ಕುರಿತಾಗಿ ಧೈರ್ಯವಹಿಸಿ "ನಿಮ್ಮನ್ನು ಪ್ರೀತಿಸುತ್ತೇನೆ" ಎಂದು ಹೇಳಲು ಸಂಕೋಚಪಡುತ್ತಾಳೆ. ಇದಕ್ಕೆ ಅಪವಾದಗಳಿಲ್ಲವೆಂದಲ್ಲ, ಆದರೆ ಬೆರಳೆಣಿಕೆಯ ಸ್ಥಿತಿ ಮಾತ್ರ. ಗಂಡು ತನ್ನ ಅನಿಸಿಕೆಯನ್ನು ಹೇಳಿದಂತೆ ಹೆಣ್ಣಿಗಿನ್ನೂ ಸಾಧ್ಯವಾಗದೇ ಹೋಗಿದೆ. ಹೆಣ್ಣಿಗೆ ಇಷ್ಟವಿರಲಿ ಬಿಡಲಿ ಒಲಿಸಿಕೊಳ್ಳುವ ಪ್ರಯತ್ನ, ಸಾಹಸ ಗಂಡು ಮಾಡುತ್ತಾನೆ. ನಿಜ

ಜೀವನದ ಜೊತೆಗೆ ಕಥೆ, ಕಾದಂಬರಿ, ಸಿನಿಮಾ ಪ್ರಪಂಚ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಏಕ ಮುಖವಾಗಿ ಹೆಣ್ಣಿಗಷ್ಟೇ ಇಷ್ಟವಾದಾಗ ಆಕೆ ಬಾಯಿ ತೆರೆದು-ಸೂಚಿಸಿಯಾಳೆ? ಖಂಡಿತ ಇಲ್ಲ. ತನ್ನೆಲ್ಲ ಭಾವನೆಗಳನ್ನು ಅದುಮಿ ಹರಳುಗಟ್ಟಿಸುತ್ತಾಳೆಯೇ ವಿನಃ ಅರಳಿಸುವ ಪ್ರಯತ್ನದ ಸಾಹಸ ಅಪರೂಪ. ಇದಕ್ಕಾಗಿ ಜೀವನ ಪರ್ಯಂತ ಕೊರಗಿ ತನ್ನನ್ನು ತಾನೆ ಶಪಿಸಿಕೊಳ್ಳುತ್ತಾಳೆಂಬುದು ನಿಜ. ಹೆಣ್ಣಿನ ಮನಸ್ಥಿತಿ ಬದಲಾಗಿ ತನ್ನ ಆಸೆ-ಆಕಾಂಕ್ಷೆಗಳನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳುವಂತಹ ಸ್ಥಿತಿಯೊದಗಬೇಕು. ಜನ್ಮತಹ ಬಂದ ನಾಚಿಕೆ ಮುಜುಗರ, ಸಂಕೋಚ, ಅನವಶ್ಯಕ ಭಯ ಅತಿಯಾಗದೇ ಮಿತಿಯಲ್ಲಿದ್ದು ತನ್ನ ವ್ಯಕ್ತಿತ್ವಕ್ಕೊಂದು ಅರ್ಥ ಬರಿಸಿಕೊಳ್ಳುವಂತಹ ಆರೋಗ್ಯಕರ ಸ್ಥಿತಿ ಹೆಣ್ಣಿನದಾಗಬೇಕು. ತನ್ನ ಜೀವನ ಸಂಗಾತಿಯನ್ನು ಸ್ವತಃ ತಾನೇ ಆಯ್ಕೆ ಮಾಡಿಕೊಳ್ಳಬೇಕಾದರೆ ಶತ ಶತಮಾನಗಳಿಂದ ಮನದ ಆಳದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವ ಸಹಜ ಪ್ರವೃತ್ತಿಯನ್ನು ಬದಲಾಯಿಸಿಕೊಳ್ಳುವ ಪ್ರಯತ್ನ ಕಿಂಚಿತ್ತಾದರೂ ಆದೀತು.

ಅಂತರ್‌ಜಾತಿಯ ಪ್ರೇಮ ಪ್ರಕರಣಗಳಲ್ಲಿ ಅಂತೂ ಗಂಡು ದಿಟ್ಟವಾಗಿ ತನ್ನ ಪೋಷಕರನ್ನು ವಿರೋಧಿಸುವಂತೆ, ಅವರಿಗೆ ಮನವೊಪ್ಪಿಸುವಂತೆ ಮಾಡುವ ಪ್ರಯತ್ನ ನಮ್ಮ ಹೆಣ್ಣುಗಳಿಗಿನ್ನು ಸಾಧ್ಯವಾಗಿಲ್ಲ. ಕಾರಣ ತಾನಾಗಿಯೇ ತನ್ನ ವಿವಾಹದ ವಿಚಾರ ಮಾತನಾಡುವುದೇ! ಎಂಬ ಅಪರಿಮಿತ ಲಜ್ಜೆಯೇ ಆಕೆಗೆ ಮುಳುವಾಗುತ್ತದೆ. ಪೋಷಕರನ್ನು ವಿರೋಧಿಸುವುದು ಬೇಕಿಲ್ಲ. ಆದರೆ ಅವಳ ಮನದಾಸೆ ಅಲ್ಲಿಯೇ ಕಮರಿ ಹೋಗುವಂತೆ ಮಾಡಿಕೊಳ್ಳುತ್ತಾಳೆ.

ಇದಕ್ಕೆ ಅಪವಾದವಾಗಿ ಪ್ರೇಮ ಪ್ರಕರಣಗಳಲ್ಲಿ ಹೆಣ್ಣು ಗಂಡುಗಳಿಬ್ಬರಿಗೂ ಪರಸ್ಪರ ಇಷ್ಟವಾಗಿದ್ದರೂ ಸಹ ಗಂಡಿಗೆ ಹೇಳುವ ಧೈರ್ಯವಾಗದೆ ಸುಮ್ಮನಿರುವ ಸಾಧ್ಯತೆಯಲ್ಲಿ ಹೆಣ್ಣೇ ಧೈರ್ಯವಹಿಸಿ ತಾನು ಪ್ರೀತಿಸುತ್ತಿರುವ ಸುದ್ದಿ ಹೇಳಿ ವಿವಾಹದ ಪ್ರಸ್ತಾಪವೆತ್ತುವ ಸಾಹಸ ಪ್ರಕರಣಗಳು ಹಲವಲ್ಲವಾದರೂ ಕೆಲವಾದರೂ ಇವೆ. ಇಂತಹ ಪ್ರಕರಣಗಳಲ್ಲಿ ಗಂಡಿಗೆ ಇಷ್ಟವಾಗಿದ್ದರೂ ಸಹ ಕ್ಷಣದಲ್ಲಿ ಗಂಡು ಮನಸ್ಸು ಹೆಚ್ಚಾಗಿ "ಮೇಲೆ ಬಿದ್ದ ಹೆಣ್ಣು" ಎಂದೇ ಯೋಚಿಸುತ್ತದೆ! ಇಂತಹ ಗಂಡುಬೀರಿಯೊಂದಿಗೆ ಉಳಿಗಾಲವಿಲ್ಲ ಆಲೋಚಿಸಿದರೂ ಆಶ್ಚರ್ಯವಿಲ್ಲ. ಹೆಣ್ಣು ತಾನೆಷ್ಟೇ ವಿದ್ಯಾವಂತಳು, ವಿಚಾರವಂತಳು ಆದರೂ ಮೂಲಭೂತ ಆಯ್ಕೆಯ ಆದ್ಯತೆ ಪರಪುತ್ರರದೇ ಆಗಿದೆ. ಮೇಲು ನೋಟಕ್ಕೆ ಎಷ್ಟೇ ಸ್ತ್ರೀಪರವಾಗಿ ಮಾತನಾಡಿ ಸರಳತೆ ವ್ಯಕ್ತಪಡಿಸುವ ಪುರುಷರ ಮನದ ಆಳದಲ್ಲಿ ಎಲ್ಲೋ ಮೇಲರಿಮೆಯ ಭೂತ ಮನೆ ಮಾಡಿರುತ್ತದೆ. [ಇಲ್ಲೆಲ್ಲಿ ಪೂರ್ಣ ಪುರುಷ ವಿರೋಧಿ ನಿಲುವನ್ನು ಪಡೆದು ದೋಷಾರೋಪಣೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡಿಲ್ಲ ಇದಕ್ಕೆ ಅಪವಾದಗಳಿವೆ ನಿಜ ಆದರೆ ಇಂತಹ ಸಾಧ್ಯತೆಗಳು ಹೆಚ್ಚಾಗಿವೆ ಎಂಬುದರ ಕಡೆಗೆ ಬೆರಳು ತೋರಿಸುವ ಪ್ರಯತ್ನವಷ್ಟೇ]

ಇಲ್ಲೆಲ್ಲ ಗಂಡುಗಳು ಪ್ರೀತಿ-ಪ್ರೇಮ, ಆಯ್ಕೆ ಎಲ್ಲ ತಮ್ಮ ಆಜನ್ಮ ಸಿದ್ಧ ಹಕ್ಕು ಎಂದು ಭಾವಿಸದೆ ಅವಳ ವ್ಯಕ್ತಿತ್ವಕ್ಕೆ, ಭಾವನೆಗಳಿಗೆ ಪ್ರಾಧಾನ್ಯತೆ ನೀಡಬೇಕು. ಕಾಲಾಂತರದಿಂದ ಹೆಣ್ಣು ಗಂಡುಗಳಿಬ್ಬರಲ್ಲೂ ಬೇರು ಬಿಟ್ಟಿರುವ ಮೂಲ ಕಲ್ಪನೆಗಳು ಕ್ವಚಿತ್ತಾದರೂ ಸಡಿಲಗೊಂಡಾಗ ಪ್ರಾಯಶಃ ಜೀವನ ಆಶಾದಾಯಕವಾದ ಹೊಸತಿರುವನ್ನು ಪಡೆದೀತು. ಗಂಡಿನಂತೆಯೇ ಹೆಣ್ಣು ತನ್ನ ಜೀವನದ ಸಂಗಾತಿಯ ಆಯ್ಕೆ ಮಾಡಿಕೊಳ್ಳುವಂತಾದಾಗ ನಮ್ಮ ಮಹಿಳಾ ಸಂಘಟನೆಗಳ, ಚಳುವಳಿಗಳ ಕೂಗಾದ ಸ್ವಾತಂತ್ರ್ಯ, ಸಮಾನತೆಯ ನುಡಿಗಳಿಗೊಂದು ಅರ್ಥ ಬಂದೀತು.

ಕಂಕಣ

ಲೇ: ತ್ರಿವೇಣಿ
ತ್ರಿವೇಣಿ ಪಬ್ಲಿಕೇಷನ್ಸ್
ಚಾಮರಾಜಪುರಂ
ಮೈಸೂರು—೪

ಒಂದು ದಿನ ರಮಾ ಶಿಶುವಿಹಾರದ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿದ್ದಾಗ ದಾರಿಯಲ್ಲಿ ಅಮೃತಳ ಭೇಟಿಯಾಯಿತು. ಗೆಳತಿಯರಲ್ಲ ಒಂದೇ ಊರಿನಲ್ಲಿದ್ದರೂ ಒಬ್ಬರೊಬ್ಬರ ಭೇಟಿ ತುಂಬಾ ಅಪರೂಪವಾಗಿತ್ತು. ಅಮೃತಾ ರಮೆಯನ್ನು ನೋಡಿ

"ಎಲ್ಲಿಂದ ಬರ್ತ್ತಿದ್ದೀಯ?" ಎಂದಳು.

"ಶಿಶು ವಿಹಾರದಲ್ಲಿ ನನಗೆ ಕೆಲಸ ಸಿಕ್ಕಿ ಆರು ತಿಂಗಳಾಯಿತು."

"ಪರವಾಗಿಲ್ಲ, ಸಂಬಳ ಎಷ್ಟೂಂತ ಕೇಳಬಹುದೋ?"

"ಮೊದಲು ಇಪ್ಪತ್ತೈದು ರೂಪಾಯಿ ಕೊಡುತ್ತಿದ್ದರು. ಈಗ ಒಂದು ರೂಪಾಯಿ ಒಡ್ಡಿ ಆಗಿದೆ. ನೀನೇನು ಮಾಡ್ತಿದೀಯಾ?"

ಅಮೃತಾ ನಕ್ಕು "ನಾನೇ? ನಾನು ಚೆನ್ನಾಗಿ ಊಟಮಾಡ್ತೀನಿ, ನಿದ್ದೆ ಮಾಡ್ತೀನಿ, ಕಸೂತಿ ಕೆಲಸ ಮಾಡ್ತೀನಿ. ಅಷ್ಟು ದಿನದಿಂದ ಎಷ್ಟು ಮೇಜುವಸ್ತ್ರ, ಕೇವಸ್ತ್ರ, ಬಾಗಿಲು ಕಿಟಕಿಗಳಿಗೆ ಪರದೆ ಹಾಕಿದ್ದೀನಿ ಎಂದರೆ ಸುಮಾರು ನಾಲ್ಕು ಸಂಸಾರಗಳಿಗೆ ಹಂಚಬಹುದು. ಸದಾ ಕಸೂತಿ ಕೆಲಸ ಮಾಡಿ ಕಣ್ಣನ್ನು ಹಾಳು ಮಾಡಿಕೊಂಡಿದ್ದೀನಿ. ಡಾಕ್ಟರು ಕನ್ನಡಕ ಹಾಕ್ಕೋ ಬೇಕೂಂತ ಹೇಳಿದ್ದಾರೆ........"

"ಹಾಕಿಕೊಳ್ಳೋದು ತಾನೇ? ಹಾಗೇ ಬಿಟ್ಟರೆ ದೃಷ್ಟಿ ತೀರಾ ಕೆಟ್ಟು ಹೋಗುತ್ತದೆ."

"ಕನ್ನಡಕ ಹಾಕಿಕೊಂಡು ನನ್ನ ಕಣ್ಣು ಐ ಬೂತ ಪ್ರಪಂಚಕ್ಕೆ ತೋರಿಸಿಕೊಳ್ಳೋದು ನನಗಿಷ್ಟವಿಲ್ಲ. ಅಂತೂ ಸಮಯ ಕಳಿಯೋದು ತುಂಬಾ ಕಷ್ಟವಾಗಿದೆ"

"ಸಮಯ ಕಳಿಯೋದು ಅಷ್ಟೊಂದು ಕಷ್ಟವಾಗಿದ್ದರೆ ಎಲ್ಲಾದರೂ ಕೆಲಸಕ್ಕೆ ಸೇರಿಕೋ" ರಮಾ ಸಲಹೆ ಕೊಟ್ಟಳು.

"ನಮ್ಮ ತಾಯಿ, ತಂದೆಗೆ ನಾನು ಕೆಲಸಕ್ಕೆ ಸೇರೋದು ಇಷ್ಟವಿಲ್ಲ ಕಣೆ ರಮಾ. ಹುಡುಗಿ ಕೆಲಸ ಮಾಡ್ತಿದಾಳೇಂದ್ರೆ ಗಂಡಿನ ಕಡೆಯವರು ಹಿಂದಲೇಟು ಹಾಕಬಹುದೂಂತ ನಮ್ಮಮ್ಮನಿಗೆ ಹೆದರಿಕೆ. ಅದೂ ಅಲ್ಲದೆ ಕೆಲಸ ಮಾಡೋ ಹುಡುಗಿಯರಿಗ್ಯಾರಿಗೂ ನಡತೆ ಚೆನ್ನಾಗಿರೋದೇ ಇಲ್ಲಾಂತ ಅವರು ಸಿದ್ಧಾಂತ ಮಾಡಿದಾರೆ. ನಾನು ಕೆಲಸಕ್ಕೆ ಸೇರೋದು ಈ ಜನ್ಮದಲ್ಲಿ ಸಾಧ್ಯವಿಲ್ಲ."

"ಹೋಗಲಿ ಮದುವೆನಾದರೂ ಮಾಡಿಕೋ" ಅಮೃತನಗುತ್ತಾ, "ನೀನೇ ಒಂದು ಗಂಡು ಹುಡುಕಿಕೊಡು, ಮಾಡಿಕೊಳ್ಳುತ್ತೇನೆ" ಎಂದಳು

"ಬಿಡೆ ನೀನೇನಾಗಿದೀಯ. ರೂಪಸಿಯಲ್ಲದಿರಬಹುದು. ಆದರೆ ಕುರೂಪಿಯಂತೂ ಅಲ್ಲ. ನಿಂಗೆ ಗಂಡು ಸಿಕ್ಕೋದೇನು ಮಹಾಕಷ್ಟ?

"ಕೆಲವರು ಹುಡುಗಿ ತುಂಬಾ ಓದಿದಾಳೆ ಬೇಡಾಂತಾರೆ, ಇನ್ನು ಕೆಲವರು ಹುಡುಗೀಗೆ ಸಂಗೀತ ಬರೋದಿಲ್ಲ, ಬೇಡಾಂತಾರೆ. ಮದುವೇಗೂ ಸಂಗೀತಕ್ಕೂ ಏನು ಸಂಬಂಧ ಎನ್ನುವುದು ನನಗಿನ್ನೂ ತಿಳಿನೇ ಇಲ್ಲ. ಮದುವೆಯಾದ ಮೇಲೆ ಯಾವ ಗಂಡ ತನ್ನ ಹೆಂಡತಿ ಸಂಗೀತ ಕೇಳ್ತಾ ಕೂತಿರುತ್ತಾನೆ? ಕೆಲವು ಹುಡುಗರು ಹುಡುಗಿ ಚೆನ್ನಾಗಿಲ್ಲ ಎಂದು ಹೇಳಿದ್ದಾರೆ. ಎಲ್ಲಾ ಸರಿಯಾಗಿದ್ದ ಕಡೆ ಜಾತಕ ಸರಿ ಹೋಗುವುದಿಲ್ಲ, ಹೀಗಾಗಿ ನಾನು ಶ್ರೀಮಂತಿಯಾಗದೇ ಕುಮಾರಿಯಾಗಿಯೇ ಉಳಿದಿದ್ದೇನೆ."

ಅಮೃತಳೇನೋ ನಗುತ್ತಲೇ ಮಾತನಾಡಿದ್ದಳು, ಆದರೆ ಅವಳಿಗೆ ತುಂಬಾ ಬೇಸರವಾಗಿದೆಯೆಂದು

ರಮಾಗೆ ತಿಳಿಯಿತು.

ಅಷ್ಟೊಂದು ಬೇಜಾರುಪಟ್ಟುಕೊಳ್ಳಬೇಡವೇ ಅಮೃತಾ ನೀನೇನು ಆಗಲೇ ಮುದುಕಿಯಾಗಿ ಹೋಗಿದೀಯಾ?"

"ನನಗೆಷ್ಟು ವರ್ಷಾಂತ ತಿಳ್ಕೊಂಡಿದೀಯಾ? ನನಗಾಗಲೇ ಇಪ್ಪತ್ತೈದು ವರ್ಷಗಳಾದವು. ಇನ್ನೆರಡು ವರ್ಷಗಳಾದರೆ ನನ್ನ ಜೀವಮಾನದ ಂಾಲು ಭಾಗ ಕಳೆದು ಹೋಗುತ್ತದೆ. ಹೆಂಗಸಿಗೆ ಇಪ್ಪತ್ತೈದು ವರ್ಷ ಎಂದರೆ ಅವಳು ಮುದುಕಿ ಎಂದೇ ನನ್ನ ಭಾವನೆ. ನಮ್ಮಲ್ಲಿ ಹುಡುಗಿಯರಿಗೆ ಸುಲಭವಾಗಿ ಮದುವೆಯಾಗಬೇಕಾದರ ಒಂದು ಮಾರ್ಗ ಇದೆ"....

"ಯಾವುದು?" ರಮಾ ಕುತೂಹಲದಿಂದ ಕೇಳಿದಳು.

"ಪ್ರೇಮ ವಿವಾಹ"

"ಪ್ರೇಮ ವಿವಾಹ!" ರಮಾ ಬೆಚ್ಚಿದಳು.

ಪ್ರೇಮ ವಿವಾಹ ಬಯಸಿದ ಕಸ್ತೂರಿಯ ನೆನಪು ರಮೆಯ ಹೃದಯವನ್ನು ಹಿಂಡಿತು. ರಮಾ ಬಿಸಿಯುಸಿರನ್ನು ಹೊರಗೆ ಹಾಕಿ "ಪ್ರೇಮವಿವಾಹದಲ್ಲಿ ನಿನಗೆ ನಂಬಿಕೆ ಇದೆಯೇ?" ಎಂದಳು.

"ಹೊಂ ನನಗೇನೊ ಹಳೆಯ ಪದ್ಧತಿ ಸರಿ ಹೋಗೋದಿಲ್ಲಮ್ಮ. ಹುಡಗೀಗೆ ಅಲಂಕಾರ ಮಾಡಿ ಹುಡುಗನಿಗೆ ತೋರಿಸೋದು ಇವೆಲ್ಲಾ ತೀರಾ ಅನಾಗರೀಕತೆಗೆ ಸೇರಿದ್ದು. ವಯಸ್ಸಿಗೆ ಬಂದ ಹುಡುಗಿಯನ್ನು ಸೌಂದರ್ಯ ಪ್ರದರ್ಶನಕ್ಕೆ ಕೂರಿಸಿದಾಗ ಅವಳು ನೊಂದುಕೊಳ್ಳುವುದಿಲ್ಲವೇ? ಆ ರೀತಿಯ ವಧು ಪರೀಕ್ಷೆಯಿಂದ ಹುಡುಗಿಯ ರೂಪ ಗೊತ್ತಾಗುತ್ತದೆಯೇ ಹೊರತು ಗುಣ ತಿಳಿಯುವುದೆ? ಆದುದರಿಂದ ಪ್ರೇಮವಿವಾಹವೇ ಸರಿ........"

"ನಮ್ಮಲ್ಲಿ ಅದಕ್ಕೆ ಅವಕಾಶವೇ ಇಲ್ಲವಲ್ಲಾ" ರಮಾ ರಾಗ ಎಳೆದಳು.

"ಅದು ನಿಜಾನ್ನು. ನಮ್ಮ ಜನ ಇನ್ನೂ ಮುಂದುವರಿಯಬೇಕು. ಯುವಕ ಯುವತಿಯರಿಗೆ ಸಲಿಗೆಯಿಂದಿರುವ ಅವಕಾಶ ಕಲ್ಪಿಸಿಕೊಡಬೇಕು. ಆಗ ಹುಡುಗಿ ಹುಡುಗ ಪರಸ್ಪರ ಮೆಚ್ಚಿ ತಾವೇ ಮದುವೆಯಾಗುತ್ತಾರೆ. ಇದರಿಂದ ತಂದೆ ತಾಯಿಯರ ಜವಾಬ್ದಾರಿಯೂ ಕಡಿಮೆಯಾಗುತ್ತದೆ..........."

"ನಿನ್ನ ತಲೆ. ಜವಬ್ದಾರಿ ಕಡಿಮೆ ಯಾಗುತ್ತದೇಂತ ನಿನಗೆ ಯಾರು ಹೇಳಿದರು. ಪ್ರಾಯಕ್ಕೆ ಬಂದ ಹುಡುಗಿಯನ್ನ ತರುಣರೊಡನೆ ಸ್ವತಂತ್ರವಾಗಿ ಓಡಾಡಲು ಬಿಟ್ಟ ಮೇಲೆ ತಾಯಿ ತಂದೆ ಶಾಂತಿಯಿಂದಿರುತ್ತಾರೇಂತ ತಿಳ್ಕೊಂಡಿದೀಯಾ? ಬೆಂಕಿ ಮೇಲೆ ನಿಂತವರ ಹಾಗಿರುತ್ತಾರೆ. ನಾವು ಕೊಟ್ಟಿರುವ ಸ್ವಾತಂತ್ರ್ಯನ ಇವಳು ಎಲ್ಲಿ ದುರುಪಯೋಗಪಡಿಸಿಕೊಂಡು ಮನೆತನಕ್ಕೆ ಕೆಟ್ಟ ಹೆಸರು ತರುತ್ತಾಳೋ ಎನ್ನುವ ಭಯ ಅವರಿಗಿದ್ದೇ ಇರುತ್ತದೆ. ಆ ವಯಸ್ಸಿನಲ್ಲಿ ಯುವಕ ಯುವತಿಯರನ್ನ ಸಲಿಗೆಯಿಂದಿರಲು ಬಿಟ್ಟರೆ ಏನೂ ತೊಡಕಾಗುವುದಿಲ್ಲವೇ?"

"ಅದು ನಮ್ಮ ಕೈಲಿದೆ. ನಾವು ಹುಡುಗರೊಡನೆ ಸ್ವತಂತ್ರವಾಗಿ ಓಡಾಡಿದರೂ ಅದಕ್ಕೂ ಒಂದು ಮಿತಿ ಇಟ್ಟುಕೊಳ್ಳಬೇಕು. ಹುಡುಗರಿಗೆ ನಮ್ಮ ಗುಣ, ಅಭಿರುಚಿ, ಆಸೆ, ಆಕಾಂಕ್ಷೆ, ಧ್ಯೇಯ ಇವುಗಳ ಪರಿಚಯ ಮಾಡಿಕೊಡಬೇಕೇ ಹೊರತು ಪ್ರೇಮ ಪತ್ರ ಬರೆಯುವುದಕ್ಕಾಗಲಿ, ಕೈ ಕೈ ಹಿಡಿದು ಓಡಾಡುವುದಕ್ಕಾಗಲಿ ಅವಕಾಶ ಕೊಡಬಾರದು. ಹುಡುಗರು ನಮ್ಮೊಡನೆ ಸ್ನೇಹದಿಂದಿರಬೇಕೇ ಹೊರತು ಸ್ವೇಚ್ಛೆಯಾಗಿರಬಾರದು ಅವರು ನಮ್ಮೊಡನೆ ಸಲಿಗೆಯಿಂದಲೂ ಇರಬೇಕು. ಆದರೆ ಗೌರವಿಸಲೂಬೇಕು. ನಮ್ಮೆದುರಿಗೆ ಹಗುರವಾಗಿ ಮಾತನಾಡಲು ಅವರು ಹೆದರಬೇಕು............"

O O O

ನಾವಷ್ಟೇ ಅಪರಾಧಿಗಳೆ?

ನಾವು ಹುಡುಗಿಯರು ನಮ್ಮ ಮನೆಗಳಲ್ಲಿ ತುಂಬಾ ಅಪೇಕ್ಷೆ ಪಡುವುದು ಫ್ರೀಡಂ ಮತ್ತು ಲವ್. ನಮ್ಮ ಮನೆಗಳಲ್ಲಿ ನಮಗಿರುವ ಕೊರತೆಗಳೂ ಇವೇ. ಇವೆರಡನ್ನು ತಮ್ಮ ಮಕ್ಕಳಿಗೆ ಕೊಡುವಾಗ ಮಾಡುವ ಪಕ್ಷಪಾತಗಳನ್ನು ನಮ್ಮ ತಾಯಂದಿರ ಹತ್ತಿರ ಕಲಿಯಬೇಕು. ನಾವು ಮಾಡುವ ಒಂದೊಂದು ಕಾರ್ಯಗಳಿಗೂ ಅಡಚಣೆಗಳನ್ನು ತರುತ್ತಾರೆ. ನಾವು ಏನೂ ಮಾಡಬಾರದು: ಮಾಡದೇನೂ ಇರಬಾರದು, ಇವೆರಡು ಮಧ್ಯದಲ್ಲಿ ಇರುವುದಕ್ಕೂ ಬಿಡುವುದಿಲ್ಲ. ನಮ್ಮ ವಯಸ್ಸಿನ ಹುಡುಗಿಯರ ಪಾಡೇ ಇದಾಗಿದೆ. ಎಷ್ಟು ಎಜುಕೇಟೆಡ್ ಪೇರೆಂಟ್ಸ್ ಆದರೂ ಹಳೇ ಸಂಪ್ರದಾಯವೇ ಅವರಿಗೆ ಮುಖ್ಯ. ಗಂಡು ಎಂದರೆ ಸಿಂಹಾಸನದ ಮೇಲೆಯೆ ಕೂರಿಸಬೇಕು, ನೀವು ಅವರ ಸೇವೆ ಮಾಡಬೇಕೆಂದು ಅವರು ನಮಗೆ ಮಾಡುವ ಗೀತೋಪದೇಶ ಆಗಿದೆ. ಗಂಡಿನಿಂದಲೇ ಅವರ ಉದ್ಧಾರವೆಂದು ತಿಳಿದಿದ್ದಾರೆ. ಹೆಣ್ಣಾದ ತಾಯಂದಿರೇ ಗಂಡಸರನ್ನು ಏಕೆ ತಲೆ ಮೇಲೆ ಕೂರಿಸಿಕೊಳ್ಳುತ್ತಾರೊ ತಿಳಿಯುವುದಿಲ್ಲ.

ಹೆಣ್ಣು ಏನು ಮಾಡಿದರೂ ತಪ್ಪು, ನಿಂತ್ರೆ ತಪ್ಪು, ಕೂತ್ರೆ ತಪ್ಪು ಮಲಗಿದರೂ ತಪ್ಪು ಇಷ್ಟೆಲ್ಲಾ ಆದ ಮೇಲೆ ಯಾಕೆ ಇರಬೇಕೆಂದು ನಾವೇನಾದ್ರೂ ಸತ್ರೆ. ಅದಕ್ಕೂ ಒಂದು ಕಥೆ ಕಟ್ಟಿ, ಸತ್ರೂ ತಪ್ಪು ಎನ್ನುತ್ತಾರೆ. ಹೀಗೆ ಬದುಕುವುದಕ್ಕೂ ಬಿಡುವುದಿಲ್ಲ, ಬದುಕಿದ್ದರೂ ತಪ್ಪು. ಈ ರೀತಿಯಲ್ಲಿ ನಾವು ತ್ರಿಶಂಕು ಸ್ಥಿತಿಯಲ್ಲಿ ನರಳುತ್ತಿದ್ದೇವೆ. ಮನೆ ಬಾಗಿಲಲ್ಲಿ ನಿಂತ್ಕೋಬಾರದು, ನಿಂತ್ರೆ, "ಯಾವನನ್ನು ನೋಡುತ್ತಾ ಇದೀಯಾ" ಎನ್ನುತ್ತಾರೆ. ಕಿಟಕಿಯ ಹತ್ತಿರ ಕೂಡಾ ನಿಂತ್ಕೋಬಾರದು, ಜೋರಾಗಿ ಮಾತನಾಡಲೂ ಬಾರದು. ಮೆಲ್ಲಗೆ ಮಾತನಾಡಿಸಿದರೆ ಗೊಣಗಬೇಡ ಎನ್ನುತ್ತಾರೆ. ಬೀದಿಯಲ್ಲಿ ತಲೆ ಎತ್ತಬಾರದು, ನಗಬಾರದು. ಹೆಣ್ಣು ಕಾಲ ತುಂಬಾ ಬಟ್ಟೆ ಹಾಕಿಕೊಳ್ಳಬೇಕು. ನಮಗೆ ಇಷ್ಟವಾದ ಬಟ್ಟೆಗಳನ್ನು ಕೇಳಿದರೆ ಮೊದಲು ಬೇಡ ಅನ್ನುತ್ತಾರೆ. ನಾವು ಕೇಳಿದ್ದನ್ನು ಬಿಟ್ಟು ಬೇರೆ ಬಟ್ಟೆಗಳನ್ನು ಎಷ್ಟು ಕಷ್ಟವಾದರೂ ತರುತ್ತಾರೆ. ನಾವು ಕೇಳಿದ್ದನ್ನು ಕೊಡಿಸಿದರೂ ಮನಃಪೂರ್ವಕವಾಗಿ ಕೊಡಿಸುವುದಿಲ್ಲ, ಚುಚ್ಚಿ, ಚುಚ್ಚಿ ಬೈದು ಕೊಡಿಸುತ್ತಾರೆ. ಅವರಿಗೆ ಅವರ ಮಾತೆ ಮುಖ್ಯ. ಮಕ್ಕಳನ್ನು ಅರ್ಥ ಮಾಡಿಕೊಂಡು, ಅವರ ಸುಖ–ಸಂತೋಷಗಳಿಗೆ ಪ್ರಾಮುಖ್ಯತೆಯೇ ಕೊಡುವುದಿಲ್ಲ. ಹುಡುಗರು ಬೀದಿಯಲ್ಲಿ ಹೇಗಾದರೂ ಇರಬಹುದು, ಹುಡುಗಿಯರನ್ನು ಚುಡಾಯಿಸಿಕೊಂಡು ಇದ್ದರೂ ಕೇಳುವವರಿಲ್ಲ: ಅವರು ಹಾಗೆ ರೇಗಿಸಿದಾಗ ನಾವು ಬೈದರೆ ನಮ್ಮನ್ನು "ನೀವು ಹುಡುಗಿಯರು, ಆದರೆ ಅವರು ಹುಡುಗರು ಏನು ಮಾಡಿದರೂ ಜಯಿಸಿಕೊಳ್ಳುತ್ತಾರೆ. ನಿಮಗೆ ಅದು ಆಗುವುದಿಲ್ಲ. ಕೊನೆಗೆ ನಿಮ್ಮಿಂದ ನಮಗೆ ಕೆಟ್ಟ ಹೆಸರು" ಎಂದು ಅವರು ಬಾಯಿಗೆ ಬಂದಂತೆ ಬೈಯುತ್ತಾರೆ. ಯಾವಾಗಲೂ ತಂದೆ ತಾಯಿಗೆ ಅವರ ಡಿಗ್ನಿಟಿ ಬಗ್ಗೆಯೇ ಯೋಚನೆ. ನಾವು ಹುಡುಗರನ್ನು ಯಾವ ರೀತಿಯಲ್ಲಿ ಮಾತನಾಡಿಸಿದರೂ ಅವರು ತೆಗೆದುಕೊಳ್ಳುವುದು ಒಂದೇ ಅರ್ಥದಲ್ಲಿ. ಸಮಾಜವನ್ನು ಅರಿತುಕೊಳ್ಳಬೇಕಾದರೆ ಎಲ್ಲಾ ತರಹದವರ ಹತ್ತಿರ ಸಂಪರ್ಕ ಇಟ್ಟುಕೊಳ್ಳಬೇಕೆಂದು ಅವರಿಗೆ ಅರಿವಿಲ್ಲ. ಒಂದು ಹೆಣ್ಣು ಆಗಿ ಹೆಣ್ಣಿನ ಶಕ್ತಿ ಅರಿತುಕೊಳ್ಳುವುದಿಲ್ಲ. ಅವರ ಜಾಗ್ರತೆಯಲ್ಲಿ ಅವರಿದ್ದರೆ ಏನೂ ಆಗುವುದಿಲ್ಲ ಎನ್ನುವುದು ಅವರಿಗೆ ಎಷ್ಟು ಹೇಳಿದರೂ ತಿಳಿಯುವುದಿಲ್ಲ.

ಮಾತನಾಡಬೇಡ, ನೋಡಲೂಬೇಡ ಎಂದು ಒಂದ ಸಲ ಗದರಿಸಿದ ಮೇಲೆ ನಾವೂ ಸುಮ್ಮನಾಗುತ್ತೇವೆ. ಆದರೂ ಅವರಿಗೆ ನಮ್ಮ ಮೇಲೆ ಶಂಕೆ ಮಾತ್ರ ಇದ್ದೇ ಇರುತ್ತದೆ. ಮಾತು ಮಾತಿಗೂ "ನೀನು ಅವನನ್ನು ಕದ್ದು ಮಾತನಾಡಿಸುತ್ತೀಯಾ ಅಲ್ಲವೇ" ಎನ್ನುತ್ತಾರೆ. ಇದರಿಂದ ನಮಗೂ ಮೊಂಡುತನ ಬರುವುದೂ ಉಂಟು. ನಾವು ಕದ್ದು ಮುಚ್ಚಿ ಮಾತನಾಡಲೂಬಹುದು. ಫ್ರೆಂಡ್‌ಶಿಪ್ ಅನ್ನೋ ಅರ್ಥ ನಮಗೂ ಗೊತ್ತು. ಅದನ್ನು ಮೀರಿ ಹೋಗುವುದಿಲ್ಲ. ಅವರು ನಮ್ಮ ಹತ್ತಿರ ಎಷ್ಟು ಕ್ಲೋಸ್ ಆಗಿ ಇದ್ದರೂ ನಾವು ಅವರ ಅಡ್ವಾಂಟೇಜ್ ತೆಗೆದುಕೊಳ್ಳುವುದಿಲ್ಲ.

ಯಾರೊ ಮಾಡಿದರೆಂದು ನಾವೂ ಮಾಡುತ್ತೇವೆ ಅಂದುಕೊಳ್ಳುತ್ತಾರೆ. ಇನ್ನು ಕೆಲವು ಮನೆಯಲ್ಲಿ ಬಾಲ್ಯದಿಂದ ಮುದ್ದು ಮಾಡುತ್ತಾರೆ. ಅದಾದ ಮೇಲೆ ಒಂದು ಗಂಡು ಮಗು ಹುಟ್ಟಿದರೆ ಸಡನ್ ಆಗಿ ಆ ಪ್ರೀತಿಯನ್ನೆಲ್ಲಾ ಕಟ್ ಮಾಡಿ ಬೈಯುತ್ತಾರೆ. ಆಗ ಅವರಿಗೆ ಅದನ್ನು ತಡೆದುಕೊಳ್ಳುವ ಮನಸ್ಸೇ ಇರುವುದಿಲ್ಲ. ಆದರೆ ಈಗ ಇದು ನಮ್ಮ ಮನಸ್ಸಿಗೆ ಒಗ್ಗಿರೋ ಹಾಗಿದೆ. ತಾಯಿ ಅಂದ್ರೆ ಎಷ್ಟು ಉನ್ನತ ಸ್ಥಾನ ನಮ್ಮ ಮನಸಲ್ಲಿ ಇರತ್ತೊ ಅದು ಕೆಳಗೆ ಬೀಳುವುದು ಖಂಡಿತ. ತಾಯಿ ಅನ್ನೊ ಅರ್ಥ ತಾಯಂದಿರಿಗೆ ಗೊತ್ತಿಲ್ಲ ಎನ್ನಿಸುತ್ತದೆ.

14 ವರ್ಷದ ತುಂಬುವುದಕ್ಕೆ ಮೊದಲೇ ಮನೆಯಲ್ಲಿ ಮದುವೆ ವಿಷಯ. ನಮಗೆ ಪೂರ್ತಿ ನಾಲೆಡ್ಜ್ ಇರುವುದಿಲ್ಲ. ಅರ್ಥಕ್ಕೆ ಅರ್ಥ ವಿಷಯಗಳ ತಿಳುವಳಿಕೆ ಇರುವ ಮನಸ್ಸಿನ ಮೇಲೆ ಆ ತರಹ ಮಾತುಗಳು ಏನು ಪರಿಣಾಮ ಬೀರುತ್ತದೆಂಬ ಯೋಚನೆಯೇ ಅವರಿಗೆ ಇಲ್ಲ. ಮುಂದೆ ನಾವೇನು ಆಗಲೇ

ಕೆಂದು ಅವರೇ ತೀರ್ಮಾನಿಸಬೇಕು. ನಮ್ಮ ಜೀವನವನ್ನು ನಾವು ರೂಪಿಸಿಕೊಳ್ಳಬೇಕೆಂದು ನಮಗಿರುವುದಿಲ್ಲವೇ? ನಾವು ಯಾವಾಗಲೂ ಅವರ ಮೇಲೆ ಡಿಪೆಂಡ್ ಆಗಿರಬೇಕೆ? ನಾವು ಎದುರಿಸಿದರೆ ನಿಮಗೇನು ಗೊತ್ತು? ಈಗ ತಾನೆ ಕಣ್ಣು ಬಿಡುತ್ತಿದ್ದೀರ ಎನ್ನುತ್ತಾರೆ. ಅನುಭವ ಆದ್ರೆ ತಾನೆ ನಮಗೂ ಪ್ರಪಂಚ ಗೊತ್ತಾಗೋದು? ನಮ್ಮ ಪರ್ಸ್ನಾಲಿಟಿ ಜಾಸ್ತಿ ಇದ್ರೆ ಅದಕ್ಕೂ ಬೈಯುತ್ತಾರೆ. ಜಾಸ್ತಿ ತಿನ್ನುತ್ತೀಯಾ ಅನ್ನುತ್ತಾರೆ. ಗಂಡು ಮಗು ನಮಗಿಂತ ಚಿಕ್ಕವನಾಗಿದ್ದರೆ ನಾವು ಚಿಕ್ಕವನು ಅಂತ ಅವನಿಗೆ ಪ್ರಿಫರೆನ್ಸ್ ಕೊಡಬೇಕು ಅದೇ ದೊಡ್ಡವನಾಗಿದ್ದರೆ ಅವನು ಹೇಳಿದ ಮಾತು ಕೇಳಿಕೊಂಡು ಬಿದ್ದಿರಬೇಕು, ಹೆಣ್ಣು ಚಿಕ್ಕವಳಾಗಿದರೂ, ದೊಡ್ಡವಳಾಗಿದ್ದರೂ ಎಲ್ಲಾ ಸಫರ್ ಮಾಡೋದೇ. ಗಂಡನ್ನ ತಲೆ ಮೇಲೆ ಹೊತ್ಕೊಂಡು ತಿರಗಬೇಕು ಅಂತ ಕಲಿಸುತ್ತೆ. ಹೆಣ್ಣು ಚಿಕ್ಕವಳಾಗಿದ್ದರೆ ಅವಳಿಗೆ ಪ್ರಿಫರೆನ್ಸ್ ಇಲ್ಲ. ದೊಡ್ಡವಳಾಗಿದ್ದರೆ ದೊಡ್ಡವಳಿಗೆ ಸಿಗೋ ಮರ್ಯಾದೆ ಇಲ್ಲ. ತಮ್ಮನಿಂದ ಅಕ್ಕಾ ಅಂತ ಕರೆಸಿಕೊಳ್ಳಲು ಎಷ್ಟು ಹಂಬಲಿಸುತ್ತಾಳೆ ಅನ್ನುವುದು ಆ ಕೊಬ್ಬಿರೊ ತಮ್ಮನಿಗೇನು ಗೊತ್ತು? ತಂದೆ ತಾಯಿಯರೆ ಅವರು ಕೊಬ್ಬಲು ಕಾರಣ ಇವರಿಂದ ಉಂಡ ನಮ್ಮ ಮನಸ್ಸನು ನಮ್ಮ ಸ್ನೇಹಿತರ ಜೊತೆ ಸಮಾಧಾನ ಪಟ್ಕೋಬೇಕು, ಅಂತ ಮಾತಿಗಿಳಿದರೆ ಎಲ್ಲರೂ ಅವರವರ ಮನೆ ವಿಚಾರ ಹೇಳಿ ನಮ್ಮ ನೋವು ಜಾಸ್ತಿಯಾಗುತ್ತದೆ.

ನಾವು ಒರಟಾಗಲವರೇ ಕಾರಣ. ಏನೂ ಅರಿಯದ ಮನಸ್ಸಿನಲ್ಲಿ ದ್ವೇಷ ಅನ್ನುವುದು ಹುಟ್ಟಿಸೋದೆ ಅವರು. ಅವರ ಮೇಲೆ ಅವರೇ ದ್ವೇಷ ಹುಟ್ಟಿಸಿಕೊಂಡು ತಂದೆ ತಾಯಿ ಅನ್ನುವ ಪ್ರೀತಿ ಕಳೆದು ಕೊಳ್ಳುತ್ತಾರೆ. ಚಿಕ್ಕವಯಸ್ಸಿನಲ್ಲಿ ನಾವು ತಾಯಿಯನ್ನು ದೇವರಂತೆ ಕಂಡರೆ ನಾವು ದೊಡ್ಡವರಾಗುತ್ತಾ ನಮಗೆ ಪಿಶಾಚಿಯಂತೆ ಕಾಣುತ್ತಾರೆ. ಈ ತರಹ ಅವರು ಆಗುವುದಕ್ಕೆ ಬಹುಶಃ ಗಂಡು ಮಗುವಿನ ಪ್ರಭಾವ ಇರಬೇಕು. ನಮ್ಮ ಜೀವನಕ್ಕೆ ತಳಪಾಯ ಹಾಕಿ ಬೆಳೆಸಬೇಕಾದ ಅವರು ಅದನ್ನು ಕೆಡವುತ್ತಿರುವುದು ಖಂಡಿತ, ಹೆಣ್ಣಿನ ತಾಳ್ಮೆ, ತಡೆಯುವ ಶಕ್ತಿ, ಉದಾರ ಮನಸ್ಸನ್ನು ಹೆಣ್ಣೇ ಪರೀಕ್ಷಿಸುವುದು ನಿಜಕ್ಕೂ ಆಶ್ಚರ್ಯದ ವಿಚಾರ.

ನಾವು


ಕಾಯುವ ಕ್ಷಣಗಳ
ಉರಿವ ಬಯಕೆಗಳ
ಹಲವಾರು ಕತೆಗಳ
ಕಂಗಳು ನಿಮಗೆ
ಹೇಳ್ಯಾವೆಂದು ಕಣ್ತಪ್ಪಿಸುತ್ತೇವೆ ನಾವು.

ನೂರು ಭಾವನೆಗಳು
ಮುಖದ ಮೇಲೆಲ್ಲ
ಮಿನುಗಿ ತಮ್ಮ
ಪರಿಚಯ ಕೊಟ್ಟಾವೆಂದು
ತಲೆತಗ್ಗಿಸುತ್ತೇವೆ ನಾವು.

ಆಸೆಗಳು ಶಬ್ದಗಳಾಗಿ
ನಿಮ್ಮತ್ತ ನುಗ್ಗಿ
ನಿಮ್ಮನ್ನು ತಬ್ಬಿಬ್ಬು
ಮಾಡ್ಯಾವೆಂದು ಮೌನದಲ್ಲೇ
ಮಾತಾಡುತ್ತೇವೆ ನಾವು.

ಸಾಗರದತ್ತ ಧುಮುಕುವ
ನದಿಯಂತೆ ನಾವಲ್ಲ
ನಿಂತಲ್ಲೇ ನಿಂತು
ಹಳೆಯ ನೀರಿನಲ್ಲಿ
ಕಮಲ ಅರಳಿಸುತ್ತೇವೆ ನಾವು.

ಉಜ್ವಲಾ ಪುಣಜಗೌಡ



ಒಡೆಯುತ್ತಿರುವ ಹೃದಯಗಳು

ಕಮಲಮ್ಮ, ಅವಳ ಸೊಸೆ ಇಬ್ಬರೂ ಮನೆಗೆಲಸ ಮುಗಿಸಿ ಹೊಲದ ಕೆಲಸ ಮಾಡುವರು. ಹೊಸದಾಗಿ ಬಂದ ಸೊಸೆ, ಕೆಲಸ ಮಾಡೀ ಏನೊ ರೂಢಿಯಿದೆ, ಆದರೆ ಬಗ್ಗಿ ಎದ್ದು ಮಾಡಿ ಸೊಂಟ ಉಳುಕಿ ಎರಡು ದಿನದಿಂದ ಹಾಸಿಗೆ ಹಿಡಿದಿದ್ದಳು.

ಕಮಲಮ್ಮ ಅದೇ ಊರಿನಲ್ಲಿ ಅವಳು ಚಿಕ್ಕವಯಸ್ಸಿನವಳಾಗಿದ್ದಾಗ ಮಂತ್ರ ಹಾಕುತ್ತಿದ್ದ ಬೂಬಮ್ಮನೇ ಇದಕ್ಕೆ ಸರಿಯಾಗಿ ಮದ್ದು ಮಾಡುವಳೆಂದು ಅವಳ ಮನೆತನಕ ಹೋಗಿ ಮನೆಗೆ ಬಂದು ಸೊಸೆ ಸೊಂಟದ ನೋವನ್ನು ಹೇಗಾದರೂ ಸರಿಮಾಡಬೇಕೆಂದು ದೈನ್ಯದಿಂದ ಕೇಳಿಕೊಂಡಳು.

ಬೂಬಮ್ಮ ವಯಸ್ಸಾದ ಹಣ್ಣು ಹಣ್ಣು ಮುದುಕಿ, ಅವಳ ಮುಖ ಮೊಣಕಾಲಿನಲ್ಲಿ ಹುದುಗಿ ಹೋಗಿತ್ತು, ಬೆನ್ನು ಸಂಪೂರ್ಣವಾಗಿ ಬಾಗಿತ್ತು. ಕಮಲಮ್ಮನ ಮನೆ ಒಳಗೆ ಬಂದವಳೇ ಎದುರಿಗೆ ಕುಳಿತ ಸೊಸೆಯ ಸೊಂಟವನ್ನು ಒಂದು ಕಡ್ಡಿಯಿಂದ ಆಡಿಸುತ್ತಾ, ಅದೇನೋ ಮಂತ್ರ ಗೊಣಗಿದಳು, ಹೀಗೆ ಮೂರು ನಾಲ್ಕು ಸಾರಿ ಮಾಡಿದ ನಂತರ ತನ್ನ ಅಂಗಾಲಿನಿಂದ ಅವಳ ಸೊಂಟದ ಭಾಗವನ್ನೆಲ್ಲಾ ನೀವಿದಳು. ಮತ್ತೆ ಮುಖವನ್ನು ಗೋಡೆಗೆ ತಿರುಗಿಸಿ ಅದೇನೋ ಮಂತ್ರ ಗೊಣಗಿದಳು, ಅಷ್ಟರಲ್ಲಿಯೇ ಕಮಲಮ್ಮ ಕಾಫಿ ಮಾಡಿ ಬೂಬಮ್ಮನಿಗೆ ಕೊಡುತ್ತಾಳೆ. ಬೂಬಮ್ಮ ಮೊದಲು ಬೇಡವೆಂದರೂ ನಂತರ ಕುಡಿಯುತ್ತಾಳೆ.

ಹಳ್ಳಿಗಳಲ್ಲಿ ಇಂತಹ ದೃಶ್ಯಗಳು ಅಪರೂಪವೇನಲ್ಲ, ಈ ಕಮಲಮ್ಮ ಬೂಬಮ್ಮನವರ ಸಂಬಂಧ ಕೃತಕವಾದುದೇ? ಅವರಲ್ಲಿರುವ ವಿಶ್ವಾಸವನ್ನು ಒಡೆಯುತ್ತಿರುವವರು ಯಾರು? ಕಮಲಮ್ಮ ತನ್ನ ಸೊಸೆ ಸೊಂಟದ ನೋವಿನಿಂದ ನರಳುವಾಗ ಬೂಬಮ್ಮನನ್ನು ಯಾಕೆ ಕರೆದಳು? ಅವಳ ಮತ್ತು ಬೂಬಮ್ಮನ ಮಧ್ಯ ಅನುಮಾನ, ಶಂಕೆಗಳನ್ನು, ಇಂದು ಬಿತ್ತುತ್ತಿರುವವರು ಯಾರು?

ಹಳ್ಳಿಗಾಡುಗಳಲ್ಲಿ ಭೇಧ ಭಾವಗಳನ್ನು ಮರೆತು ಬೆಸೆದಿರುವ ಹೃದಯಗಳಿಗೆ ಕಿಚ್ಚು ಹಚ್ಚುತ್ತಿರುವವರು ಯಾರು? ಎರಡು ಮನುಷ್ಯ ಹೃದಯಗಳಲ್ಲಿ ಅನುಮಾನದ ಬೀಜಗಳನ್ನು ಯಾರು ಬಿತ್ತುತ್ತಿದ್ದಾರೆ.? ನಮ್ಮ ಸಮಾಜದಲ್ಲಿ ಜನರಲ್ಲಿ ಕೋಮುಭಾವನೆಯನ್ನು ಬಿತ್ತುವ ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು ಜನರ ಮುಗ್ಧತೆಯನ್ನು ಅವರಲ್ಲಿರುವ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ತಮ್ಮ ರಾಜಕೀಯ ಲಾಭಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತವೆ. ಪ್ರತಿಯೊಂದು ರಾಜಕೀಯ ಪಕ್ಷವೂ ಅದರ ಮುಖಂಡರುಗಳು ತಮ್ಮ ರಾಜಕೀಯ ಉದ್ದೇಶಗಳಿಗೆ ಜನಸಾಮಾನ್ಯರ ಹೆಸರಿನಲ್ಲಿ ತಮ್ಮ ಲಾಭವನ್ನು ಸಾಧಿಸಿಕೊಳ್ಳುವರು. ರಾಮಜನ್ಮಭೂಮಿ–ಬಾಬ್ರಿಮಸೀದಿಯ ಸಮಸ್ಯೆಯಿಂದಾಗಿ ಜನರ, ಮನಸ್ಸುಗಳು ಒಡೆದು ಬಿರುಕು ಬಿಟ್ಟವೆ. ಸಂಶಯ, ಅನುಮಾನ, ಗುಮಾನಿಗಳು ಜನಸಾಮಾನ್ಯರ ದೈನಂದಿನ ಮನೋವ್ಯಾಪಾರವಾಗಿದೆ. ಒಂದು ಜನಾಂಗವನ್ನು ದ್ವೇಷಿಸುವ ಮನೋಭಾವನೆಗಳು ಇಂದು ಯಾವುದೇ ಸಂಕೋಚಗಳಿಲ್ಲದೆ, ಭಯ, ನಾಗರೀಕತೆಯ ಸೌಜನ್ಯವನ್ನು ಮೀರಿ ವ್ಯಕ್ತವಾಗುತ್ತಿರುವುದು ವಿಸ್ಮಯವನ್ನುಂಟು ಮಾಡುವುದರ ಜೊತೆಯಲ್ಲಿ ಭೀತಿಯನ್ನುಂಟು ಮಾಡುತ್ತವೆ.

ರಾಜಕೀಯ ಪಕ್ಷಗಳು ಹುಟ್ಟು ಹಾಕಿರುವ ಹಿಂದೂ–ಮುಸ್ಲಿಮರ ನಡುವಿರುವ ಬಿರುಕು ಕ್ಷುಲ್ಲಕ ಕಾರಣಗಳಿಗಾಗಿ ಸ್ಫೋಟಕಗೊಳ್ಳುತ್ತದೆ, ಕೋಮುಗಲಭೆಗಳು ಕೇವಲ ಕಣ್ಣಿಗೆ ಕಾಣುವ ಸಂಗತಿಗಳು ಆದರೆ ಕಣ್ಣಿಗೆ ಕಾಣದ ಅಗೋಚರ ದ್ವೇಷ, ಗುಮಾನಿ ಸಂಶಯಗಳು ಕೋಮುಗಲಭೆಗಳಿಗಿಂತ ಭೀಕರವಾದವುಗಳು. ನಮ್ಮ ನಡುವೆ ತೀರಾ ಸಹಜವಾಗಿ, ಸಹಿಸುವಂತೆ ಕಾಣುವ ಘಟನೆಗಳು ಇಂದು ವಿಚಿತ್ರ ಸ್ವರೂಪವನ್ನು ಪಡೆಯುತ್ತಿವೆ. ದೈನಂದಿನ ವ್ಯವಹಾರಗಳಲ್ಲಿ, ಬಸ್ಸುಗಳಲ್ಲಿ, ಅಂಗಡಿಗಳಲ್ಲಿ ದಿನನಿತ್ಯದ ಮಾತುಕತೆಗಳಲ್ಲಿ ರಾಮಮಂದಿರ ಬಿರುಕು ಮೂಡಿಸುತ್ತದೆ, ಹೀಗೆ ಒಡಕು ಹುಟ್ಟಿಸುವ ಕಾರ್ಯ, ಮನುಷ್ಯ — ಮನುಷ್ಯರ ನಡುವೆ ದೈನಂದಿನ ನಡತೆಗಳ ಮೇಲೆ ಪ್ರತ್ಯೇಕತೆಯನ್ನುಂಟುಮಾಡುತ್ತವೆ.

ಎಚ್. ಎಸ್. ರಾಜೇಶ್ವರಿ

......10ನೇ ಪುಟದಿಂದ

ವಿಗ್ರಹರಾಜ ನೇರ ಹೋರಾಟಕ್ಕಿಳಿಯದೆ ಯುಕ್ತಿಯಿಂದಲೇ ಹೋರಾಡಲು ನಿರ್ಧರಿಸಿದ್ದ. ಅಂದು ಬ್ರಾಹ್ಮಣರು ಉಪವಾಸ ಸತ್ಯಾಗ್ರಹ ಹೂಡುವರೆಂದರೆ ಅದನ್ನು ಅಶುಭ ಸೂಚಕವೆಂದು ಪರಿಗಣಿಸಲಾಗುತ್ತಿತ್ತು. ಹಾಗಾಗಿ ಅದನ್ನು ಆಯುಧವನ್ನಾಗಿ ಮಾಡಿಕೊಂಡು ಅಗ್ರಹಾರಗಳಲ್ಲಿದ್ದ ಬ್ರಾಹ್ಮಣರು ಉಪವಾಸ ಸತ್ಯಾಗ್ರಹ ಹೂಡುವಂತೆ ಮನವೊಲಿಸಿದ ಜೊತೆಗೆ ಭ್ರಷ್ಟ ಸರ್ಕಾರದಿಂದ ಬೇಸತ್ತಿದ್ದ ಜನರ ಬೆಂಬಲವು ದೊರೆಯಿತು. ಆದರೆ ಅವರೆಲ್ಲರ ರೋಷ ತುಂಗನ ವಿರುದ್ಧವಾಗಿತ್ತು. ಇದನ್ನು ಗ್ರಹಿಸಿದ ದಿದ್ದಾ ಮೊದಲು ತುಂಗನನ್ನು ಅರಮನೆಯಲ್ಲಿ ಅಡಗಿಸಿಟ್ಟಳು. ನಂತರ ಬ್ರಾಹ್ಮಣರಿಗೆ ಉದಾರವಾಗಿ ಭಕ್ಷೀಸು ನೀಡಿದಳು. ಈ ಕ್ರಮದಿಂದ ವಿಗ್ರಹರಾಜ ಲೋಹಾರಕ್ಕೆ ಹಿಮ್ಮೆಟ್ಟಿದ. ಆತನ ಬೆಂಬಲಿಗರನೇಕರನ್ನು ಸೆರೆಮನೆಗೆ ತಳ್ಳಿದ್ದಲ್ಲದೆ, ಕೆಲವರನ್ನು ಗಲ್ಲು ಶಿಕ್ಷೆಗೊಳಪಡಿಸಿದ ತುಂಗ. ವಿಗ್ರಹರಾಜ ಮತ್ತೊಮ್ಮೆ ಪ್ರಯತ್ನಿಸಿದಾಗ, ದಿದ್ದಾಳ ಪಕ್ಷ ತ್ಯಜಿಸಿದ್ದ ಬ್ರಾಹ್ಮಣರನ್ನು ಶಿಕ್ಷಿಸಲು ತುಂಗ ಹಿಂದೇಟು ಹಾಕಲಿಲ್ಲ. ಮತ್ತೊಂದು ನಿದರ್ಶನ, ರಾಜಪುರಿ ಅಥವಾ ರಜೌರಿಯ ಪೃಥ್ವಿಪಾಲನ ವಿರುದ್ಧ ನಡೆಸಿದ ಕಾರ್ಯಾಚರಣೆ. ಹದಗೆಟ್ಟ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡ ಸಾಮಂತ ಪೃಥ್ವೀಪಾಲ ಸ್ವಾತಂತ್ರ್ಯ ಘೋಷಿಸಿಕೊಂಡ. ಅವನನ್ನು ಸದೆಬಡಿಯಲು ಬೃಹತ್ ಪಡೆಯೊಂದನ್ನು ಕಳುಹಿಸಲಾಗಿತ್ತು. ಈ ಪಡೆ ವಿಭಜನೆಗೊಂಡು ಎರಡು ದಿಕ್ಕುಗಳಲ್ಲಿ ಹೊರಟು ಪೃಥ್ವೀಪಾಲನನ್ನು ಎದುರಿಸಿತು. ಒಂದು ಪಡೆ ನೇರ ಹೋರಾಟಕ್ಕಿಳಿದರೆ, ಮತ್ತೊಂದು ರಜೌರಿಗೆ ಸುಗ್ಗಿ ಬೆಂಕಿ ಹಚ್ಚಿತು. ಹೀಗೆ ತುಂಗ ತನ್ನ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿ ಪೃಥ್ವಿಪಾಲನನ್ನು ಸೋಲಿಸಿ ವಿಜಯಿಯಾದ. ಈ ವಿಜಯದಿಂದಾಗಿ ಅದುವರೆಗೂ ಪ್ರಧಾನಿಯಾಗಿದ್ದವನು, ಸೇನಾಪತಿ ಹುದ್ದೆಯನ್ನು ಗಳಿಸಿ ಸಾಮ್ರಾಜ್ಯದಲ್ಲಿ ಅತ್ಯಂತ ಬಲಿಷ್ಟ ವ್ಯಕ್ತಿಯಾಗಿ ಮಾರ್ಪಟ್ಟ.

ದಿದ್ದಾಳ ದೂರದೃಷ್ಟಿಯಿಂದಾಗಿ ಒಂದು ಶತಮಾನ ಕಾಲ ಕಾಶ್ಮೀರವು ಲೋಹಾರ್ ಮನೆತನದ ಅಧೀನದಲ್ಲಿತ್ತು. ಉತ್ತರಾಧಿಕಾರಿಯಾಗಿ ಸಂಗ್ರಾಮರಾಜ (ಸೋದರಳಿಯ) ಆಯ್ಕೆಯಾದುದು ಬಹು ಸ್ವಾರಸ್ಯಕರ ಘಟನೆ. ಉತ್ತರಾಧಿಕಾರಕ್ಕೆ ಯೋಗ್ಯರಾದವರನ್ನು ಒಂದೆಡೆ ಸೇರಿಸಿ ಸೇಬಿನ ರಾಶಿಯಿಂದ ಹಣ್ಣು ಹೆಕ್ಕುವ ಸ್ಪರ್ಧೆ ಏರ್ಪಡಿಸಿದ್ದಳು. ಈ ಸ್ಪರ್ಧೆಯಲ್ಲಿ ಸೋದರಳಿಯ ಸಂಗ್ರಾಮರಾಜನನ್ನು ಬಿಟ್ಟು ಉಳಿದವರೆಲ್ಲರೂ ಗಾಯಗೊಂಡಿದ್ದರು. ಇದಕ್ಕೆ ಸಂಬಂಧಿಸಿದಂತೆ ಸಂಗ್ರಾಮರಾಜನನ್ನು ಪ್ರಶ್ನಿಸಿದಾಗ, "ಇತರರನ್ನು ಕೆರಳಿಸಿ, ಕಾದಾಡಲು ಬಿಟ್ಟು ಆ ಅವಧಿಯಲ್ಲಿ ತಾನು ಹೆಚ್ಚಿನ ಸಂಖ್ಯೆಯಲ್ಲಿ ಹಣ್ಣುಗಳನ್ನು ಸಂಗ್ರಹಿಸಿದುದಾಗಿ" ಉತ್ತರಿಸಿದ. ಇಂತಹ ವಿವೇಕ ಮತ್ತು ರಾಜನೀತಿಜ್ಞತೆ ಮುಂದೆ ಆಳ್ವಿಕೆಗಾರನಾಗಲು ಯೋಗ್ಯ ಎಂಬ ಸೂಚನೆ ನೀಡಿದುದರಿಂದ ಸಂಗ್ರಾಮರಾಜನನ್ನು ಉತ್ತರಾಧಿಕಾರಿಯೆಂದು ಘೋಷಿಸಿದಳು.

ಒಟ್ಟಿನಲ್ಲಿ ದಿದ್ದಾಳ ಲೋಪದೋಷಗಳೇನಿದ್ದರೂ ರಾಜಪ್ರತಿನಿಧಿಯಾಗಿ (೯೫೮–೯೮೦), ಸಾಮ್ರಾಜ್ಞಿಯಾಗಿ (೯೮೧-೧೦೦೩) ಕಾಶ್ಮೀರದ ಆಡಳಿತವನ್ನು ತಮ್ಮ ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದ ಆಕೆಯ ಚಾಣಾಕ್ಷತೆ, ಸಾಮರ್ಥ್ಯ ಮತ್ತು ದಕ್ಷತೆಯನ್ನು ಅಲ್ಲಗಳೆಯುವಂತಿಲ್ಲ. ಆಕೆ ಹೆಳವಿ ಆದಾಗ್ಯೂ ದೀರ್ಘಕಾಲ ತನ್ನ ಅಸಮಾನ್ಯ ಪ್ರತಿಭೆ, ಧೈರ್ಯ ಮತ್ತು ಧೃಢತೆ ಪ್ರದರ್ಶಿಸಿದ ವೀರ ವನಿತೆ. ಹೆಣ್ಣಿಗೆ ಮಾತ್ರ ನೈತಿಕ ಮೌಲ್ಯವನ್ನು ಎತ್ತಿ ಹಿಡಿಯುವ ನಿಯಮ ವಿಧಿಸಿರುವ ಸಮಾಜವನ್ನು ದಿಟ್ಟತನದಿಂದಲೇ ಎದುರಿಸಿದ ಸ್ವಚ್ಛಂದ ಪ್ರವೃತ್ತಿಯ ಸ್ತ್ರೀ. ಶಾಂತಿಯುತವಾಗಿ ತನ್ನ ನವರಿಗೆ ಅಧಿಕಾರ ವರ್ಗಾಯಿಸಿದ ನಿಪುಣ ರಾಜಕಾರಣಿ. ಕಾಶ್ಮೀರದ ಸಮರ್ಥ ಆಳ್ವಿಕೆಗಾರರಲ್ಲಿ ದಿದ್ದಾಳೊಡನೆ ಮತ್ತೊಬ್ಬ ಸ್ತ್ರೀ ಸುಗಂಧ ಸೇರಿದ್ದಾಳೆ ಆದರೆ ದಿದ್ದಾಳಷ್ಟು ವೈವಿಧ್ಯಮಯ ವ್ಯಕ್ತಿತ್ವ ಆಕೆಯದಲ್ಲ. ಆದ್ದರಿಂದಲೇ ಪ್ರಾಚೀನ ಭಾರತದ ಆಳ್ವಿಕೆಗಾರರಲ್ಲಿ ಕಾಶ್ಮೀರದ ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸಿದಾಗ ದಿದ್ದಾಳಂಥ ನಾಯಕಿಯ ಅಗತ್ಯ ಇದೆಯೆಂಬುದು ಮನವರಿಕೆಯಾಗುತ್ತದಲ್ಲವೇ?

ಆಧಾರ: ಪಿ ಎನ್. ಕೆ. ಬಾಂಜೈ–ಎ ಹಿಸ್ಟರಿ ಆಫ್ ಕಾಶ್ಮೀರ್
ಎಂ. ಎನ್. ಕಪೂರ್– ಎಮಿನೆಂಟ್ ರೂಲರ್ಸ್ ಆಫ್ ಕಾಶ್ಮೀರ್.

ದಿನಾಂಕ 15.1.91 ರಂದು ಸುರತ್ಕಲ್‌ನಲ್ಲಿ ಒಬ್ಬ ಕನ್ನಡ ಅಧ್ಯಾಪಕರ ಮನೆಯಲ್ಲಿ ವಿಜಯಾದಬ್ಬೆ ಅವರಿಂದ ಸ್ತ್ರೀಪರವಾದ ಭಾಷಣವೊಂದನ್ನು ಏರ್ಪಡಿಸಲಾಗಿತ್ತು. ಗೆಳತಿಯೊಬ್ಬರಿಂದ ವಿಷಯ ತಿಳಿದ ನಾನು 'ದಬ್ಬೆ' ಅವರ ಭಾಷಣ ಕೇಳುವ ಕುತೂಹಲದಿಂದ ಹೊರಟೆ. ಅಲ್ಲಿನ ಭಾಷಣ ಮತ್ತು ಚರ್ಚೆಯ ವರದಿ ಅಲ್ಲಿ ನೆರೆದಿದ್ದವರಿಗಷ್ಟೇ ಮೀಸಲಾಗದೆ 'ಮಾನಸ' ಪತ್ರಿಕೆಯ ಓದುಗರಿಗೂ ತಲುಪಬೇಕೆಂಬುದೇ ಈ ಲೇಖನದ ಆಶಯ.

ಪ್ರಾರಂಭಕ್ಕೆ ಅಲ್ಲಿ ಒಂದು ಮನೆಯಲ್ಲಿ ಸುಮಾರು 40–50 ಜನ ಸಾಹಿತ್ಯಾಸಕ್ತರು ಸೇರಿದ್ದರೆಂಬುದೇ ಆಶ್ಚರ್ಯಕರ ಸಂಗತಿಯಾಗಿತ್ತು, ಅರ್ಧಕ್ಕರ್ಧ ಪುರುಷರು ನೆರೆದಿದ್ದರು. ಮುಖ್ಯವಾಗಿ 'ಸಂವಹನ', 'ಕಾಳಜಿ' ಎಂಬ ಸಂಘಗಳನ್ನು ಕಟ್ಟಿಕೊಂಡು ಸಾಹಿತ್ಯದ ಬಗೆಗೆ ಆಗಾಗ ಚರ್ಚೆ ನಡೆಸುವುದು. ಬೇರೆ ಕಡೆಯಿಂದ ಪ್ರಸಿದ್ಧ ಲೇಖಕರು ಬಂದಾಗ ಅವರ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು ಈ ಸಂಘಗಳ ಉದ್ದೇಶ. ಅಲ್ಲಿ ನೆರೆದಿದ್ದವರು ಇಂತಹದೇ ಒಂದು ವರ್ಗಕ್ಕೆ, ವೃತ್ತಿಗೆ ಸೇರಿದವರೆಂದು ಹೇಳಲಾಗದು. ವಿದ್ಯಾರ್ಥಿಗಳು, ಅಧ್ಯಾಪಕರು, ಬರಹಗಾರರು, ಗೃಹಿಣಿಯರು, ನಾಟಕಾಭಿನಯದಲ್ಲಿ, ಯಕ್ಷಗಾನದಲ್ಲಿ ಪ್ರಸಿದ್ಧಿ ಪಡೆದವರು, ಬ್ಯಾಂಕ್ ಮ್ಯಾನೇಜರರಿಂದ ಹಿಡಿದು ಅನೇಕ ಸರ್ಕಾರಿ ಕಛೇರಿಗಳ ಉದ್ಯೋಗಿಗಳು, ಪತ್ರಕರ್ತರು ಇತ್ಯಾದಿ. ಪ್ರಸ್ತುತ ವಿಚಾರಗಳನ್ನು ತಿಳಿಯಲು, ಸ್ಪಂದಿಸಲು ವೃತ್ತಿ ಯಾವುದಾದರೇನಂತೆ ಎಂಬುದನ್ನು ಸಾರುವಂತಿತ್ತು ಆ ಕೂಟ.

ಹೀಗೆ ಭಿನ್ನತೆಯಲ್ಲಿ ಏಕತೆಯನ್ನು ಅಲ್ಲಿ ಕಾಣಬಹುದಾಗಿತ್ತು. ವಿಭಿನ್ನ ಹಿನ್ನೆಲೆಯಾದರೂ ಆ ದಿನದ ಎಲ್ಲರ ಅಭಿರುಚಿ ಸ್ತ್ರೀಪರ ವಿಚಾರ ವಿನಿಮಯವಾಗಿತ್ತು. ಇಂತಹ ಒಂದು ಸಣ್ಣ ಕೋಣೆಯಲ್ಲಿಯೂ ಎಂತಹ ಆರೋಗ್ಯಪೂರ್ಣ ಚರ್ಚೆಗಳು ನಡೆಯಬಹುದೆಂಬುದರ ಬಗ್ಗೆ ವಿಸ್ಮಯಳಾಗಿ ಮೂಕ ಪ್ರೇಕ್ಷಕಳಾಗಿದ್ದೆ. ಸದಾ ಸಾಹಿತ್ಯದ ಚರ್ಚೆ ನಡೆವ[illegible] ಆ ದಿನ ಮಹಿಳೆಗೆ ಸಂಬಂಧಿಸಿದ್ದಾದ ಕಾರಣ ಎಲ್ಲರೂ ಮಹಿಳಾಪರ ದೃಷ್ಟಿಕೋನದ ಚರ್ಚೆಯಲ್ಲಿ ಹೆಚ್ಚು ಆಸಕ್ತಿ ಪಡೆದವರೇ ಆಗಿದ್ದರೆಂಬುದಕ್ಕೆ ಸಾಕ್ಷಿ, ಸಿಗುವ ಒಂದು ಸಂಕ್ರಾಂತಿ ಹಬ್ಬದ ರಜೆಯ ಸಡಗರಕ್ಕಿಂತ ಆ ಚರ್ಚೆ ಹೆಚ್ಚೆಂದು ಭಾವಿಸಿದ ಕಾರಣವೇ ಲವಲವಿಕೆಯಿಂದ ಪಾಲ್ಗೊಂಡಿದ್ದರು.

ಸುಮಾರು 16 ವರ್ಷಗಳಿಂದ 'ಸಮತಾ ವೇದಿಕೆ'ಯಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ॥ ದಬ್ಬೆ ಅವರು ಸುಮಾರು ಅರ್ಧ ಗಂಟೆ ಸ್ತ್ರೀವಾದಿ ದೃಷ್ಟಿಕೋನದ ಅನೇಕ ವಿಚಾರಗಳನ್ನು ಮಂಡಿಸಿದರು. ಅಲ್ಲಿನ ಮುಖ್ಯಾಂಶಗಳನ್ನು ಹೇಳುವುದಾದರೆ, ಸಂಖ್ಯೆಯಲ್ಲಿ ಪುರುಷರಿಗೆ ಸರಿಸಮಾನವಾಗಿರುವ ಹೆಣ್ಣುಗಳು ಪ್ರತಿ ಹಂತದಲ್ಲಿ ಕೀಳೆನ್ನಿಸಿಕೊಂಡು ಶೋಷಿತರಾಗುತ್ತಿದ್ದಾರೆ. ಯಾವ ಕ್ಷೇತ್ರದಲ್ಲಿಯೂ ಒಂದೇ ರೀತಿಯ ನ್ಯಾಯ ಇಬ್ಬರಿಗೂ ಅನ್ವಯಿಸದು. ಎಲ್ಲ ಅವಕಾಶಗಳು ನ್ಯಾಯಗಳು ಪುರುಷ ಪರವಾಗಿವೆ. ಕಾರಣ ತಲೆತಲಾಂತರಗಳ ಪುರುಷ ಪ್ರಧಾನ ವ್ಯವಸ್ಥೆಯಾಗಿದೆ. ಹೆಣ್ಣು ಸಹ ಎಲ್ಲ ಕ್ಷೇತ್ರಗಳಲ್ಲಿ ಗಂಡಿನಷ್ಟೇ ಸಮರ್ಥಳು. ತನ್ನನ್ನು ತಾನೇ ರಕ್ಷಿಸಿಕೊಳ್ಳಬಲ್ಲಳು, ವಿವಾಹ ತಾಯ್ತನವೊಂದೇ ಹೆಣ್ಣಿನ ಗುರಿಯಲ್ಲ. ಹೆಣ್ಣು ಹೊರಗಡೆಯೇ ಹೋಗಿ ದುಡಿಯಬೇಕು, ಆಗ ಮಾತ್ರ ಸಮಾನತೆ ಎಂದಲ್ಲ. ಮನೆಯಲ್ಲಿ ಸಹ ಅವರ ಶ್ರಮಕ್ಕೆ ಗೌರವ, ಮಾನ್ಯತೆ ಸಿಗಬೇಕಾಗಿದೆ.

ಹೆಣ್ಣೆಂದರೆ ಮೂಗು ಮುರಿಯುವ ಸ್ಥಿತಿ ನಮ್ಮಲ್ಲಿದೆ. ಜನನದಿಂದ ಮರಣದವರೆಗೆ ಪ್ರತಿ ಹಂತದಲ್ಲಿ ಅಧೀನಳಾಗಿ ಬಾಳಬೇಕಾಗಿದೆ. ಹೆಣ್ಣು ಶಿಶುವಿನ ಜನನದ ವಿಚಾರ ಕೇಳಿಯೆ ಅಸಮಾಧಾನ ತೋರಿಸುತ್ತಾರೆ. ಮಕ್ಕಳನ್ನು ಬೆಳೆಸುವಲ್ಲಿ ತಾರತಮ್ಯ. ಆಟದ ಸಾಮಾನುಗಳ, ಉಡುಪುಗಳ ಆಯ್ಕೆ, ಉನ್ನತ ಶಿಕ್ಷಣಕ್ಕೆ ಕಳುಹಿಸುವಲ್ಲಿ ತೋರುವ ತಾರತಮ್ಯ. ಹೆಣ್ಣಿನ ಪರಮಧ್ಯೇಯ ವಿವಾಹವೇ ಆಗಿದೆ ಎಂದು ಭಾವಿಸುವಿಕೆ, ಒಂಟಿ ಜೀವನ (ಸ್ವಾತಂತ್ರ ಜೀವನ) ಸಾಧ್ಯವೇ ಇಲ್ಲವೆಂಬ ಅನಗತ್ಯ ಭೀತಿ, ವರದಕ್ಷಿಣೆಯ ಸಮಸ್ಯೆ. ಒಡವೆ ವಸ್ತ್ರಗಳಿಗೆ ಪ್ರಧಾನ್ಯತೆ ನೀಡುವಲ್ಲಿಯೇ ಆಕೆಯನ್ನು ಬೆಳೆಸುವ ದೃಷ್ಟಿಕೋನ, ಜಾಹಿರಾತುಗಳು ಸಹ ಹೆಣ್ಣಿನ ಅಂತಿಮ ಗುರಿ ವಿವಾಹ ಎಂಬುದನ್ನು ಮನಗಾಣಿಸುತ್ತವೆ. ಪಠ್ಯ ಕ್ರಮದ ಮುಖಾಂತರ ಬಾಲಕ ಬಾಲಕಿಯರ ಪ್ರತ್ಯೇಕ ಪಾತ್ರಗಳನ್ನು ತಿಳಿಸುವಂತೆ ಸೃಷ್ಟಿಸಿಬಿಟ್ಟಿದ್ದೇವೆ.

ದುಡಿಯುವ ಹೆಣ್ಣುಗಳಂತೂ ಹೊರಗೆ ಪುರುಷನಿಗೆ ಸರಿಸಮಾನವಾಗಿ ದುಡಿದು ಬಂದರೂ ಗೃಹ ಕೃತ್ಯಗಳ, ಮಕ್ಕಳ ಪಾಲನೆ-ಪೋಷಣೆ ಅವಳ ಪಾಲಿಗೇ ಮೀಸಲು. ಒಂದು ಕಡೆ ಹೆಣ್ಣು ಏನೂ ಕೆಲಸ ಮಾಡದೆ ಹರಟೆಯಲ್ಲಿ ಕಾಲದೂಡುತ್ತಾಳೆಂಬ ಆಪಾದನೆ, ಮತ್ತೊಂದು ಕಡೆ ಎರಡೂ ರೀತಿಯಿಂದ ಹೆಚ್ಚಿನ ದುಡಿತವನ್ನು ಅಪೇಕ್ಷಿಸುವ ಸ್ಥಿತಿ ಇದೆ. ಮೂಲಭೂತವಾಗಿ ಗೃಹ ಕೃತ್ಯಗಳನ್ನು ಗಂಡಸರು ಮಾಡುವುದು ಹೀನಾಯಮಾನ ಎಂಬ ಪರಿಕಲ್ಪನೆ ಆಳದಲ್ಲಿ ಬೇರುಬಿಟ್ಟಿದೆ.

ಭದ್ರವಾಗಿ ಬೇರೂರಿರುವ ಈ ವ್ಯವಸ್ಥೆ ಶೀಘ್ರವಾಗಿ ಸಡಿಲಗೊಳ್ಳಲಾರದು ನಿಜ ಆದರೆ ಕ್ರಮೇಣ ಪ್ರಯತ್ನಪೂರ್ವಕವಾಗಿ ಆಗುವಂತಹ ಪ್ರಕ್ರಿಯೆ ಇದಕ್ಕೆ ಮೂಲಭೂತವಾಗಿ ಬೇರು ಬಿಟ್ಟಿರುವ ಪರಿಕಲ್ಪನೆಗಳು ಬದಲಾಗಬೇಕಾಗಿದೆ — ಎಂಬೆಲ್ಲ ವಿಚಾರಗಳನ್ನು ಅಲ್ಲಿ ನೆರೆದ ಪ್ರೇಕ್ಷಕರು ಆಸಕ್ತಿಯಿಂದ ಕೇಳುತ್ತಿದ್ದರು. ಅಲ್ಲಿ ನೆರೆದಿದ್ದ ಪುರುಷರು ಸ್ತ್ರೀಯರ ಬಗ್ಗೆ ತಳೆದಿದ್ದ ಆಂತರಿಕ ಧೋರಣೆಗಳೇನೇ ಇದ್ದಿರಲಿ ಆಕ್ಷಣಕ್ಕೆ ಮಂತ್ರಮುಗ್ಧರಾಗಿ ಆಲಿಸಲು ಕಾರಣ, ನಯನುಡಿಗಳಿಂದ ಕೂಡಿದ್ದ, ಎಂತಹವರಿಗಾದರೂ ಮನಗಾಣಿಸುವ ಅವರ ಭಾಷಣದ ರೀತಿಯೇ ಆಗಿತ್ತು.

ಭಾಷಣ ಕೇವಲ ಅರ್ಧ ಗಂಟೆಯಾದರೆ ನಂತರದ ಬಿಸಿ ಬಿಸಿ ಚರ್ಚೆ ಮೂರು ಗಂಟೆಯಷ್ಟು! ಮಧ್ಯಾಹ್ನ ಹಬ್ಬದ ಭೋಜನದ ಅರಿವೇ ಇಲ್ಲದೆ ಚುರುಗುಟ್ಟುತ್ತಿರುವ ಹೊಟ್ಟೆಯ ಕಡೆಗೆ ಲಕ್ಷ್ಯವೆ. ಹೋಗದಷ್ಟು ಚರ್ಚೆ ನಡೆಯಿತು. ದಕ್ಷಿಣ ಕನ್ನಡದ ಹೆಣ್ಣಿನ ಸ್ಥಿತಿಗತಿ, ವರದಕ್ಷಿಣೆ ದರದ ಬಗ್ಗೆ ವಿಚಾರ ವಿನಿಮಯ ನಡೆಯಿತು. ಹೆಣ್ಣಿಗೆ ಅನ್ಯಾಯವಾದಾಗ, ಅತ್ಯಾಚಾರವೆಸಗಿದಾಗ ಪ್ರತಿಭಟನಾ ಮೆರವಣಿಗೆಗಳು, ಭಾಷಣಗಳು ನಡೆಯಲೇಬೇಕು ಎಂಬ ನಿಲುವನ್ನು ಕೆಲವರು ವ್ಯಕ್ತಪಡಿಸಿದರೆ ಕೆಲವರಿಂದ ಅದಕ್ಕೆ ನಕಾರಾತ್ಮ ಪ್ರತಿಭಟನೆ. ಎಲ್ಲೋ, ಯಾರಿಗೋ ಅನ್ಯಾಯ ನಡೆದಾಗ ಇಲ್ಲಿ ಮೆರವಣಿಗೆ ಮಾಡಿ ಪೇಪರಿನಲ್ಲಿ ಫೋಟೋ ಬಂದರೆ ಅನ್ಯಾಯ ಆದಾಕೆಗೆ ನ್ಯಾಯ ದೊರಕೀತೆ? ಎಂಬುದು ಒಂದು ಹೆಣ್ಣಿನ ವಾದ. ಹೆಣ್ಣು ಹೀಗೆ ಪ್ರತಿಭಟನೆಗೆ ಬೀದಿಗಿಳಿಯಬಾರದು ಎಂಬ ಆದಿಯಿಂದ ಮನಸ್ಸಿನ ಆಳದಲ್ಲಿ ಬೇರುಬಿಟ್ಟ ವಿಚಾರಗಳು ಪ್ರಧಾನವಾಗಿ ಕೆಲಸ ಮಾಡಿದವೇ ವಿನಹ ಇಂತಹ ಸ್ಥಿತಿ ನಮಗೂ ಒದಗುವ ಸಾಧ್ಯತೆಗಳಿವೆ ಎಂಬ ದೂರಾಲೋಚನೆಯೇ ಇದ್ದಂತಿರಲಿಲ್ಲ. ಈ ರೀತಿ ಪ್ರತಿಭಟನೆಯ ಮೂಲಕ ಮುಂದೆ ಇಂತಹ ಘಟನೆಗಳು ನಡೆಯದಂತೆ ಅರಿವು ಮೂಡಿಸಬಹುದು ಎಂಬುದು ಉಳಿದವರ ಪ್ರತ್ಯುತ್ತರ.

ಹೆಣ್ಣು ತನ್ನ ಕೀಳರಿಮೆಯನ್ನು ಹೋಗಲಾಡಿಸಿಕೊಂಡು ಪುರುಷನ ಸರಿಸಮಾನವಾಗಿ ನಿಲ್ಲಬೇಕಾಗಿದೆ. ತನ್ನ ದುಡಿಮೆಯ ಬಗ್ಗೆ, ದೇಹದ ಮೇಲೆ ಹಕ್ಕು ಸ್ಥಾಪಿಸಿಕೊಳ್ಳಬೇಕಾಗಿದೆ. ತನ್ನ ಕುಟುಂಬವನ್ನು ರೂಪಿಸುವ ಹಕ್ಕನ್ನು ಪಡೆದುಕೊಳ್ಳಬೇಕಾಗಿದೆ ಎಂಬುದು ಮುಖ್ಯ ಧೋರಣೆಯಾಗಿತ್ತು.

ಒಟ್ಟಿನಲ್ಲಿ ಇಂತಹ ಆರೋಗ್ಯಕರ ಚರ್ಚೆಗಳು ಸಂಘ ಸಂಸ್ಥೆಗಳಲ್ಲಿ ಸಣ್ಣ-ಪುಟ್ಟ ಮಹಿಳಾ ಮಂಡಳಿಗಳಲ್ಲಿ ಸಹ ನಡೆದಾಗ ಹೆಣ್ಣಿಗಾಗುತ್ತಿರುವ ಅನ್ಯಾಯದ, ಅಸಮಾನತೆಯ ಪ್ರಜ್ಞೆ ಮೂಡಿ ಮೇಲರಿಮೆ-ಕೀಳರಿಮೆ ಪರಿಕಲ್ಪನೆಗಳ ಅಂತರ ಕಡಿಮೆಯಾಗಿ ಸಮತಾವಾದದ ಅರಿವು ಮೂಡೀತು. ಕೆಲಸವಿರದ ಹರಟೆ ಮಲ್ಲಿಗಳು ಎಂಬುದಕ್ಕೆ ಅಪವಾದವಾಗಿ ಇಂತಹ ವಿಚಾರ ವಿನಿಮಯದಿಂದ ಸ್ತ್ರೀ ಪರಧೋರಣೆಯು, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಅಸಮಾನತೆಯ ಕಡೆಗೆ ಬೆಳಕು ಚೆಲ್ಲಿ ಅಭಿವೃದ್ಧಿಯ ಪಥದ ಕಡೆಗೆ ಸಾಗಬಹುದಲ್ಲವೇ? ಎಂಬ ಆಶಾಭಾವನೆ.

ಪಿ ಆರ್. ಸಾವಿತ್ರಿ.

ಗಮನಿಸಿ.. .....

ಇತ್ತೀಚೆಗೆ ಕೆಲವು ಕವಿ-ಕವಯಿತ್ರಿಯರು ಈಗಾಗಲೇ ಪ್ರಕಟವಾದ ಬೇರೆಯವರ ಕವನಗಳನ್ನು ಅಲ್ಪ ಸ್ವಲ್ಪ ಪದಗಳ ಬದಲಾವಣೆಗಳೊಂದಿಗೆ ಅಥವಾ ಹಾಗೆಯೇ ತಮ್ಮ ಹೆಸರಿನೊಂದಿಗೆ ಕಳುಹಿಸುತ್ತಿದ್ದಾರೆ. ಹೀಗೆ ಪ್ರಕಟವಾದ ಕವನಗಳಿಗೆ ಮೂಲ ರಚನಕಾರರು ಪ್ರತಿಭಟನೆ ಕೂಡಾ ವ್ಯಕ್ತಪಡಿಸಿದ್ದಾರೆ. ಇನ್ನು ಮುಂದೆ ಹೀಗಾದಲ್ಲಿ ನಾವು ಮೂಲ ಕವನ ಹಾಗೂ ಪದಗಳ ಬದಲಾವಣೆಯೊಂದಿಗೆ ಬಂದ ಕವನಗಳೆರಡನ್ನೂ ಪ್ರಕಟಿಸಬೇಕೆಂದು ತೀರ್ಮಾನಿಸಿದ್ದೇವೆ. ಈ ತಪ್ಪಿಗೆ ಕವಿ-ಕವಯಿತ್ರಿಯರೇ ಉತ್ತರ ನೀಡುವ ಹೊಣೆ ಹೊರಬೇಕಾಗುತ್ತದೆ. ದಯವಿಟ್ಟು ನಿಮ್ಮ ಕವನಗಳಿಗೆ ಮಾತ್ರ ನಿಮ್ಮ ಹೆಸರು ಹಾಕಿ. ಕೃತಿ ಚೌರ್ಯದ ಕವನ/ಲೇಖನಗಳನ್ನು ಕಳುಹಿಸುವುದು ಹಾಗೂ ಪ್ರಕಟಿಸುವುದು ಎರಡೂ ಶಿಕ್ಷಾರ್ಹವೆಂದು ನೆನಪಿನಲ್ಲಿಟ್ಟು, ನಿಮ್ಮದೇ ಆದ ಕವನ/ಲೇಖನಗಳನ್ನು ಮಾತ್ರ ಕಳುಹಿಸಿ.

ಸಂ. ಮಂ.

ಸುಮಿತ್ರಾಳ ಲೇಖನ

ಶಿರಬೂರು ಬಿಜಾಪೂರ ತಾಲೂಕಿನ ಕೊನೆಯ ಹಳ್ಳಿ. ಈ ಹಳ್ಳಿ ಹಸಿರು ಸೀರೆ ಉಟ್ಟ ಹಾಗೆ ಎಂದು ಯಾವಾಗಲೂ ನನಗನ್ನಿಸುತ್ತದೆ. ಕೃಷ್ಣಾ ನದಿ ಈ ಊರಿನ ಪಕ್ಕದಲ್ಲೇ ಹರಿದು ಹೋಗುತ್ತಾಳೆ. ಭೂಮಿತಾಯಿ ಯಾವಾಗಲೂ ಕಬ್ಬು, ಸೆಲ್ಲು ಹೊತ್ತುಕೊಂಡು ನೋಡುವವರ ಕಣ್ಣಿಗೆ ಹಚ್ಚ ಹಸುರಾಗಿ ಕಾಣುತ್ತದೆ. ಹೀಗೆ ಶಿರಬೂರು ತನ್ನ ಸುತ್ತಲೂ ಹಸಿರನ್ನು ತುಂಬಿಕೊಂಡಿರುವ ಒಂದು ದ್ವೀಪದಂತೆ ಕಾಣುತ್ತದೆ.

ಇಲ್ಲಿನ ಕೇರಿಯಲ್ಲಿ ೩೦-೩೫ ಮನೆಗಳಿಗೆ. ತಿಂಗಳಿಗೆ ಕೊನೆಪಕ್ಷ ಮೂರು ಬಾರಿಯಾದರೂ ಈ ಕೇರಿಗೆ ಹೋಗುವ ನನಗೆ ಇದು ಆಪ್ತ. ಕೇರಿಯ ದುರ್ಗವ್ವನಿಗೆ ೬ ಜನ ಹೆಣ್ಣು ಮಕ್ಕಳು, ಹಿರಿಯರಿಬ್ಬರಿಗೆ ಮದುವೆಯಾಗಿದೆ. ಉಳಿದವರಿಗೆ ಮುತ್ತುಕಟ್ಟಿದ್ದಾರೆ (ದೇವದಾಸಿ ಬಿಟ್ಟಿದ್ದಾರೆ) ಹಿರಿಯರಿಬ್ಬರಿಗೆ ಮದುವೆಮಾಡಿ ಉಳಿದವರಿಗೆ ಮುತ್ತುಕಟ್ಟಿರುವುದು ಯಾಕೆಂದು ಕಥೆಯನ್ನು ಹೇಳತೊಡಗಿದರು.

ಮೊದಲನೆಯ ಮಗಳು ಒಂದು ಮಗು ಹುಟ್ಟುವವರೆಗೂ ಗಂಡನ ಮನೆಯಲ್ಲಿ ಚೆನ್ನಾಗಿದ್ದಳು. ಮಗು ಹೆಣ್ಣಾದ್ದರಿಂದ ಒಂದಿಷ್ಟೂ ಮುಲಾಜಿಲ್ಲದೆ ತವರಿಗೆ ಅಟ್ಟಿ ಬಿಟ್ಟರು. ಮತ್ತೆ ಗಂಡನ ಮನೆಗೆ ಸೇರಿಸಿಕೊಳ್ಳಲೇ ಇಲ್ಲ.

ಎರಡನೆಯ ಮಗಳ ಗಂಡ ಕುಡುಕ ಮತ್ತು ವ್ಯಭಿಚಾರಿ. ಈಕೆ ಕೂಲಿ-ನಾಲಿ ಮಾಡಿ ಮನೆಯನ್ನು ನಡೆಸುತ್ತಿದ್ದಳು. ಗಂಡನಿಂದ ಹೊಡೆತ, ಬಡಿತ, ಅತ್ತೆ-ಮಾವರ ಕಿರುಕುಳ, ನಿಂದೆಯ ಮಾತು. ಹಾಗಿದ್ದರೂ ಅವಳು ಕಷ್ಟಗಳನ್ನು ನುಂಗಿ ಗಂಡನ ಮನೆಯಲ್ಲೇ ಇರುತ್ತಿದ್ದಳು. ಬಿರುಗಾಳಿಗೆ ಸಿಕ್ಕ ನಾವೆಯಂತೆ ಅವಳ ಬದುಕು

ಒಂದು ದಿನ ಕೂಲಿ-ನಾಲಿ ಮಾಡಿ ಹಸಿದ ಹೊಟ್ಟೆಯಿಂದ ಮಲಗಿದ್ದಾಗ ಗಂಡನು ಕುಡಿದು ಅಮಲೇರಿ ಅವಳನ್ನು ಕೊಂದು ಹಾಕಲು ಕೊಡ್ಲಿಯನ್ನು ಅವಳ ತಲೆಗೂ ಕತ್ತಿಗೂ ಬೀಸಿಯೇ ಬಿಟ್ಟ!

ಅವಳ ಸಂಕಟ ಚೀರಾಟ ನೋಡಿ ಅಕ್ಕಪಕ್ಕದವರು ಸರಕಾರಿ ದವಾಖಾನೆಗೆ ದಾಖಲಿಸಿದರು. ಮತ್ತು ಇವನ ಮೇಲೆ ಕೇಸ್ ಹಾಕಿದರು. ಕೆಲವು ದಿನ ಜೈಲಿನಲ್ಲಿದ್ದು ಹೊರಗೆ ಬಂದನು.

ಜೈಲಿನಿಂದ ಬಂದ ನಂತರ ಇವಳ ಕರುಳಿನ ಕುಡಿ ಗಂಡುಮಗುವನ್ನು ಕೊಡದೆ ಇವಳನ್ನು ತವರಿಗೆ ಅಟ್ಟಿದನು. ಹೆತ್ತ ಕರುಳು ತನ್ನ ಕಂದನ ನೆನಸುತ್ತಾ ದಿನಾಲು ಕೊರಗುತ್ತಾ ತವರಿನಲ್ಲಿ ಕಣ್ಣೀರು ಸುರಿಸುತ್ತಿರುವಳು. ಗಂಡನ ಮನೆಯವರು ಒಮ್ಮೆ ಕರೆಯಲು ಬಂದಾಗ ಊರವರೆಲ್ಲಾ "ಕಟ್ಟಿಗೆ ಎಲ್ಲಿ ಉರಿಯಬೇಕೋ ಅಲ್ಲಿ ಉರಿಯಬೇಕು" "ಕಳಿಸಿಬಿಡಿ" ಎಂದು ಒತ್ತಾಯಿಸಿದರು. ತಂದೆ-ತಾಯಿಯರು ಮಾತ್ರ, "ಬಳ್ಳಿಗೆ ಕಾಯಿ ಭಾರವಲ್ಲ. ನಮ್ಮ ಉಸಿರು ಇರುವ ತನಕ ನಮ್ಮ ಮಗಳನ್ನು ಸಾಕಿಕೊಳ್ಳುತ್ತೇವೆ. ನಮ್ಮ ಮಗಳು ದುಡಿದು ತಿನ್ನಲಿ ಕಟುಕನ ಕೈಗೆ ಕುರಿಯನ್ನು ಕೊಡುವುದಿಲ್ಲ" ಎಂದು ದೃಢವಾಗಿದ್ದಾರೆ.

ಹೀಗೆ ಮದುವೆಯ ತಂಟೆಯೇ ಬೇಡವೆಂದು ಉಳಿದ ನಾಲ್ಕು ಹೆಣ್ಣು ಮಕ್ಕಳು ಗಂಡು ಮಕ್ಕಳಾಗಿ ಇರಲಿ ಎಂದು ಮುತ್ತುಕಟ್ಟಿದ್ದೇವೆ ಎಂದು ಹೇಳಿದರು. ಇವರಲ್ಲಿ ಈಗಾಗಲೇ ಒಬ್ಬಳು ದಂಧೆ ಪ್ರಾರಂಭಿಸಿದ್ದಾಳೆ. ಇನ್ನೊಬ್ಬಳು ತಯಾರಾಗಿದ್ದಾಳೆ

ಇದನ್ನು ನೋಡಿದಾಗ ನನಗನ್ನಿಸುವುದೆಂದರೆ ಒಂದು ಹೆಣ್ಣು ಮಗಳನ್ನು ಯಾವುದಾದರೂ ಬಂಧನದಲ್ಲಿ ಸಿಲುಕಿಸಲು ಪ್ರಯತ್ನಿಸುವರು. ಒತ್ತಾಯ ಪೂರ್ವಕವಾಗಿ ಮದುವೆ ಮಾಡುವರು. ಇಲ್ಲವೇ ಮುತ್ತುಕಟ್ಟಿ ದೇವದಾಸಿಯನ್ನಾದರೂ ಮಾಡುವರು.

ಹೀಗೆ ಸ್ವತಂತ್ರರಾಗಿ ಅವಳ ಬಯಕೆ ಏನು ಎಂಬುದು ಯಾರೂ ತಿಳಿಯುವುದಿಲ್ಲಾ.

ಅಕ್ಕ ಪಕ್ಕ

ಕಳೆದ ಕೆಲವು ವರ್ಷಗಳಿಂದ ಎಷ್ಟೋ ಮಂದಿ ಕಾರ್ಖಾನೆಯ ನೌಕರರನ್ನು ನಾನು ನೋಡಿದ್ದೇನೆ. ದೂರದೂರುಗಳಿಂದ ವಲಸೆ ಬಂದ ಈ ಜನ ಬದುಕುವ ಹಸು ಕಟ್ಟುವ ಕೊಟ್ಟಿಗೆಯಂಥಾ ಕೋಣೆಗಳು, ಗಲ್ಲಾಗಳನ್ನೂ ನೋಡಿದ್ದೇನೆ ಇಲ್ಲಿ ಜನರು ಸರತಿಯಲ್ಲಿ (ಶಿಫ್ಟ್‌ನಲ್ಲಿ) ನಿದ್ರಿಸುತ್ತಾರೆ. ಅವರು ಬದುಕುವ ರೀತಿ ನನಗೆ ಆಘಾತವನ್ನುಂಟುಮಾಡಿತು. ಆದರೆ ಅವರು ಬದುಕನ್ನು ಸ್ವೀಕರಿಸುವ ರೀತಿ ನನ್ನಲ್ಲಿ ಅಷ್ಟೇ ಕುತೂಹಲವನ್ನೂ ಉಂಟು ಮಾಡಿತು. ಇದು ನನ್ನ ದಿಶಾ., ಗೆ ಸ್ಫೂರ್ತಿ ನೀಡಿತು.

ಸಾಯಿ ಪರಾಂಜಪೆ.

ರಾಜ್ಯದಲ್ಲಿ ಒಟ್ಟು 28 ಲೋಕಸಭಾ ಸ್ಥಾನಗಳಿವೆ. ಅವುಗಳಿಗೆ ಸ್ಪರ್ಧಿಸಲು ರಾಜಕೀಯ ಪಕ್ಷಗಳು ಎಷ್ಟು ಮಂದಿ ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಿವೆ? ಕಾಂಗ್ರೆಸ್ ಪಕ್ಷ ಮೂವರು ಮಹಿಳಾ ಅಭ್ಯರ್ಥಿಗಳನ್ನು ಚುನಾವಣಾ ಕಣಕ್ಕೆ ಇಳಿಸಿದೆ. ಇದರಿಂದ ಶೇ 11ಕ್ಕೂ ಕಡಿಮೆ ಪ್ರಾತಿನಿಧ್ಯ ನೀಡಿದಂತಾಯಿತು. ಇನ್ನು ಜನತಾದಳ ಮತ್ತು ಬಿಜೆಪಿಯಲ್ಲಂತೂ ಮಹಿಳೆಯರು ಮತ್ತಷ್ಟು ಹಿಂದುಳಿದಿದ್ದಾರೆ. ಈ ಎರಡು ಪಕ್ಷಗಳು ತಲಾ ಒಬ್ಬೊಬ್ಬ ಮಹಿಳಾ ಅಭ್ಯರ್ಥಿಯನ್ನು ನಿಲ್ಲಿಸಿವೆ. ರಾಜಕೀಯ ಕ್ಷೇತ್ರದಲ್ಲೂ ಮಹಿಳೆಯರ ಬಗೆ ಇಷ್ಟೊಂದು ನಿರ್ಲಕ್ಷ್ಯ ಏಕೆ? ಕರ್ನಾಟಕದಿಂದ ಸಂಸತ್‌ಗೆ ಆಯ್ಕೆಯಾಗಿದ್ದ ಮಹಿಳಾ ಅಭ್ಯರ್ಥಿಗಳಲ್ಲಿ ಡಾ. ಸರೋಜಿನಿ ಮಹಿಷಿ, ಮಾರ್ಗರೇಟ್ ಆಳ್ವ ಮುಂತಾದವರು ಕೇಂದ್ರದಲ್ಲಿ ಸಚಿವರೂ ಆಗಿ ದಕ್ಷತೆಯಲ್ಲಿ ರಾಜ್ಯದ ಪುರುಷ ಸಚಿವರಿಗಿಂತ ತಾವೇನೂ ಕಡಿಮೆ ಇಲ್ಲ ಎಂದು ಸಾಧಿಸಿ ತೋರಿಸಿದ್ದಾರೆ. ಈ ವಿಚಾರದಲ್ಲಿ ರಾಜಕೀಯ ಪಕ್ಷಗಳನ್ನು ಪ್ರಶ್ನಿಸಿದರೆ ಸೂಕ್ತ ಅಭ್ಯರ್ಥಿಗಳು ಸಿಗುವುದಿಲ್ಲ ಎಂಬ ನೆಪ ಒಡ್ಡುತ್ತಾರೆ. ಆದರೆ ಇದು ಹುರುಳಿಲ್ಲದ ವಾದ ಎಂದು ತಳ್ಳಿಹಾಕಬಹುದು.

ಪ್ರಜಾವಾಣಿ "ಸಂಪಾದಕೀಯ"ದಲ್ಲಿ

ಕೇವಲ ಹಣಕ್ಕಾಗಿ ನಟಿಸುವ ನಟಿಯಾಗಷ್ಟೇ ಉಳಿಯಲು ನಾನು ಬಯಸುವುದಿಲ್ಲ. ಕೆಲವೇ ಚಿತ್ರಗಳಲ್ಲಿ ಅಭಿನಯಿಸಿದರೂ ಕಲಾವಿದೆ ಎಂದು ಗುರುತಿಸಿಕೊಳ್ಳಲು ನಾನು ಬಯಸುತ್ತೇನೆ.

ಜಯಾ ಶಾಂತಿ

ನಮ್ಮ ಇತಿಹಾಸ, ಸಂಸ್ಕೃತಿ, ಭಾಷೆ ಎಲ್ಲವೂ ಪುರುಷ ಪ್ರಧಾನವಾದದ್ದು. ಪುರುಷ ಪ್ರಧಾನ ಇತಿಹಾಸದ ದಬ್ಬಾಳಿಕೆ ತಪ್ಪಿಸಿಕೊಳ್ಳಲು ಮತ್ತೊಂದು ಇತಿಹಾಸ ಸೃಷ್ಟಿಸಲು ಜಗತ್ತಿನ ಅನೇಕ ಲೇಖಕಿಯರು ಪ್ರಯತ್ನಿಸಿದ್ದಾರೆ. ಇಂದಿರಾ ಅವರೂ ಈ ದಿಕ್ಕಿನಲ್ಲಿ ಹೆಜ್ಜೆ ಇಟ್ಟರೂ ಸಂಪೂರ್ಣವಾಗಿ ಸಫಲರಾಗಿಲ್ಲ ಪ್ರಜ್ಞಾ ಪೂರ್ವಕವಾಗಿಯೋ, ಅಪ್ರಜ್ಞಾ ಪೂರ್ವಕವಾಗಿಯೋ ತಮ್ಮ ಕೃತಿಗಳಲ್ಲಿ ಹಳೆಯ ಮೌಲ್ಯಗಳನ್ನು ಧಿಕ್ಕರಿಸಿ ಹೊಸ ಮೌಲ್ಯಗಳತ್ತ ತುಡಿಯುವಂತಹ ಪಾತ್ರಗಳನ್ನು ಸೃಷ್ಟಿಸಿ ಹೊಸ ಮಾರ್ಗ ತೋರಿಸಿದ್ದಾರೆ.

ಪ್ರೊ. ಕೀರ್ತಿನಾಥ ಕುರ್ತಕೋಟಿ

ಕನ್ನಡ ಭಾಷೆಯೊಂದನ್ನು ಬಿಟ್ಟರೆ ಮತ್ತಾವ ಭಾಷೆಯೂ ನನಗೆ ಬರದು. ಆದರೂ ನನ್ನ ಕೃತಿಗಳು ಅನೇಕ ಭಾಷೆಗಳಿಗೆ ಅನುವಾದವಾಗಿದ್ದು ನನಗೆ ಸಂತೋಷ ಉಂಟುಮಾಡಿದೆ. ಭಾಷೆ ಬೇರೆಯಾದರೂ ಅರ್ಥ ಒಂದೇ ಅಲ್ಲವೆ?

ಎಂ. ಕೆ ಇಂದಿರಾ.

ನಾನು ಗೊಂಬೆಯಂತೆ ಅಭಿನಯಿಸ್ತೀನಿ. ನಾನು ಕೇವಲ ಚಾಕೋಲೇಟ್ ಹಿರೋಯಿನ್ ಆಗಲಷ್ಟೇ ಲಾಯಕ್ ಎನ್ನುವವರಿಗೆ 'ಪಂಚಮ ವೇದ' ಉತ್ತರವಾಯಿತು. ನಮಗೆ ಅವಕಾಶವೇ ನೀಡದೆ 'ಟೈಪ್ ಕ್ಯಾಸ್ಟ್' ಮಾಡಿದರೆ ಹೇಗೆ?

ಸಂಧ್ಯಾರಾಣಿ (ಚಿತ್ರನಟಿ)

"ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಕೊಡಬೇಕು. ರಾಜಕೀಯದಲ್ಲಿ ಮಹಿಳೆಯರಿಗೆ ಶೇ 30 ರಷ್ಟು ಪ್ರಾತಿನಿಧ್ಯ ನೀಡುವ ಸೂತ್ರವನ್ನು ವಾಸ್ತವಕ್ಕೆ ತನ್ನಿ."

ಅ. ಭಾ. ಮಹಿಳಾ ಸಮ್ಮೇಳನದಲ್ಲಿ ಉತ್ತರ ವಲಯದ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯ.

ಹೆಣ್ಣನ್ನು ಮೊದಲು ತಂದೆ, ನಂತರ ಗಂಡ, ನಂತರ ಮಗ ರಕ್ಷಿಸುತ್ತಾನೆಂಬ ಹಳೆಯ ಮಾತಿನಲ್ಲಿ ನಂಬಿಕೆ ಇಡಬೇಡಿ. ಅದು ನಿಜವಾಗಿಯೂ ತಪ್ಪಾಗಿದ್ದು. ತಂದೆ ಮನೆಗೆ ಬಂದಾಗ ಮೊದಲು ನೋಡಬಯಸುವುದು ಮಗಳನ್ನು. ಹೆಂಡತಿಯಿಲ್ಲದೆ ಗಂಡ ಬದುಕಲಾರ. ಆದರೆ ಹೆಂಡತಿಗೆ ಸಾಧ್ಯ, ಮತ್ತು ಮಗನಿಗೆ ತಾಯಿ ಅವಶ್ಯ.

ಉಷಾಭಾರತಿ. ಮಾಜಿ ಎಂ. ಪಿ.

'ಇಂಡಿಪೆಂಡೆಂಟ್' ನಲ್ಲಿ

ಹೆಣ್ಣುಮಗು ಮತ್ತು ವಿದ್ಯಾಭ್ಯಾಸ

ಕು. ಸರಸ್ವತಿ. ಆರ್. ಕಳಸದ್.

ಲಿಂಗ ಭೇದದ ಕಾರಣದಿಂದಾಗಿ ಇಂದು ಸ್ತ್ರೀ ಅನೇಕ ಸದಾವಕಾಶಗಳಿಂದ ವಂಚಿತಳಾಗುತ್ತಿದ್ದಾಳೆ. ಇದನ್ನು ಸರ್ವರೂ ಒಪ್ಪಿಕೊಳ್ಳುವಂತಹ ಸಂಗತಿಯಾಗಿದೆ, ಇದಕ್ಕಾವ ಪ್ರತ್ಯೇಕ ಸಾಕ್ಷಿಗಳ ಅಗತ್ಯತೆ ಬೇಕಿಲ್ಲ. ಈ ಒಂದು ಸ್ಥಿತಿಗೆ ನಮ್ಮ ದೇಶವು ಹೊರತು ಪಡಿಸಿರುವುದಿಲ್ಲ. ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳನ್ನು ಹೆಚ್ಚಿಸುವಲ್ಲಿ ಶಿಕ್ಷಣವು ಒಂದು ಶಕ್ತಿಯುತ ಸಾಧನವಾಗಿದೆ. ಅದಕ್ಕಾಗಿ ನಮ್ಮ ದೇಶದಲ್ಲಿ ಇಂದು ಸ್ತ್ರೀಗೆ ಸೂಕ್ತ ಶಿಕ್ಷಣ ನೀಡುವುದಕ್ಕಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಆದಾಗ್ಯೂ ಶಿಕ್ಷಣ ವ್ಯವಸ್ಥೆಯಲ್ಲಿ ಸ್ತ್ರೀ ಮತ್ತು ಪುರುಷರ ನಡುವಿನ ತಾರತಮ್ಯ ನಿರಂತರವಾಗಿ ಬೆಳೆಯುತ್ತಲೇ ಸಾಗಿದೆ, ಅದೇ ರೀತಿ ವಿವಿಧ ಶೈಕ್ಷಣಿಕ ಕಾರ್ಯ ಯೋಜನೆಗಳಲ್ಲಿ ಸ್ತ್ರೀಯರ ಪಾಲುಗಾರಿಕೆ ಪುರುಷರಿಗಿಂತ ಕಡಿಮೆಯಾಗುತ್ತಲೆ ಸಾಗಿದೆ. ಈ ರೀತಿಯ ವೈಷಮ್ಯತೆಗೆ ಇಂದಿನ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರಣಗಳೇ ಕಾರಣೀಭೂತವಾಗಿರುವವು. ಕೇವಲ ಸಂವಿಧಾನದ ಶಾಸನಗಳಿಂದ ಹಾಗೂ ಭರವಸೆಗಳಿಂದ ಸ್ತ್ರೀ ಸಮನಾದ ಶಿಕ್ಷಣ ಅವಕಾಶಗಳನ್ನು ಸ್ತ್ರೀಗೆ ನೀಡಲಾಗುವುದಿಲ್ಲ. ಅದರೊಂದಿಗೆ ಸ್ತ್ರೀ ಸ್ತ್ರೀಯರಿಗಾಗಿ ಶಿಕ್ಷಣ ಪಡೆಯುವಂತೆ ಬೆಂಬಲಿಸಬೇಕು, ಹಾಗೂ ಆ ಬಗ್ಗೆ ವಿಶೇಷ ಪ್ರಯತ್ನಗಳನ್ನು ಮಾಡಬೇಕು ಅಂದಾಗ ಮಾತ್ರ ಸ್ತ್ರೀ ಶಿಕ್ಷಣ ಪುರುಷನ ಸಮನಾಗಿ ಬೆಳೆಯಲು ಸಾಧ್ಯ.

ನಾವು ಇತ್ತೀಚೆಗಷ್ಟೆ ೧೯೯೦ನೇ ವರ್ಷವನ್ನು ಮಹಿಳಾ ವರ್ಷವೆಂದು ಆಚರಿಸಿರುವೆವು. ಆದರೆ ಇದಕ್ಕಿಂತ ಮುಂಚೆಯೇ ಅನೇಕ ಶ್ರೇಷ್ಠ ಹಾಗೂ ಪರಿಚಿತರೆನಿಸಿದ ಲೇಖಕರು ಸ್ತ್ರೀ ಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಪಂಡಿತ್ ನೆಹರುರವರು "ಗಂಡು ಮಕ್ಕಳಿಗೆ ನೀಡುವ ಶಿಕ್ಷಣವು ಅವನನ್ನು ಮಾತ್ರ ವಿದ್ಯಾವಂತನನ್ನಾಗಿ ಮಾಡುತ್ತದೆ. ಆದರೆ, ಹೆಣ್ಣು ಮಕ್ಕಳಿಗೆ ಕೊಡುವ ಶಿಕ್ಷಣವು ಇಡೀ ಕುಟುಂಬವನ್ನೆ ವಿದ್ಯಾವಂತರನ್ನಾಗಿ ಮಾಡುವುದು" ಎಂದು ಒಂದೆಡೆ ಹೇಳಿದರೆ, ಇಂಗ್ಲಂಡದ ಚಾರ್ಲಸ್‌ರವರು "ಯಾವುದೇ ಒಂದು ದೇಶದ ನಾಗರಿಕತೆಯನ್ನು ತೀರ್ಮಾನಿಸಬೇಕಾದರೆ ಆ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಸಾಮಾಜಿಕ ಹಾಗೂ ರಾಜಕೀಯವಾಗಿ ನೀಡಿರುವ ಸ್ಥಾನಮಾನವನ್ನು ಗಮನಿಸಬೇಕು" ಎಂದು ನುಡಿದಿರುವರು. ಮತ್ತೊಂದೆಡೆ ಜಾರ್ಜ್ ಹರ್ಬರ್ಟ್ "ಒಬ್ಬ ಶ್ರೇಷ್ಠ ತಾಯಿಯು ಶಾಲೆಯ ನೂರು ಜನ ಶಿಕ್ಷಕರಿಗೆ ಸಮ" ಎಂದು ಹೇಳುವುದರ ಮೂಲಕ ಸ್ತ್ರೀ ಶಿಕ್ಷಣದ ಮಹತ್ವವನ್ನು ಎತ್ತಿ ತೋರಿಸಿದ್ದಾರೆ. ಇನ್ನೂ ಅನೇಕ ಲೇಖಕರು ಉದಾ: ಕೊಠಾರಿ ಆಯೋಗ, ಸುಶೀಲಾ ದೇವಿ ಮುಂತಾದವರು ಸ್ತ್ರೀ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಒಬ್ಬ ಸ್ತ್ರೀಗೆ ಶಿಕ್ಷಣ ನೀಡುವುದರಿಂದ ಕುಟುಂಬ ಮತ್ತು ಸಮಾಜದಲ್ಲಿ ನಾಗರಿಕತೆ ಬೆಳೆಯುವುದು ಹಾಗೂ ಆರೋಗ್ಯಕರವಾದ ಪರಿಸ್ಥಿತಿಯನ್ನು ಕಂಡುಕೊಂಡು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಸ್ಫೂರ್ತಿ ನೀಡುವಳು. ಸುಖ ಸಂತೋಷಕ್ಕೆ ಕುಟುಂಬದಲ್ಲಿ ಮೂಲ ಆಧಾರವಾಗುವಳು. ಅಸಹಾಯಕಳಾಗಿ ಆ ಗೋಡೆಗಳ ಮಧ್ಯೆ ತೊಟ್ಟಿಲ ತೂಗುತ್ತಿದ್ದ ಕೈಗಳು ರಾಷ್ಟ್ರವನ್ನು ಆಳಬಲ್ಲಳೆಂದು ತೋರಿಸಿಕೊಟ್ಟಿದೆ. ಇನ್ನು ಮೇಲಾದರೂ ಹೆಣ್ಣು ಮಕ್ಕಳ ಬಗ್ಗೆ ಮಲತಾಯಿ ಧೋರಣೆ ದೂರವಾಗಲೆಬೇಕು. ಇಂದು ಸ್ತ್ರೀ ವಿವಿಧ ವೃತ್ತಿಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಕಂಡು ಬಂದಿದ್ದರೂ ಇಂತಹವರ ಸಂಖ್ಯೆ ತೀರಾ ಕಡಿಮೆ. ಕಳೆದ ಶತಮಾನಕ್ಕೆ ಹೋಲಿಸಿದರೆ ಭಾರತದಲ್ಲಿ ಸ್ತ್ರೀ ಶಿಕ್ಷಣ ಪ್ರಗತಿ ಸಾಧಿಸಲಾಗಿದ್ದರೂ, ಹೊರ ರಾಷ್ಟ್ರಗಳ ಪ್ರಗತಿಯೊಂದಿಗೆ ಹೋಲಿಸಿದಾಗ ಭಾರತದಲ್ಲಿ ಇದು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಉಳಿದಿದೆ. ಇಂತಹ ಬಾಲ್ಯಾವಸ್ಥೆಗೆ ಕಾರಣಗಳು ಹಲವಾರಿದ್ದರೂ ಇಂದು ಪ್ರಗತಿಯ ಹಾದಿಯಲ್ಲಿ ಸಾಗಿರುವುದು ಶುಭ ಸೂಚನೆ. ಇಂದಿನ

ಸ್ತ್ರೀ ಶಿಕ್ಷಣ ಕುರಿತು ಅರಿಯುವ ಮುನ್ನ ನಮ್ಮ ಭಾರತದ ಸ್ತ್ರೀ ಶಿಕ್ಷಣ ಬೆಳವಣಿಗೆ ಹಿಂದಿನಿಂದ ಯಾವ ರೀತಿ ಬೆಳೆದು ಬಂತು ಎನ್ನುವುದನ್ನು ಅರಿಯುವುದು ಅವಶ್ಯವಾಗಿದೆ, ಸಾಮಾನ್ಯವಾಗಿ ಇತಿಹಾಸವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ,

೧) ವೇದಕಾಲ

೨) ಸಂಹಿತೆ, ಬ್ರಹ್ಮ, ಉಪನಿಷತ್‌ಗಳ ಕಾಲ

೩) ಸೂತ್ರ, ಮಹಾಕಾವ್ಯ, ಮೊದಲಿನ ಸ್ಮೃತಿಗಳ ಕಾಲ

೪) ಸ್ಮೃತಿ, ಬಾಷ್ಯ ಮತ್ತು ಇತರ ಸಾಹಿತ್ಯದ ಕಾಲ

೧. ವೇದಕಾಲ:- ಈ ಕಾಲದಲ್ಲಿ ಸ್ತ್ರೀಯು ಸ್ಥಾನಮಾನ ಗೌರವಯುತವಾಗಿಯೇ ಇತ್ತು. ಶಿಕ್ಷಣದ ತಾತ್ವಿಕ ವಿಚಾರದ, ರಾಜಕೀಯ ಚರ್ಚೆಗಳಲ್ಲಿ ಭಾಗವಹಿಸಲು, ವೇದಭ್ಯಾಸ ಮಾಡಲು, ಸಮಾನತೆ ನೀಡಲಾಗಿತ್ತು, ಈ ರೀತಿ ಧರ್ಮ, ಅರ್ಥ, ಕಾಮ ಮೋಕ್ಷಗಳಿಗೆ ಪುರುಷ ಸಮಾನ ಅಧಿಕಾರ ಹೊಂದಿದ್ದಳು. ಇದಕ್ಕೆ ಸಾಕ್ಷಿ ಅಂದು ಬ್ರಹ್ಮವಾದಿನಿಯರು ಅಂದರೆ ಘೋಷಾ, ಗೋದಾ, ವಿಶ್ವವರಾ, ಅಪಲಾ ಮುಂತಾದವರು ಬರೆದ ಋಗ್ವೇದ ಸಾಹಿತ್ಯ ಕೃತಿಯಲ್ಲಿ ಬರೆದ ಸೂತ್ರಗಳು ಈ ರೀತಿ ಉಚ್ಚ ಶಿಕ್ಷಣದಲ್ಲಿ ಅವರು ಎಲ್ಲರಂತೆ ವೇದ, ಬ್ರಾಹ್ಮಣ, ಉಪನಿಷದ್, ವೇದಾಂಗಗಳನ್ನು ಅಭ್ಯಸಿಸುತ್ತಿದ್ದರು.

೨. ಸಂಹಿತೆ, ಬ್ರಾಹ್ಮಣ, ಉಪನಿಷದ್‌ಗಳ ಕಾಲ:- ಈ ಕಾಲಕ್ಕೆ ಸ್ತ್ರೀ ಶಿಕ್ಷಣ ಇಳಿಮುಖವಾಗುತ್ತಾ ಹೋಯಿತು. ಮೇಲ್ಮಟ್ಟದ ಕುಟುಂಬಗಳಲ್ಲಿನ ಹುಡುಗಿಯರಿಗೆ ಮಾತ್ರ ಉಪನಯನದ ಸಂಸ್ಕಾರ ಕೊಡುವ ವಾಡಿಕೆ ಉಳಿದಿತ್ತು. "ಅಪತ್ರೀನಾಂತು ನಾರೀಮ್ ಆದ್ಯ ಪ್ರಬೃತಿ ಪಾತಕಂ" ಎಂದು ಅಂದರೆ "ಹೆಣ್ಣು ಮಕ್ಕಳು ಮದುವೆಯಾಗದಿದ್ದರೆ ಅಪರಾಧ" ಎಂದು ದೀರ್ಘತಮಸ್ ಎಂಬ ಋಷಿ ಮದುವೆಯ ಕಟ್ಟಳೆಗಳನ್ನು ಬಾಲಕಿಯರ ಎಳೆ ವಯಸ್ಸಿನಲ್ಲೆ ಪ್ರಬುದ್ಧ ವಿಚಾರದ ಹೊರೆ ಹಾಕಿದ.

೩. ಸೂತ್ರ, ಮಹಾಕಾವ್ಯ, ಸ್ಮೃತಿಗಳ ಕಾಲ:- ಈ ಕಾಲದಲ್ಲಿ ಸ್ತ್ರೀಯರು ಗೌರವಯುತ ಸ್ಥಾನಕ್ಕೂ ಶಿಕ್ಷಣಕ್ಕೂ ಅಳಿಗಾಲದ ಬುನಾದಿ ಹಾಕಿದರು. ಸ್ತ್ರೀ ಶಿಕ್ಷಣ ರಸಾತಳಕ್ಕಿಳಿಯಿತು. ರಾಮಾಯಣ, ಮಹಾಭಾರತಗಳ ಅವಧಿಯ ಆದಿ ಭಾಗದಲ್ಲಿ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗೆ ಮಾನ್ಯತೆ ಇತ್ತು, ಅಲ್ಲದೇ ಸಾಕಷ್ಟು ಶಿಕ್ಷಣ ಉಚ್ಚ ಮಟ್ಟದಲ್ಲಿಯೇ ಇತ್ತು. ಉದಾ: ಸೀತಾ, ಕೌಸಲ್ಯ, ತಾರೆ.... ಕಾಣಬಹುದು. ಬುದ್ಧನ ಕಾಲದವರೆಗೆ ಸ್ತ್ರೀ ಶಿಕ್ಷಣ ಉನ್ನತ ಸ್ಥಾನ ಪಡೆದಿತ್ತು. ಆನಂತರ ಸ್ತ್ರೀ ಶಿಕ್ಷಣ ಅವನತಿಗೆ ಇಳಿಯಿತು. ಸ್ತ್ರೀ ಎಂದರೆ ಶೂದ್ರರೆಂದು ಪರಿಗಣಿಸಲ್ಪಟ್ಟರು.

೪. ಆಧುನಿಕ ಯುಗ:- ಈ ಯುಗದಲ್ಲಿ ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡದಾಯಿತು. ಬಾಲ್ಯ ವಿವಾಹ, ಜಾತೀಯತೆ, ವರದಕ್ಷಿಣೆ ಸಮಸ್ಯೆಗಳು ಸ್ತ್ರೀ ಶಿಕ್ಷಣದ ಅಧೋಗತಿಗೆ ಕಾರಣವಾದವು. ಇಂದಿಗೂ ಸಹಾ ಶಿಕ್ಷಣ ವ್ಯವಸ್ಥೆಯಲ್ಲಿ ಸ್ತ್ರೀ ಹಾಗೂ ಪುರುಷರ ನಡುವೆ ಅಗಾಧವಾದ ತಾರತಮ್ಯ ಮೂಡಿನಿಂತಿದೆ. ೧೯೭೧ ರಿಂದ ೧೯೮೧ರವರೆಗಿನ ದಶಕದ ನಡುವೆ ದೃಷ್ಟಿ ಹಾಕಿದಾಗ ಗಂಡು ಮಕ್ಕಳ ಸಂಖ್ಯೆ ಶಾಲೆಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆಗಿಂತ ಹೆಚ್ಚಿಗಿದ್ದುದು ಕಂಡು ಬರುತ್ತದೆ. ೧೯೭೧ ರಂದು ಶಿಕ್ಷಣ ವ್ಯವಸ್ಥೆಯನ್ನು ನೋಡಲಾಗಿ ಗಂಡು ಮಕ್ಕಳ ಸಂಖ್ಯೆ ೫,೫೭,೧೨,೬೨೩ ಇದ್ದರೆ ಹೆಣ್ಣು ಮಕ್ಕಳ ಸಂಖ್ಯೆ ೨,೫೬,೮೨,೧೩೯ ಇದೆ. ಅದೇ ರೀತಿ ೧೯೮೧ ರಲ್ಲಿ ಪರಿಶೀಲಿಸಲಾಗಿ ಗಂಡು ಮಕ್ಕಳ ಸಂಖ್ಯೆ ಶೇಕಡ ೪೭ ಇದ್ದರೆ, ಹೆಣ್ಣು ಮಕ್ಕಳ ಸಂಖ್ಯೆ ಕೇವಲ ಶೇಡಕ ೨೫ ರಷ್ಟು ಮಾತ್ರ ಕಂಡು ಬಂದಿದೆ. ಈ ರೀತಿಯ ವ್ಯತ್ಯಾಸ್ಯತೆಗೆ ಮುಖ್ಯವಾಗಿ ನಾಲ್ಕು ಕಾರಣಗಳಿವೆ. ಯಾವುವೆಂದರೆ ೧. ಆರ್ಥಿಕ, ೨. ಸಾಮಾಜಿಕ, ೩. ಶೈಕ್ಷಣಿಕ ಹಾಗೂ ೪. ಉಪಾಧ್ಯಾಯನಿಯರ ಅಭಾವ.

೧. ಆರ್ಥಿಕ ಕಾರಣಗಳು:- ನಮ್ಮ ದೇಶವು ಬಡತನದ ದೇಶವಾಗಿದ್ದು, ಹರಿದು ತಿನ್ನೋ ಬಡತನ ಹಳ್ಳಿಗಾಡಿನ ಜನತೆಗೆ ಶೈಕ್ಷಣಿಕ ಚಿಂತಗಿಂತ

ಹೊಟ್ಟೆ ಪಾಡಿನ ಚಿಂತೆಯನ್ನೆ ಪ್ರಧಾನವನ್ನಾಗಿ ಮಾಡಿದೆ. ಆರ್ಥಿಕವಾಗಿ ಭದ್ರತೆ ಹೊಂದಿದವರು, ಶಿಕ್ಷಣದ ಚಿಂತೆ ಮಾಡಿದ್ದೇ ಆದರೂ ತಮ್ಮ ಗಂಡು ಮಗುವಿನ ಬಗ್ಗೆ ಮಾಡುತ್ತಾರೆ. ಕಾರಣ ಮುಪ್ಪಿನ ಕಾಲದಲ್ಲಿ ಆಗುವನೆಂದು. ಅಲ್ಲದೇ ಹೆಣ್ಣು ಕೊಟ್ಟ ಮನೆಗೆ ಹೋಗುವವಳೆಂದು, ಇನ್ನು ಹಲವು ಕಾರಣ ಗಳೆಂದರೆ ಶಾಲೆ, ಕಾಲೇಜುಗಳು ಊರಿನಿಂದ ದೂರ ವಿರುವುದರಿಂದ, ಹೆಣ್ಣು ಮಕ್ಕಳ ನಿಲಯದ ವ್ಯವಸ್ಥೆ ಇಲ್ಲದೇ ಇರುವುದರಿಂದ, ಹೆಣ್ಣು ಮಕ್ಕಳನ್ನು ದೂರ ಕಳಿಸಲು ಹೆತ್ತವರು ಹಿಂಜರಿಯುತ್ತಾರೆ.

೨. ಸಾಮಾಜಿಕ ಕಾರಣಗಳು:– ಶೈಕ್ಷಣಿಕ ಸಮಸ್ಯೆಗಳೆಂದರೆ ಹೆಣ್ಣು ಮಕ್ಕಳಿಗೆ ಊರಿನ ಸಮೀಪವೇ ಶಾಲೆಗಳು ಇಲ್ಲವಾಗಿವೆ. ವಿದ್ಯಾರ್ಥಿನಿಲಯ ಗಳ ಕೊರತೆ ಇದೆ. ಕೆಲವೆ ವಿದ್ಯಾರ್ಥಿನಿಲಯಗಳಿದ್ದರೂ ಶಿಸ್ತಿನ ಕೊರತೆಗಳಿವೆ. ಹೀಗಾಗಿ ತಂದೆ–ತಾಯಿಗಳು ಅಂತಹ ನಿಲಯಗಳಲ್ಲಿ ತಮ್ಮ ಹೆಣ್ಣು ಮಕ್ಕಳನ್ನಿಡಲು ಹೆದರುತ್ತಿದ್ದರು.

ಉಪಾಧ್ಯಾಯನಿಯರ ಕೊರತೆ:– ಇದಕ್ಕೆ ಕಾರಣ ಉಪಾಧ್ಯಾಯಿನಿಯರಾಗಿ ಸೇವೆ ಸಲ್ಲಿಸುವವರಿಂದು ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮತ್ತೆ ಕೆಲವರು ಮದುವೆಯ ನಂತರ ವೃತ್ತಿಯನ್ನು ಬಿಡಬೇಕಾಗುತ್ತದೆ. ಹೀಗಾಗಿ ಹೊಸದಾಗಿ ಬರುವ ಉಪಾಧ್ಯಾಯಿನಿಯರಿಗಾಗಿ ಹಿಂದಿನ ಉಪಾಧ್ಯಾಯಿನಿಯರ ಮಾದರಿಯನ್ನು ತೋರಿಸಲಾಗುತ್ತಿಲ್ಲ. ಹೀಗಾಗಿ ವೃತ್ತಿಯಲ್ಲಿ ಪ್ರವೇಶಿಸಲು ಹೊರಟ ಮಹಿಳೆಯರು ಹಿಂದೇಟು ಹಾಕುತ್ತಿರುವರು. ಈ ರೀತಿ ಸ್ತ್ರೀಯರ ಶಿಕ್ಷಣ ಕುಂಠಿತವಾಗಲು ಅನೇಕ ಕಾರಣಗಳಿವೆ. ಇವುಗಳನ್ನು ತಡೆಗಟ್ಟಬೇಕಾದರೆ ಕೆಲವೊಂದು ಸೂಕ್ತ ಕ್ರಮ ಕೈಕೊಳ್ಳಬೇಕಾದದ್ದು ಅಗತ್ಯವಾಗಿದೆ.

೧) ಇಂದು ಒದಗಿಸುತ್ತಿರುವ ಸ್ತ್ರೀ ಶಿಕ್ಷಣದ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಮಹಿಳೆಯರಿಂದಲೇ ಪ್ರಚೋದನೆ ಒದಗಬೇಕು. ಅಂದರೆ ತನ್ನ ಮಕ್ಕಳಿಗಾಗಲಿ, ಸಹೋದರಿಯರಿಗಾಗಲೀ ಶಿಕ್ಷಣ ಪಡೆಯುವಲ್ಲಿ ಸಹಕಾರದಿಂದ ಬೆಂಬಲಿಸಬೇಕು.

೨) ಸಾಮಾಜಿಕ ಶಿಕ್ಷಣ ಸಾರ್ವಜನಿಕವಾಗಿಯಾಗಲೀ, ಪ್ರತ್ಯೇಕವಾಗಿಯಾಗಲೀ ಹಳ್ಳಿಗಳಲ್ಲಿ ಹಾಗೂ ನಗರಗಳಲ್ಲಿ ತಂದೆ-ತಾಯಿಗೋಸ್ಕರ ಹಮ್ಮಿಕೊಳ್ಳಬೇಕು. ಈ ಯೋಜನೆ ತಂದೆ–ತಾಯಿಗಳಲ್ಲಿದ್ದ ಸ್ತ್ರೀ ಶಿಕ್ಷಣದ ಅಲಕ್ಷ್ಯವನ್ನು ಹೋಗಲಾಡಿಸುವ ಗುರಿ ಹೊಂದಿರಬೇಕು.

೩) ಸ್ತ್ರೀ ಶಿಕ್ಷಣಕ್ಕೆ ಮಾರಕವಾದ ಬಾಲ್ಯ ವಿವಾಹ, ಜಾತೀಯತೆ, ವರದಕ್ಷಿಣೆ ಪಿಡುಗುಗಳನ್ನು ತೊಲಗಿಸಲು ಬಾಗಿಲಿನಿಂದ ಬಾಗಿಲಿಗೆ ಹೋಗಿ ಜನರಲ್ಲಿ ಜಾಗೃತಿ ಮೂಡಿಸಬೇಕು. ಈ ಕಾರ್ಯ ಈಗಾಗಲೇ ಚೀನಾದಲ್ಲಿ ಆರಂಭಗೊಂಡಿದೆ. ಸ್ತ್ರೀ ಸಂಘಟನೆಗಳು ಇನ್ನು ಹೆಚ್ಚಿನ ರೀತಿಯಲ್ಲಿ ಮಹಿಳಾ ಶೋಷಣೆಯನ್ನು ಪ್ರತಿಭಟಿಸುವಂತಾಗಬೇಕು.

೪) ಹೆಣ್ಣು ಮಕ್ಕಳ ಶಾಲೆಗಳ ಸಂಖ್ಯೆ ಮಾತ್ರ ಹೆಚ್ಚಿಸಿದರೆ ಸಾಲದು ಅದರೊಂದಿಗೆ ಅವರಿಗೆ ಅಗತ್ಯವಿದ್ದ ರಕ್ಷಣಾ ಕೇಂದ್ರಗಳನ್ನು ಹಳ್ಳಿಗಳಲ್ಲಿ ನಿರ್ಮಿಸಿ ಹಳ್ಳಿಗಳ ವೃದ್ಧ ಸ್ತ್ರೀಯರು ಅವುಗಳನ್ನು ನಡೆಸಿಕೊಂಡು ಹೋಗುವಂತೆ ಮಾಡಬೇಕು. ಇದರಿಂದ ಅವರು ಆರ್ಥಿಕವಾಗಿ ಇನ್ನೊಬ್ಬರನ್ನವಲಂಬಿಸುವುದನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಿದಂತಾಗುತ್ತದೆ.

೫) ಹೊಸ ಹೊಸ ಶಿಕ್ಷಣ ಸಂಸ್ಥೆಗಳನ್ನು, ಶಾಲೆಗಳನ್ನು ಹಳ್ಳಿಗಳ ಹಾಗೂ ನಗರಗಳ ಸಮೀಪ ಸ್ಥಾಪಿಸಬೇಕು ಹಾಗೂ ವಿದ್ಯಾರ್ಥಿನಿಯರ ನಿಲಯಗಳನ್ನು ಹಾಗೂ ಪಠ್ಯ ಪುಸ್ತಕಗಳನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆ ಮಾಡಬೇಕು.

೬) ಲಿಂಗ ಭೇದ ಸಮಸ್ಯೆಯನ್ನು ಸಾಮಾಜಿಕ ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ತೆಗೆದು ಹಾಕಲು ಪ್ರಯತ್ನಿಸಬೇಕು. ಅದಕ್ಕಾಗಿ ಸ್ತ್ರೀ ಮತ್ತು ಪುರುಷರು ವಿವೇಚನೆಯನ್ನೂ ಹಾಗೂ ಮನೋಭಾವಗಳನ್ನು ಬದಲಾಯಿಸಲು ಶ್ರಮಿಸಬೇಕು. ಈ ದಿಶೆಯಲ್ಲಿ ಪ್ರಸಾರಾಂಗಗಳು, ಸಂಪರ್ಕ ಸಾಧನಗಳು, ಶಿಕ್ಷಣ ಸಂಸ್ಥೆಗಳು ಪ್ರಯತ್ನಿಸಬೇಕು. ಈ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದ ಆದರೆ ಖಂಡಿತಾ ಇಂದಿನ ನಾರಿಯೇ ನಾಳಿನ ನಾಡಿನ ನಾಗರಿಕತೆಯನು ಸುಂದರವಾಗಿ ರೂಪಿಸಬಲ್ಲವಳಾಗುತ್ತಾಳೆ ಎಂದರೆ ತಪ್ಪೇನಿಲ್ಲ.

ಕಪ್ಪು ತಪ್ಪಲ್ಲ.

ನಮ್ಮ ದೇಶದಲ್ಲಿ ಕಪ್ಪು ಬಣ್ಣವನ್ನು ಅದೇಕೆ ಅಷ್ಟು ತಿರಸ್ಕಾರದಿಂದ ಕಾಣುತ್ತಾರೆ? ರೂಪಕ್ಕೂ ಬಣ್ಣಕ್ಕೂ ಏನೂ ಸಂಬಂಧವಿಲ್ಲ. ಆದರೂ ಕಪ್ಪಗಿರುವವರನ್ನು ಕುರೂಪಿಗಳ ಸಾಲಿಗೆ ಸೇರಿಸುತ್ತಾರೆ. ಕಪ್ಪು ಎಂದರೇನೇ ಕುರೂಪ ಎಂದುಕೊಳ್ಳುತ್ತಾರೆ. ಅದರಲ್ಲೂ ಹುಡುಗಿಯರು ಕಪ್ಪಗಿದ್ದರಂತೂ, ಅವರು ಅನುಭವಿಸಬೇಕಾದ ಮಾನಸಿಕ ಹಿಂಸೆಯನ್ನು ಅನುಭವಿಸಿದವರೇ ಊಹಿಸಬಲ್ಲರು.

ಕುಟುಂಬದ ಉಳಿದ ಸದಸ್ಯರು ಬೆಳ್ಳಗಿದ್ದು ಹುಡುಗಿ ಒಬ್ಬಳೇ ಕಪ್ಪಗಿದ್ದರೆ ಅವಳು ಆ ಬಣ್ಣದ ಮೂಲಕವೇ ಗುರುತಿಸಲ್ಪಡುತ್ತಾಳೆ. ನಾಲ್ಕು ಜನರಲ್ಲಿ "ಆ ಕಪ್ಪಗಿನ ಹುಡುಗಿ" ಎಂದರೆ ಅವಳಿಗೆ ಏನನ್ನಿಸಬೇಕು? ಅವಳ ಬಗ್ಗೆ ಉಳಿದವರು ಕನಿಕರ ಪಡುತ್ತಾರೆ. ತಂದೆ–ತಾಯಿಗಳಿಗೆ ಆಕೆ ಹೆಚ್ಚಿನ ಭಾರವೆಂದು ಪರಿಗಣಿಸುತ್ತಾರೆ. ಬೆಳ್ಳಗಿರುವವರನ್ನು ಯಾರಾದರೂ ಮದುವೆ ಮಾಡಿಕೊಂಡು ಹೋಗುತ್ತಾರೆ. ಆದರೆ ಕಪ್ಪಗಿರುವವರನ್ನು ಯಾರು ಮಾಡಿಕೊಳ್ಳಬೇಕು? ಅದಕ್ಕೆ "ಹೆಚ್ಚು ವರದಕ್ಷಿಣೆ ಕೊಡಲು ತಯಾರಾಗಿರಿ" ಎಂದು ತಂದೆ ತಾಯಿಗಳಿಗೆ ಉಪದೇಶ ನೀಡುತ್ತಾರೆ. ಮದುವೆ ಮುಂಜಿಗಳಲ್ಲಿ ಓಡಾಡುವ ಹುಡುಗಿಯರಲ್ಲಿ ಕಪ್ಪು ಹುಡುಗಿಯರು ಸಾಮಾನ್ಯವಾಗಿ ಕಾಣುವುದಿಲ್ಲ. ಸಭೆ ಸಮಾರಂಭಗಳಲ್ಲಿ ಅವರು ಭಾಗವಹಿಸುವುದೇ ಇಲ್ಲ. ತಮ್ಮ ಬಣ್ಣದಿಂದಾಗಿ ಒಂದು ರೀತಿಯ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸನ್ನು ಬೆಳೆಸಿಕೊಂಡಿರುತ್ತಾರೆ. ಕೆಲವು ಅಪವಾದವೆನ್ನುವ ಚುರುಕು ಹುಡುಗಿಯರಿದ್ದರೂ ಅವರು ಸುಶಿಕ್ಷಿತ ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಯಾರಾದರೂ ರೂಪವಂತ (ಅವರ ಅರ್ಥದಲ್ಲಿ) ಹುಡುಗನೊಬ್ಬ ಕಪ್ಪು ಹುಡುಗಿಯನ್ನು ಮದುವೆ ಮಾಡಿಕೊಂಡರೆ "ಅವನಿಗೇನು ಕಡಿಮೆಯಾಗಿತ್ತು" ಎಂದೋ ಅಥವಾ "ಆಸ್ತಿಗಾಗಿಯೇ ಮಾಡಿಕೊಂಡಿರಬೇಕು" ಎಂದುಕೊಳ್ಳುತ್ತಾರೆ.

ಕಪ್ಪು ಕುರೂಪವನ್ನು ಸೂಚಿಸುತ್ತದೆಯೇ? ಅತ್ಯಂತ ಸುಂದರಿಯೆನಿಸಿಕೊಂಡ ದ್ರೌಪದಿಯನ್ನು ಕೃಷ್ಣೆ ಎನ್ನುತ್ತಿದ್ದರು. ಹದಿನಾರು ಸಾವಿರ ಪತ್ನಿಯರನ್ನು ಹೊಂದಿದ್ದ, ತನ್ನ ರಾಸ ಲೀಲೆಗಳಿಂದ ಗೋಪಿಕೆಯರ ಮನಗೆದ್ದ ಶ್ರೀ ಕೃಷ್ಣ ಕೂಡ ಕಪ್ಪಗಿದ್ದ. ಕಪ್ಪು ಬಣ್ಣಕ್ಕೆ ತನ್ನದೇ ಆದ ಹೊಳಪಿದೆ. ಕಪ್ಪು ಮೋಡಗಳು ಸುರಿಸುವ ಮಳೆ ತಂಪು. ಕಪ್ಪು ಕೋಗಿಲೆಗಳ ಗಾನ ಇಂಪು. ಕಪ್ಪು ಕಂಗಳು. ಕರ್ನಾಟಕ ನೆಲದ ಬಣ್ಣವೂ ಕಪ್ಪು (ಈ ನೆಲದ ಪ್ರಾಣಿಯಾದ ಆನೆಯೂ ಕಪ್ಪು). ರಾತ್ರಿಯು ಕಪ್ಪಿನಲ್ಲಿಯೇ ಅಲ್ಲವೆ ತಾರೆಗಳು ಮಿನುಗುವುದು, ಬೆಳದಿಂಗಳು ಓಲಾಡುವುದು. ಹಗಲಿನ ಬೆಳಕಿನಲ್ಲಿ ಕತ್ತಲಿನ ಸೌಂದರ್ಯ? ನನಗೆ ಒಮ್ಮೊಮ್ಮೆ ಅನ್ನಿಸುತ್ತದೆ — ಕಪ್ಪಿನ ಬಗೆಗೆ ಈ ಮನೋಭಾವನೆಗೆ ಬ್ರಿಟಿಷರೇ ಕಾರಣರಿರಬಹುದು. ಭಾರತೀಯರು ಕರಿಯರೆಂದು ಬ್ರಿಟಿಷರು ಜರೆಯುತ್ತಿದ್ದರು. ದಬ್ಬಾಳಿಕೆ ನಡೆಸಿ, ನಮ್ಮನ್ನು ಆಳತೊಡಗಿದರು. ಭಾರತೀಯರ ಕೀಳರಿಮೆ ಇಂಥ ಒಂದು ಮನೋಭಾವನೆಗೆ ಹುಟ್ಟು ಹಾಕಿರಬಹುದು. ಅಥವಾ ಅದು ಮೊದಲಿನಿಂದಲೂ ಇತ್ತೋ ಗೊತ್ತಿಲ್ಲ.

ನಮ್ಮ ಟಿ. ವಿ., ಸಿನಿಮಾ ಮಾಧ್ಯಮಗಳು ಕೂಡ ಬಿಳಿಯ ಬಣ್ಣಕ್ಕೆ ಪ್ರಾಧಾನ್ಯತೆ ಕೊಡುತ್ತವೆ. ಕೆಟ್ಟ ಕ್ರೂರ ಪಾತ್ರಗಳನ್ನು ಕಪ್ಪಾಗಿಸಲು ಪ್ರಯತ್ನಿಸುತ್ತವೆ. ಇಂಗ್ಲಿಷ್ ವಾರ್ತೆ ಓದುವ "ತೇಜೇಶ್ವರ ಸಿಂಗ್" ರ ಕುರಿತು ಒಮ್ಮೆ ವಿವಾದವೆದ್ದಿತ್ತು. ಮನೋಹರ ಮಾಳಗಾಂವಕರರು "ವೈಟನಿಂಗ್ ಆಫ್ ಗೀತಾಂಜಲಿ ಅಯ್ಯರ್" ಎಂಬ ಲೇಖನ ಬರೆದಿದ್ದರು. ಅದರಲ್ಲಿ ಅವರು ಗೀತಾಂಜಲಿಯ ಕಲೆಯಾದ ಮೇಕಪ್ ಅನ್ನು ಟೀಕಿಸಿ ಅವಳು ತನ್ನ ಸ್ವಾಭಾವಿಕ ಬಣ್ಣದಲ್ಲಿ ವಾರ್ತೆ ಓದಿದರಾಗದೇ? ಎಂದು ಪ್ರಶ್ನಿಸಿದ್ದರು. ನಮ್ಮ ಸಾಹಿತ್ಯವೂ ಕೂಡ ಇಂಥದೊಂದು ಮನೋಭಾವನೆ ಬೆಳೆಯಲು ಕಾರಣವಾಗಿದೆ. ಬರೀ ಬಿಳಿಯ ಬಣ್ಣದಲ್ಲಿ ಸೌಂದರ್ಯವನ್ನರಸಿದ ಅರಸಿಕ ಸಾಹಿತಿಗಳು ಸಾಹಿತ್ಯ ರಚಿಸಿದ್ದರಿಂದ ಹೀಗಾಗಿದೆಯೊ ಏನೊ

30 ನೇ ಪುಟ ನೋಡಿ.

ದೇವದಾಸಿಯರ ಮದುವೆ

ಮದುವೆ ಎಂಬ ಪದಕ್ಕೆ, ಮೂರಕ್ಷರಕ್ಕೆ, ಭಾರತೀಯ ಸಂಸ್ಕೃತಿಯಲ್ಲಿ ತುಂಬಾ ಮಹತ್ವವಾದ ಅರ್ಥ ಇದೆ. ನಮ್ಮ ಸಮಾಜದಲ್ಲಿ ಮದುವೆಯಾದವರಿಗೆ ಸಿಗುವ ಗೌರವವೇ ಬೇರೆ. ಒಂದು ವೇಳೆ ಹೆಣ್ಣಾಗಲೀ, ಗಂಡಿಗಾಗಲೀ ಮದುವೆಯಾಗಲಿಲ್ಲವೆಂದರೆ ಸಮಾಜ ವಕ್ರ ದೃಷ್ಟಿಯಿಂದ ನೋಡುವುದಲ್ಲದೇ, ಅವರಿಗೆ ಸಿಗುವ ಬೆಲೆಯೂ ಅಷ್ಟರಮಟ್ಟಿಗೇ ಎನ್ನಬಹುದು. ಇಂಥ ಸಂದರ್ಭದಲ್ಲಿ ಮದುವೆಯೇ ಇಲ್ಲದ ಹಾಗೂ ದೇವಿಯೊಂದಿಗೆ ಮದುವೆಯಾಗುವ ದೇವದಾಸಿಯರಿಗೆ ಸಿಗುವ ಸ್ಥಾನವೆಷ್ಟೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಇಂತಹ ಸನ್ನಿವೇಶದಲ್ಲಿ ಏಪ್ರಿಲ್ ೧೦ನೇ ತಾರೀಖನ್ನು ಕರ್ನಾಟಕದ ಇತಿಹಾಸದಲ್ಲಿ ಒಂದು ಮಹತ್ವದ ದಿನವನ್ನಾಗಿಸಿತು ಕರ್ನಾಟಕ ಸರ್ಕಾರ. ಜಿಲ್ಲಾ ಪರಿಷತ್ತು ಹಾಗು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರ ಆಶ್ರಯದಲ್ಲಿ ೧೫ ಜೋಡಿ ದೇವದಾಸಿಯರ ಮದುವೆ ನಡೆಸಿ ತಾವು ಹಾಕಿಕೊಂಡಿದ್ದ ಗುರಿ ಸಾಧಿಸುವಲ್ಲಿ ಯಶಸ್ವಿಯಾಗಿದ್ದರು. ಇಲ್ಲಿ ಮದುವೆಯಾದ ದೇವದಾಸಿಯರಿಗಂತೂ ಒಮ್ಮೆ ಮದುವೆಯಾಗಿತ್ತು. ಅದು ಎಲ್ಲಮ್ಮ ದೇವಿಯ ಜೊತೆ. ಅಂತೆಯೇ ಇವರನ್ನು ಮದುವೆಯಾದ ಗಂಡಸರಿಗೂ (ಹೆಚ್ಚು ಮಂದಿಗೆ) ಇದು ಎರಡನೆಯದೋ, ಮೂರನೆಯದೋ ಮದುವೆ.

ಮದುವೆ ನಡೆಯುವ ಸ್ಥಳದಲ್ಲಿ ಉತ್ತಮ ವ್ಯವಸ್ಥೆಯ ಏರ್ಪಾಡಾಗಿತ್ತು. ದೊಡ್ಡದಾದ ಒಂದು ವೇದಿಕೆ ನಿರ್ಮಾಣ ಮಾಡಿ ಹೂ, ಹಸಿರು ಗಳಿಂದ ಬಣ್ಣದ ಕಾಗದಗಳಿಂದ ಶೃಂಗರಿಸಲಾಗಿತ್ತು. ಸಂಪ್ರದಾಯದ ಪ್ರಕಾರ ಆ ವೇದಿಕೆಯ ಮೇಲೆ ಸರ್ಕಾರಿ ಅಧಿಕಾರಿಗಳು ಹಾಗೂ ರಾಜಕೀಯ ವೃಂದದವರು ಆಸೀನರಾಗಿದ್ದರು. ಎಲ್ಲರಿಗೂ ಸ್ವಾಗತ ಕೋರಿ ಮಾಲಾರ್ಪಣೆ ಮಾಡಿದ್ದು, ಎಲ್ಲರೆದುರೂ ಹೂ ಮಾಲೆಗಳು ಕುಳಿತಿದ್ದವು.

ಮದುವೆಗಾಗಿ ಒಂದು ದೊಡ್ಡ ಪೆಂಡಾಲ್ (ಚಪ್ಪರ) ಅನ್ನೇ ನಿರ್ಮಿಸಲಾಗಿದ್ದು, ಸುಂದರವಾಗಿ ಅಲಂಕೃತಗೊಳಿಸಿದ್ದರು. ವೇದಿಕೆ ಎದುರಿಗೇ ಕೆಳಗೆ ವಧೂವರರನ್ನು ಸಾಲಾಗಿ ಕೂರಿಸಲಾಗಿತ್ತು. ಅದೇ ರೀತಿ ಜಿಲ್ಲಾ ಪರಿಷತ್ ಸದಸ್ಯರು ಕುಳಿತುಕೊಳ್ಳಲು, ಪತ್ರಿಕಾಕರ್ತರು, ಕುಳಿತುಕೊಳ್ಳಲು ಜಾಗ ನಿಗದಿಪಡಿಸಲಾಗಿತ್ತು. ಸಾವಿರಾರು ಮಂದಿ ನೆರೆದಿದ್ದರು. ಜನರ ಮಧ್ಯದಲ್ಲಿ ಖಾಕಿ ಬಟ್ಟೆಗಳು ಕಾಣುತ್ತಿದ್ದವು. ಜನರು ಓಡಾಡುವುದಕ್ಕೆ ದಾರಿ ಮಾಡುವುದು, ಗದ್ದಲವನ್ನು ನಿಯಂತ್ರಿಸುವುದು ಪೊಲೀಸರ ಕೆಲಸವಾಗಿತ್ತು. ವಧುವರರಿಗೆ ಕುಡಿವ ನೀರಿನ ವ್ಯವಸ್ಥೆ ಮಾಡಲು ಓಡಾಡುವವರು ಕೆಲವರಾದರೆ, ಕಾರ್ಯಕ್ರಮದ ನಿರ್ವಹಣೆಯ ಗಡಿಬಿಡಿಯಲ್ಲಿ ಕೆಲವರಿದ್ದರು. ಮಂಗಳವಾದ್ಯವು ಮೊಳಗುತ್ತಿತ್ತು. ಮದುವೆಯ ವಾತಾವರಣವೂ ಸ್ವಲ್ಪ ತುಂಬಿತ್ತೆನ್ನಬಹುದು. ಸ್ವಾಮೀಜಿಯವರನ್ನು ಮದುವೆ ಕಾರ್ಯ ನಡೆಸಲು ಕರೆಸಲಾಗಿತ್ತು. ಸ್ವಾಮೀಜಿಯವರ ಮಂತ್ರ ಘೋಷಣೆಯ ನಂತರ ವಧೂವರರಿಗೆ (ಮೊದಲೇ ಕೊಟ್ಟಿದ್ದ) ಹಾರವನ್ನು ಬದಲಿಸಿಕೊಳ್ಳಲು ತಿಳಿಸಲಾಯಿತು. ಕೆಲವು ವಧುವರರು ಕೈಯಲ್ಲೇ ಹಾರ ಬದಲಿಸಿಕೊಂಡು ತಮ್ಮ ಕೊರಳಿಗೆ ಹಾಕಿಕೊಂಡರು. ಕೆಲವರು ನೇರವಾಗಿ ಕೊರಳಿಗೆ ಪರಸ್ಪರ ಬದಲಿಸಿಕೊಂಡರು. ಕೆಲವರು ತಮ್ಮ ಹಾರಗಳನ್ನು ತಾವೇ ತಮ್ಮ ಕೊರಳಿಗೆ ಹಾಕಿಕೊಂಡರು. ಆಗ ವಧೂವರರ ಸಿರ್ಲಿಪ್ತ ಮುಖ ಭಾವವನ್ನು ಗಮನಿಸಿದವರೇ ವಿರಳ. ಎಷ್ಟು ಮಂದಿಗೆ ನಿಜವಾಗಿ ಈ ಮದುವೆಯು ತೃಪ್ತಿ ನೀಡಿದೆ, ಎಷ್ಟು ಮನಃಪೂರ್ವಕವಾಗಿ ಮದುವೆ ಆಗುತ್ತಿದ್ದಾರೆ ಎಂಬುದು ಮುಖ ಭಾವದಲ್ಲಿ ಎದ್ದು ಕಾಣುತ್ತಿತ್ತು. ಅಂತೆಯೇ ವರರು ತಾಳಿಯನ್ನು ವಧುಗಳ ಕೊರಳಿಗೆ ಹಾಕಿದರು. ವಾದ್ಯವು ಮೊಳಗಿತು. "ಹರಸಲು" ಸನ್ನದ್ಧರಾಗಿದ್ದ ಜನಸ್ತೋಮ ತಾಳಿ ಬಿದ್ದ ಕೂಡಲೇ ಅಕ್ಷತೆ ಹಾಕಿ ಆಶೀರ್ವದಿಸಿತು.

ಅನೇಕ ಕ್ಯಾಮರಾಗಳು ಕ್ಲಿಕ್ ಆದವು.

ಕಾರ್ಯಕ್ರಮವನ್ನು ಕ್ಯಾಮರಾ ಸೆರೆ ಹಿಡಿಯುತ್ತಿತ್ತು. ನಂತರ ಸರ್ಕಾರದ ತೀರ್ಮಾನದ ಪ್ರಕಾರ ವಧೂವರರಿಗೆ ಮದುವೆಯ ಬಟ್ಟೆ, ತಾಳಿ ಹಾಗೂ ಮೂರು ಸಾವಿರ ರೂಪಾಯಿಗಳನ್ನು ಪರಿಹಾರ ಧನವಾಗಿ ನೀಡಲಾಗುವುದು. ಆದರಲ್ಲಿ ಮದುವೆಯ ದಿನ ಒಂದು ಸಾವಿರ ರೂಪಾಯಿಗಳನ್ನು ವರರ ಕೈಯಲ್ಲಿ ನೀಡಲಾಯಿತು. ಹಣದ ಪ್ಯಾಕನ್ನು ಒಡೆದು ನೋಟು ಹಣವನ್ನು ಎಣಿಸುವ ದೃಶ್ಯ ಎದ್ದು ಕಾಣುತ್ತಿತ್ತು. ಕೆಲವು ವಧೂ–ವರರು ತಲಾ ಐದು ನೂರು ರೂಪಾಯಿಗಳನ್ನು ಅಲ್ಲಿಯೇ ಹಂಚಿಕೊಂಡರು. ನಂತರ ಮದುವೆಯನ್ನು ರಿಜಿಸ್ಟರ್ ಮಾಡಲಾಯಿತು.

ವಧೂವರರಿಗೆ ಆಶೀರ್ವದಿಸಲು ಅತಿಥಿ ವೃಂದದವರಿಗೆ ತಿಳಿಸಲಾಯ್ತು. "ಇಂದು ಮದುವೆ ಎಂಬ ಬಂಧನದಲ್ಲಿ ಒಂದಾದ ವಧೂವರರು ಒಟ್ಟಾಗಿ ಬಾಳಲಿ, ದೇವದಾಸಿಯರನ್ನು ಮದುವೆ ಆಗಲು ಮುಂದೆ ಬಂದ ವರರಿಗೆ ಧನ್ಯವಾದಗಳು" ಎಂದು ಕೆಲವರು ಹರಸಿದರು. "ಈ ಮದುವೆ ಮಾಡಬಾರದು" ಎಂದು ತಾವು ಸರ್ಕಾರಕ್ಕೆ ಬೇಡಿದ್ದಾಗಿ ತಿಳಿಸಿದ ಶಾಸಕರೊಬ್ಬರು, ಹಿಂದೊಮ್ಮೆ ತಮ್ಮ ಗ್ರಾಮದಲ್ಲಿ ಇದೇ ರೀತಿ ಅರವತ್ತು ಜೋಡಿ ದೇವದಾಸಿ ಮದುವೆ ನಡೆದಿದ್ದು ಅದರಲ್ಲಿ ಇಂದು ಒಂದು ಜೋಡಿಯೂ ಸಹ ಒಟ್ಟಾಗಿ ಬಾಳುತ್ತಿರುವುದು ಕಾಣ ಸಿಗುವುದಿಲ್ಲ. ಆದಕ್ಕಾಗಿ ದೇವದಾಸಿ ಪದ್ಧತಿ ನಿರ್ಮೂಲನಕ್ಕೆ ಮದುವೆಯೇ ಅಂತಿಮ ತೀರ್ಮಾನವೆಂದಾದರೆ ಅದು ತಪ್ಪು ಕಲ್ಪನೆಯಾಗಿದೆ. ವಧೂವರರಲ್ಲಿ ತಮ್ಮ ಬೇಡಿಕೆಯಿಷ್ಟೇ. "ತಾವು ದೊಡ್ಡ ಮನಸ್ಸು ಮಾಡಿ ಗಂಡಾನೆಯಾಗಿದ್ದೀರಾ, ಆದರೆ ದೇವರು ಒಟ್ಟಿಗೆ ಬಾಳುವಂಥ ಮನಸ್ಸನ್ನು ಕೊಡಲೆಂದು ಬೇಡುತ್ತೇನೆ" ಎಂದು ನೋವಿನ ಧ್ವನಿಯಿಂದ ಹೇಳಿದರು. ಇದಕ್ಕೆ ಮರುತ್ತರ ನೀಡುವ ರೀತಿಯಲ್ಲಿ ಅಧಿಕಾರಿ ವರ್ಗದವರೊಬ್ಬರು, "ದೇವದಾಸಿ ಪದ್ಧತಿ ನಿರ್ಮೂಲನ ಮಾಡಲು ಮದುವೇನೇ ಅಂತಿಮ ತೀರ್ಮಾನ ಅಲ್ಲವಾದರೂ ಇಂಥ ದೊಡ್ಡ ಸಾಮಾಜಿಕ ಪಿಡುಗಿಗೆ ಒಂದು ಪಬ್ಲಿಸಿಟಿ ಸಿಗುವುದೇ ಇದರ ಉದ್ದೇಶವಾಗಿದೆ. ಹಾಗೂ ದೇವದಾಸಿ ಮಕ್ಕಳಿಗೆ ಒಂದು ತಂದೆ ಸಿಗುವುದು ದೇವದಾಸಿಯರ ಮಾನಸಿಕ ನೋವಿನ ನಿರ್ಮೂಲನಕ್ಕೆ ಹಾದಿಯಾಗುತ್ತದೆ" ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಇದೆಲ್ಲ ಮುಗಿಯುವಾಗಲೇ ಸರ್ಕಾರಕ್ಕೆ ಪ್ರತ್ಯಕ್ಷ–ಪರೋಕ್ಷವಾಗಿ ಸಹಾಯ ಮಾಡಿದ ಕೆಲವು (ಬಂಗಾರ, ಹಣ, ಬಟ್ಟೆ, ಬರೆ) ದಾನಿಗಳಿಗೆ ವಂದಿಸಲಾಯ್ತು. ಆಗಲೇ ಹಿಂದಿದ್ದ ಅಂಗನವಾಡಿ ಕಾರ್ಯಕರ್ತೆಯ ಗೊಣಗಾಟ. "ನಾವು ಮೂರು ದಿನದಿಂದ ಊಟ ನಿದ್ದೆಯಿಲ್ಲದೇ ಓಡಾಡಿ ವ್ಯವಸ್ಥೆ ಮಾಡಿದ್ದೇವೆ, ನಮಗೊಂದು ಧನ್ಯವಾದ ಹೇಳಲಿಕ್ಕ ಆಗುವುದಿಲ್ಲವೇ?" ಎಂದು. "ಈ ದೇವದಾಸಿಯರಿಗ ಎಲ್ಲೋ ಮೂಲೆಯಲ್ಲಿ ಬಿದ್ದಿದ್ದವರು ಇಂದು ಇಂಥಾ ಪರಿಸರದಲ್ಲಿ ಮದುವೆಯಾಗುತ್ತಿದ್ದಾರೆ. ಇವರದು ಯಾವುದೋ ಜನ್ಮದ ಪುಣ್ಯವಿರಬಹುದು" ಎಂಬ ವ್ಯಂಗ್ಯ ನುಡಿಗಳು, "ಸಾಕು ಎದ್ದು ಬಾರಪ್ಪ ಮತ್ತೇ ಬೇಕಾದರೆ ಇನ್ನೊಂದು ಮದುವೆಯಾಗುವೆಯಂತೆ" ಎನ್ನುವುದು ಕೆಲವು ವರರ ಸ್ನೇಹಿತರ ಪುಂಡಾತನದ ಮಾತುಗಳು.

ಹೀಗೆ ನಡೆದ ಮದುವೆ ಊಟದೊಂದಿಗೆ ಮುಕ್ತಾಯವಾಗಿತ್ತು. ಇಲ್ಲಿ ಮುಖ್ಯವಾಗಿ ಹೊರಬಂದ ಕೆಲವು ಸತ್ಯಗಳೆಂದರೆ:—

— ಈ ದೇವದಾಸಿ ಮದುವೆಯು ಪೂರ್ವಯೋಜಿತವಾದದ್ದು. ಅಂದರೆ ದೇವದಾಸಿಯರನ್ನು ಇಟ್ಟುಕೊಂಡವರೇ ಹಣದ ಆಸೆಗಾಗಿ ಮದುವೆಯಾಗಿದ್ದು.

— ಹಿಂದೆ ದೇವದಾಸಿಯರನ್ನು ಮದುವೆಯಾದವರೇ ಕೆಲವರು ಇಲ್ಲಿ ಬೇರೆಯವರನ್ನು ಮದುವೆಯಾಗಿದ್ದು.

— ಹಿಂದೆ ಮದುವೆಯಾದ ಜೋಡಿಗಳು (ಒಟ್ಟಿಗೆ ಇರದಿದ್ದರೂ) ಮತ್ತೇ ಮದುವೆಯಾಗಿದ್ದು.

— ಈ ಮದುವೆಯಲ್ಲಿ ತುಂಬಾ ದೇವದಾಸಿಯರಿಗೆ ಮಕ್ಕಳಿದ್ದದ್ದು.

ಇದನ್ನೆಲ್ಲ ಗಮನಿಸಿದಾಗ ಕಾಡುವ ಪ್ರಶ್ನೆಗಳು ಹಲವು, ಈ ಮದುವೆಗಳು ನಿಜವಾಗಿಯೂ ಎಷ್ಟು ಫಲಕಾರಿಯಾಗುತ್ತವೆ? ಎಷ್ಟು ಜೋಡಿಗಳು ಒಟ್ಟಿಗೆ ಸಂಸಾರ ಮಾಡುತ್ತಾರೆ? ಈ ಹಣದ ಆಸೆಗಾಗಿ ಎಷ್ಟು ಮಂದಿ ಮತ್ತೆ ದೇವದಾಸಿಯರಾಗುತ್ತಾರೆ? ಮದುವೆಗೆ ಮೊದಲೇ ಜನಿಸಿದ ದೇವದಾಸಿಯರ ಮಕ್ಕಳಿಗೆ ಎಷ್ಟು ಜನ ತಂದೆಯಾಗಲು ಒಪ್ಪುತ್ತಾರೆ? ಎಷ್ಟು ಜನಕ್ಕೆ ನ್ಯಾಯ ಸಿಗುತ್ತದೆ? ಪದ್ಧತಿ ಎಷ್ಟರ ಮಟ್ಟಿಗೆ ನಿರ್ಮೂಲನ ಆಗುತ್ತದೆ? ಸಹಾಯವಾಗುತ್ತದೆ? ಮದುವೆಯಾದ ದೇವದಾಸಿಯರನ್ನು ಸಮಾಜ ಯಾವ ದೃಷ್ಟಿಯಿಂದ ನೋಡುತ್ತದೆ.? ಇದಕ್ಕೆಲ್ಲಾ ಉತ್ತರಗಳು ಒಮ್ಮೆ ಸಿಕ್ಕರೂ ಮತ್ತೊಮ್ಮೆ ಸಿಗಲಾರದ್ದಾಗಿವೆ.

ವಿ. ಸುಶೀಲಾ.
ಬಿಜಾಪುರ

27ನೇ ಪುಟದಿಂದ

ಕಪ್ಪು ತಪ್ಪಲ್ಲ

ಕವಿಯಿತ್ರಿ ಕಮಲಾ ದಾಸ್ ತಮ್ಮ ಆತ್ಮಚರಿತ್ರೆಯಲ್ಲಿ ತಮ್ಮ ಕಂದು ಬಣ್ಣದ ದ್ರಾವಿಡ ಚರ್ಮದ ಬಗೆಗೆ ತನಗೆ ಯಾವಾಗಲೂ ಅಭಿಮಾನವಿದೆ ಎಂದು ಹೇಳಿಕೊಂಡಿದ್ದಾರೆ. ಚರ್ಮ ಕಪ್ಪಗಿರಲಿ, ಬೆಳ್ಳಗಿರಲಿ ಅದರ ಬಗ್ಗೆ ನಮಗೆ ಅಭಿಮಾನವಿರಬೇಕು. ಶೃಂಗರಿಸಿಕೊಳ್ಳುವುದು ತಪ್ಪಲ್ಲ. ಅದೊಂದು ಕಲೆ. ಆದರೆ ಕಪ್ಪು ಚರ್ಮವನ್ನು ಬೆಳ್ಳಗೆ ಮಾಡಿಕೊಳ್ಳಲು ಯತ್ನಿಸುವುದು ತಪ್ಪು. ಇದ್ದಂತೆ ಇದ್ದರಾಯಿತು. ಅದಕ್ಕೆ ತಕ್ಕ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲೆತ್ನಿಸಬೇಕು. ಅದು ವಿದ್ಯೆ, ಸ್ವಾವಲಂಬನೆಯ ಮೂಲಕ ಸಾಧ್ಯ.

ಉಜ್ವಲಾ ಪುಣಜಗೌಡ.
ಬೆಳಗಾವಿ.

ಓದುಗರಲ್ಲಿ ಮನವಿ

ಗಗನಕ್ಕೇರುತ್ತಿರುವ ಮುದ್ರಣ ಕಾಗದದ ಬೆಲೆ, ಅಂಚೆ ವೆಚ್ಚ ಮುಂತಾದವುಗಳಿಂದಾಗಿ ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾಗಿದೆ. ಮಾನಸಕ್ಕೆ ಆಸಕ್ತಿ ಹಾಗೂ ಪ್ರೋತ್ಸಾಹ ವ್ಯಕ್ತಪಡಿಸಿ ಪತ್ರ ಬರೆಯುವ ಸಹೃದಯರು ಹಾಗೂ ಚಂದಾ ಮುಗಿದಿರುವ ಓದುಗರು ತಕ್ಷಣ ಚಂದಾಹಣ ಕಳಿಸಿದರೆ ಪತ್ರಿಕೆಯನ್ನು ಉಳಿಸಿ ಬೆಳೆಸಲು ನೀರೆರೆದು ಪ್ರೋತ್ಸಾಹಿಸಿದಂತಾಗುತ್ತದೆ. ಓದುಗರೆಲ್ಲರನ್ನು ಉಳಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆಯಾದರೂ ಉಚಿತವಾಗಿ ಒಂದು ಸಂಚಿಕೆಯನ್ನು ಕಳಿಸಲು ಉಂಟಾಗುವ ಖರ್ಚನ್ನು ಭರಿಸುವುದು ಪತ್ರಿಕೆಗೆ ಹೊರೆಯಾಗುತ್ತದೆ. ಪ್ರಿಯ ಓದುಗರು ಸಹಕರಿಸಿ ತಕ್ಷಣ 20-00 ರೂ ಚಂದಾ ಹಣ ಕಳಿಸಿಕೊಡಬೇಕೆಂದು ಕೋರುತ್ತೇವೆ.

ಸಂ. ಮಂ.

ಅಮ್ಮ, ನಾನು, ಗಾಂಧಿ

ಎಚ್. ಎಸ್. ಚಂಪಾವತಿ.

ರಾಜಕೀಯದ ಸೂಳೆಗಾರಿಕೆ ಸಂಬಂಧಗಳಲ್ಲಿ ಗೂಡು ಕಟ್ಟುತ್ತಿರುವ ನೋವು ಒಡಲಾಳದಲ್ಲಿ ಹೆಪ್ಪುಗಟ್ಟಿಕೊಳ್ಳುತ್ತಿರುವಾಗ ಮತ್ತೆ ತಲಕಾವೇರಿಗೆ ಬಂದಿದ್ದೇನೆ, ಜುಯ್ಯೆನ್ನುವ ಜೀರುಂಡೆ, ಆಕಾಶಕ್ಕೆ ಮುತ್ತಿಟ್ಟ ಜಾರು ಬಂಡೆಗಳು, ಸಂದಿ ಗೊಂದಿಗಳಲ್ಲಿ ಮೊರೆಯಿಡುವ ನೀರು ಹುಲ್ಲಿನ ಹಾಸಿಗೆಯ ಬೆಟ್ಟಗುಡ್ಡಗಳಲ್ಲಿ ಹಾವಾಗಿ ಹರಿದ ದಿಣ್ಣೆ, ಎತ್ತರಗಳು, ಮಂಜು ನೀರಲ್ಲಿ ಮುಳುಗಿ ಪಿಂಡ ಇಟ್ಟು ಕಾಯುವ ಬೋಳು ಮಂಡೆಯ ಮಂದಿ........

ತಲೆಯ ಮೇಲೆ ಬಿದ್ದ ಹನಿ ಹನಿ ನೀರುಗಳಲ್ಲಿ ಬೋಳು ಮಂಡೆಯ ಮಂದಿಯ ತಲೆ ಹೊಳೆಯುವುದು ಮಿಣಕ್ ಎನ್ನುವುದು........ ಹೀಗೇ ಅದನ್ನೇ ನೋಡುತ್ತಾ ಕೂರುವ ಶಾಲುಗೆ ಸತ್ತಾಗ ಕಿರು ನಗೆಯಲ್ಲಿ ಕಾಣಿಸಿಕೊಂಡ ಎರಡು ಹಲ್ಲುಗಳ ಅಮ್ಮನ ಹೆಣ ನೆನಪಾಗುತ್ತದೆ,

ಅಮ್ಮನ ಕೊನೆಯ ಚಿತ್ರ ಅದೇ. ಎರಡು ಹಲ್ಲುಗಳು ಕಾಣಿಸಿಕೊಂಡ ಕಿರು ನಗೆಯ ಚಿತ್ರ. ವಿದಾಯ ಹೇಳುವಾಗ ಶಬ್ದಗಳಿಲ್ಲ, ಕಣ್ಣೀರುಗಳಿಲ್ಲ ಪಟ ಪಟನೇ ಮಾತನಾಡುತ್ತಿದ್ದ ತಾಯಿ ಆ ಹದಿನೈದು ದಿನಗಳಲ್ಲಿ ಬಾಯ್ಸನ್ನೇ ಕೈ ಸನ್ನೆಗಳ ಮೂಲಕ ಏನು ಹೇಳಿದಳೋ? ತಾನೆಷ್ಟು ಅರ್ಥ ಮಾಡಿಕೊಂಡೆನೊ?

ಈ ಬೋಳು ಮಂಡೆಯ ಮಂದಿಯ ಹಾಗೆ ಹಿಮಗಟ್ಟುವ ನೀರಲ್ಲಿ ನಿಂತು, ಪಿಂಡ ಮುಟ್ಟಿದ್ದರೆ ಅಮ್ಮನ ಆತ್ಮಕ್ಕೆ ಶಾಂತಿ ದಕ್ಕಿದೆ ಎಂಬ ನೆಮ್ಮದಿಯಿಂದಲಾದರೂ ಇರಬಹುದಿತ್ತು ಎನಿಸಿದಾಗ ಶಾಲಿನಿಯ ಕಣ್ಣಲ್ಲಿ ನೀರು ಉಕ್ಕುತ್ತದೆ. ಕಂಡದ್ದೆಲ್ಲ ಅಪ್ಪಿ ಆಸರೆ ಪಡೆಯುವ ಆಸೆ............

ಶಾಲಿನಿ ಇಸಾಬೆಲ್ ಎಂದು ಪಾದ್ರಿಗಳು ಕರೆದಾಗ ಪೆಟ್ಟಿಗೆಯಲ್ಲಿ ಮಲಗಿಸಿದ್ದ ತಾಯ ಕಂಡಿದ್ದೆ, ಅದೇ ಕಿರು ನಗೆಯಲ್ಲಿ ಇಣುಕುತ್ತಿದ್ದ ಎರಡು ಹಲ್ಲುಗಳು. ತಾಯ ಕಣ್ಣ ಕಾಂತಿ ಕರಗಿ ಹದಿನೈದು ದಿನವಾಗಿತ್ತೋ ಏನೋ? ಸುತ್ತ — ಮುತ್ತಲು ಯಾರ್ಯಾರೋ ತಲೆ ತಟ್ಟಿದರು, ಬೆನ್ನು ಸವರಿದರು, ಕೈಯೋ ಹಿಡಿದವರೆಷ್ಟೋ. ಪೋಸ್ಟ್ ಮಾರ್ಟಂ ಮಾಡಿದ ದೇಹಕ್ಕೆ ಪೂರ್ತಿ ಬಿಳಿಯ ಬಟ್ಟೆ. ಅಮ್ಮನ ದೇಹಕ್ಕೆ ಕೈ–ಕಾಲು ಚಿತ್ರದ ಬದಲು ಬಿಳಿಯ ಬಟ್ಟೆ ಮಾತ್ರ ಕಣ್ಣಿಗೆ ಬರುತ್ತದೆ, ಕೊನೆಗೆ ನೆನಪಿನಂಗಳದಲ್ಲಿ ಉಳಿದದ್ದು ಕಾಂತಿ ಸತ್ತ ಕಣ್ಣುಗಳಲ್ಲಿ ತೂರಿ ಬಂದ ನಗೆಯ ಎರಡು ಹಲ್ಲುಗಳು .... ಕಿರುನಗೆ.... ....ಮೂರು ವರ್ಷದ ಹಿಂದೆ ತಾಯ ಹೆಣ ಪೆಟ್ಟಿಗೆಯಲ್ಲಿ ಮಲಗಿಸಿ, ಸಮಾಧಿಯಲ್ಲಿ ಇಟ್ಟು ಬಂದ ಮೇಲೆ ಮನೆ ಬಿಕೋ ಎನಿಸಿತ್ತು. ತಾನು ಅಳಲಿಲ್ಲ, ನಗಲಿಲ್ಲ. ಪಾದ್ರಿಗಳ ಬೇಡಿ ರಾತ್ರಿಯೆಲ್ಲಾ ಚರ್ಚಲ್ಲಿ ಇರುತ್ತೇನೆಂದು ಹಟ ಮಾಡಿದ್ದೆ. ನಾಲ್ಕು ಮೊಂಬತ್ತಿಗಳ ಹಚ್ಚಿ ಕೂತು, ನಂಬಿಕೆಗಳ, ಆಸರೆಗಳ ಜೋತು ಬೀಳಲು ಪ್ರಯತ್ನಿಸಿದೆ. ಅಮ್ಮನಿಲ್ಲದ ಜಾಗದಲ್ಲಿ ಏನೋ ಬೇಕಿತ್ತು. ಅಮ್ಮನ ಕಿರುನಗೆಯಲ್ಲಿ ಕಂಡ ಹಲ್ಲುಗಳ ಸಾವಿನ ಭೀಕರತೆ ಎದೆಯಿಂದಾಚೆ ಕಿತ್ತೊಗೆಯಬೇಕಿತ್ತು. ಕಣ್ಣೀರುಗಳು ದ್ರವಿಸದೇ ಅಂಟಿಕೊಂಡ ಬದುಕಿನ ಅಂಚುಗಳ ಮಡಿಸಬೇಕಾಗಿತ್ತು.

ಏನೋ ಅಸಮಾಧಾನ, ಆತಂಕಗಳು, ತಾನು ಏನಾಗಲೆಂದು ಅಮ್ಮ ಆಸೆ ಕಂಡಿದ್ದಳು? ಆಕೆಯದೇ ದಾರಿ. ಅಮ್ಮನ ಜೊತೆ ಕಂಡಿದ್ದ ಪೊಲೀಸ್ ಸ್ಟೇಷನ್‌ಗೆ ಕಾಲಿಟ್ಟಾಗ ಬೆಳಗ್ಗೆ ಎಂಟು ಘಂಟೆ. ನಿದ್ರೆಯಿಲ್ಲದ ಕಣ್ಣುಗಳಿಗೆ ಒತ್ತಾಯಿಸಿದ್ದಕ್ಕೋ ಏನೋ ನೋವ ಕಣ್ಣೀರುಗಳು. ತಾಯಿಯ ದೇಹದ ವಿಷ ತಂದೆಯ ದ್ವೇಷದ ಅಲಗಿನಲ್ಲಿ ಬಂದದ್ದು. ಕಂಡರಿಯದ ತಂದೆ ಮೂರು ತಿಂಗಳ ಹಿಂದೆ ಮನೆಯಲ್ಲಿ ನೆಲೆಯೂರಿದ್ದ. ಆತನ ಯಾವ ಟಾನಿಕ್, ಯಾವ ಮಾಫಿಯಾ ತಾಯಿಯನ್ನು ಸೆಳೆಯಿತೋ? ದೇಹ ದೇಹದ ತುಂಬ

ಅವನ ಬಗ್ಗೆ ವಿಷ ಕಾರುತ್ತಿದ್ದ ತಾಯಿ ಆವನ ಯಾವುದ್ಯಾವುದೋ ಟ್ಯೂಬ್‌ಗಳ ವಿಷ ನುಂಗಿ ಸತ್ತಳು. ಪೊಲೀಸ್ ಸ್ಟೇಷನ್ನಲ್ಲಿ ಹೇಳಿಕೆ ಕೊಡುವಾಗ ಮೊದಲ ಬಾರಿಗೆ ಅತ್ತಿದ್ದೆ. ತಾಯಿಯ ಶವ ಹಾಕುವಾಗ ಬತ್ತಿ ಬರದ ಕಣ್ಣೀರು ಕಪೋಲಗಳ ಮೇಲೆ, ಕಂಪ್ಲೇಂಟ್ ಬರೆಯುತ್ತಿದ್ದ ಹಾಳೆಗಳ ಮೇಲೆ ಹರಿದಾಗ ಏನೋ ವಿಚಿತ್ರ ಸಮಾಧಾನ ಎನ್ನಿಸಿತ್ತು. ೬೦ ವರ್ಷಗಳ ಹೋರಾಟದ ನಂತರ ತಾಯಿ ವಿದಾಯ ಹೇಳಬೇಕೆಂದಿದ್ದ ಕೋರ್ಟ್, ಕಛೇರಿ, ಪೊಲೀಸ್ ಠಾಣೆ, ವಕೀಲರುಗಳಿಗೆ ಶಾಲಿನಿ ಮತ್ತೆ ಸುಪ್ರಭಾತ ಹಾಡಿದ್ದಳು.

• • •

ಶಾಲಿನಿ ತಂದೆಯ ಮುಖ ಹುಟ್ಟಿದಾಗಿನಿಂದ ಕಂಡವಳಲ್ಲ. ವೈದ್ಯನಾಗಿದ್ದ ತಂದೆ ತಾಯಿಯನ್ನು ಮದುವೆಯಾಗಿ ನಂತರ ದುಡ್ಡಿನಾಸೆಗೆ ಮತ್ತೆ ಮಧ್ಯ ಪ್ರದೇಶದಲ್ಲಿ ಹೋಗಿ ಯಾರನ್ನೋ ಮದುವೆಯಾಗಿದ್ದ. ತಾಯಿ ನನ್ನ ಹಣೆಯಬರಹ ಶಪಿಸಿದಳೋ, ತನ್ನದನ್ನೇ ಶಪಿಸಿಕೊಂಡಳೋ ಗೊತ್ತಿಲ್ಲ. "ನಾಣ್ಯ ಯಾವುದಾದರೇನು? ಚಲಾವಣೆಯಲ್ಲಿರಬೇಕಲ್ಲ. ಚಲಾವಣೆಯಲ್ಲಿರಲು ಬಿಡಿ" ಎಂಬಂತೆ ದೈನ್ಯವಾಗಿ ತನ್ನ ಬೆಳೆಸಿದಳು. ತಂದೆ ಮನೆಗೆ ಬರಲಿಲ್ಲ. ಶಾಲೂ ಎನ್ನಲಿಲ್ಲ. ನೀನು ನನ್ನ ಮಡಿಯಚ್ಚು ಎನ್ನಲಿಲ್ಲ. ಶಾಲಿನಿಗೆ ಹುಟ್ಟಿದಾಗಿನಿಂದ ಗೊತ್ತಿದ್ದೂ ಇಷ್ಟೇ. ತಾನು ಹುಟ್ಟಿದ ಗಳಿಗೆ ಅಪ್ಪ ಬೇರೆಲ್ಲೋ ಹೇಳದೇ ಮದುವೆಯಾದರು. ಅಮ್ಮನ ದೂರ ಮಾಡಿದರು. ತನಗೆ ೫ ವರ್ಷವಾಗುವವರೆಗೆ ಅಮ್ಮನಿಗೆ ಇದು ತಿಳಿಯಲಿಲ್ಲವೋ ಅಥವಾ ಅಪ್ಪನ ಕಾಗದಗಳು ಸಮಾಧಾನ ಕೊಟ್ಟವೋ ತಿಳಿಯಲಿಲ್ಲ. ನಂತರದ ವರ್ಷಗಳಲ್ಲಿ ಅಮ್ಮ ಪೊಲೀಸ್ ಠಾಣೆ, ಕೋರ್ಟ್ ಎಂದು ಪ್ರಾರಂಭಿಸಿದ್ದು. ಯಾವ ನಕ್ಷತ್ರದಲ್ಲಿ ತಾನು ಹುಟ್ಟಿದೆ ಎಂದು ಎಲ್ಲಿಯೋ ಅಮ್ಮ ತನ್ನನ್ನು ಶಪಿಸಿರಬೇಕು. ………… ೧೦ ವರುಷ. ತನಗೆ ೫ — ೬ ವರ್ಷಗಳಾದಾಗ ಪತ್ರ ಬರೆಯುತ್ತಿದ್ದ ಅಪ್ಪ ನಂತರ ಪತ್ರ ಬರೆಯುವುದನ್ನು ನಿಲ್ಲಿಸಿದ್ದ. ವಿಳಾಸ ಕೊಡಲಿಲ್ಲ. ಹಣ ಕಳುಹಿಸಲಿಲ್ಲ. ತಾಯಿಯ ಪತ್ರಗಳೆಲ್ಲ ತಾಯಿಗೇ ವಾಪಸ್ಸು ಬಂದವು. ಅಡ್ರೆಸ್ ಸಿಗದ ಕಾಲದಲ್ಲಿ ತಾಯಿಗೆ ತಬ್ಬಲಿ ಎನ್ನಿಸಿರಬೇಕು. ಆದರೂ ನೀನು ಹುಟ್ಟಿದ್ದು ವಿಷ ಗಳಿಗೆ ಎನ್ನಲಿಲ್ಲ ತಾಯಿ. ನಾಟಿ ಔಷಧಿ ಮಾಡಿ ಬದುಕಿದ ತಾಯಿ — ನೀನು ಹೀಗಾಗಬೇಕು ಮಗಳೇ ಹಾಗಾಗಬೇಕು ಎಂದು ಕನಸು ಕಂಡಳು. ಹುಟ್ಟಿದ ಹಬ್ಬಕ್ಕೆ ಎಲ್ಲರ ಕರೆದಳು. ಪ್ರತಿ ಕ್ರಿಸ್‌ಮಸ್‌ಗೆ ಮನೆಯಲ್ಲಿ ಮಾಡಿದ ವೈನ್ ಎಲ್ಲರಿಗೆ ಹಂಚಿ ಸಂತೋಷ ಪಟ್ಟಳು. ಕಷ್ಟಗಳು ಇನ್ನು ಮುಂದೆ ಹೀಗೆಯೇ ಹೆಚ್ಚಾಗುತ್ತವೆ ಮಗಳೇ ಎಂದಳು.

ಏನು ಕಂಡಿದ್ದಳು ತಾಯಿ? ೧೦ ವರುಷ ಒಂದೇ ಸಮನೆ ಕೋರ್ಟ್, ಕಛೇರಿ, ಪೊಲೀಸ್, ಲಾಯರ್ ಯಾರ್ಯಾರೋ – ಕೇರಳ, ಮಧ್ಯಪ್ರದೇಶಕ್ಕೆ ಓಡಾಡಿ ವಿಳಾಸ ಪತ್ತೆ ಮಾಡಿದಳು. ವಿಳಾಸ ಪತ್ತೆ ಮಾಡುವಲ್ಲಿ ಪಾದ್ರಿಗಳ, ಪೋಸ್ಟ್‌ಮನ್‌ಗಳ, ಪೊಲೀಸರ ಕೈ ಕಾಲು ಹಿಡಿದು ಬೇಡಿದ್ದಳು.

ತನಗೆ ೧೩—೧೪ ವರ್ಷವಾಗುತ್ತಿದ್ದ ಹಾಗೆಯೇ ಈ ಸಂಬಂಧಗಳ ಸಿಕ್ಕುಗಳ ಬಿಡಿಸತೊಡಗಿದ್ದೆ. ದುಡಿದು ಬದುಕುವ ಅಮ್ಮನ ಹೇಳದೇ ಕೇಳದೇ ಬಿಟ್ಟು ಹೋಗುವ ತವಕ ಅಪ್ಪನಲ್ಲಿ ಏಕೆ ಮೂಡಿತ್ತು? ಆ ಮದುವೆಯಲ್ಲಿ ಮತ್ತಷ್ಟು ಹಣ ಮಾಡಿದ್ದರು ಎಂದಿದ್ದಳು ತಾಯಿ. ಅಮ್ಮನೂ ಹಣ ಕೂಡಿಸಿದ್ದರು. ಉಪ್ಪರಿಗೆಯಲ್ಲಿಡುವಷ್ಟಲ್ಲದಿದ್ದರೂ ಮನಸ್ಸಿಗೆ ನೆಮ್ಮದಿ ಕೊಡುವಷ್ಟು. ತಿಂದು ಉಳಿಯುವಷ್ಟು.

ಅಮ್ಮ ಹೀಗೇ ಹೋರಾಡಿದರು. ಅಲ್ಲಿ-ಇಲ್ಲಿ ಮಹಿಳಾ ಗುಂಪುಗಳ ಜೊತೆ, ಕಂಡ ಕಂಡವರ ಜೊತೆ ಅಲೆದರು. ಕೇರಳ, ಮಧ್ಯ ಪ್ರದೇಶ ಎಂದು ಅನೇಕ ರಾಜ್ಯಗಳ ತಿರುಗಿದರು. ನಿನ್ನಂತಹ ಹುಡುಗಿಯರಿಗೆ ಹೀಗಾಗದಿರಲಿ ಶಾಲೂ, ನೀನು ಈ ದಿನ, ನಾಳೆ ಮತ್ತೊಬ್ಬರು ಎಂದು ತನ್ನ ಜೊತೆ ಕೂತು ಮಾತನಾಡುವರು. ತಾಯಿ ಹಣದ ಹೊಳೆ ಹರಿಸಿದಳು. ತಾನು ತಪ್ಪು ಮಾಡಿದೆ ಎಂದು ಆತ ಹೇಳಲಿ ಎಂಬುದು ಆಕೆಯ ಆಸೆಯಾಗಿತ್ತು.

"ನೀನು ನನ್ನ ತಂಗಿಯಮ್ಮ. ನನ್ನ ಕಷ್ಟ ಅರ್ಥ ಮಾಡಿಕೋ" ಎಂದು ಕಂಡರಿಯದ ಅವನ ಸಂಬಂಧವಿದ್ದ ಹುಡುಗಿಯರಿಗೆ ಬರೆದಳು.

"ಶಾಲೂ ನನ್ನ ಹೋರಾಟಕ್ಕೆ ಜಯ ಖಂಡಿತ ಸಿಗುತ್ತದೆ" ಹೀಗೇ ಪಟ ಪಟನೆ ಮಾತನಾಡುತ್ತಿದ್ದ ತಾಯಿ, ರಾಜಕೀಯ ಬಲ್ಲ ತಾಯಿ, ಪೋಲೀಸ್, ಕೋರ್ಟ್ ಎಂದು ಅಲೆಯುತ್ತಿದ್ದ ಮೂವತ್ತೆಂಟು ವರುಷದ ತಾಯಿ ಮಾತನಾಡಿದ್ದೇನು? ಆಕೆ ಆಗಿದ್ದಿರಬಹುದೇನು?

ತಾನು ದೊಡ್ಡವಳಾಗುತ್ತಿದ್ದ ಹಾಗೆ ಸುಪ್ತ ವಾರ್ದ್ದ ತಾಯಿಯ ಮೈಯ ಬಯಕೆಗಳು ನವಿರೆದ್ದಿರಬಹುದು. ಅಮ್ಮನ ಅಪ್ಪುಗೆ ಮಲಗುತ್ತಿದ್ದ ಪುಟ್ಟ ಹುಡುಗಿ ತಾನು ಗಂಭೀರವಾಗಿ ಬೇರೆ ಕೋಣೆಯಲ್ಲಿ ಕುಳಿತು ಓದಿ, ನನ್ನ ಪಾಡಿಗೆ ಮಲಗಿಕೊಂಡಾಗ ಆಕೆಗೆ ಧಡಕ್ಕನೇ ಏಕಾಂಗಿತನ ಕಾಡಿರಬಹುದು. ಶಾಲುಗೆ ಮದುವೆಯಾದರೆ ಆಕೆಯ ಮೇಲೆ ತನಗೆ ಹಕ್ಕಿಲ್ಲ ಎನ್ನಿಸಿರಬಹುದು. ಹೋರಾಟ ಮಾಡಿ ತಾನು ಗೆಲ್ಲುವುದೇನನ್ನು? ಎನ್ನಿಸಿರಬಹುದು. ಆದರೂ ಆಕೆ ಹಾಗೂ ಅಪ್ಪನ ಸಂಬಂಧ ಬೆಸುಗೆ ಹಾಕಲಾರದಷ್ಟು ದ್ವೇಷ ಹೊಂದಿತ್ತು ಎಂದು ತಾಯಿ ಅರಿಯಬೇಕಿತ್ತು. ಹತ್ತು ವರುಷದ ಅಮ್ಮನ ಬೇಗೆಯ ಉರಿ ಅಪ್ಪನನ್ನು ತಟ್ಟಿತ್ತು ಎಂಬುದು ಆಕೆಗೆ ತಿಳಿಯಬೇಕಿತ್ತು. ದ್ವೇಷದ ಉರಿ ಹತ್ತಿಸಿ, ಅದರ ನೆರಳಲ್ಲಿ ಕೂತರೆ ತಾನು ಬೇಯುತ್ತೇನೆ ಎಂದು ಆಕೆಗೆ ಅರ್ಥವಾಗಬೇಕಿತ್ತು.

ತಾಯಿಯ ಹತ್ತು ವರುಷದ ಹೋರಾಟದಲ್ಲಿ ತಂದೆ ಅರೆಸ್ಟ್ ಆಗಿ ಬಂದ, ಬೇಲ್ ಪಡೆದು ಈ ಊರಿಗೆ ಬಂದವನೇ ತಾಯಿಯನ್ನು ಭೇಟಿಯಾದ, ಮುಖ ತಿರುಗಿಸಿದಳು ತಾಯಿ ಒಂದು....ಎರಡು.... ದಿನ....ಮೂರು ದಿನ,.... ಹೀಗೆಯೇ ತಿಂಗಳು, ಆತ ಬರುವುದು, ಚರ್ಚ್‌ಗಳಲ್ಲಿ, ಮನೆಯಲ್ಲಿ, ಆಕೆ ಹೋಗಿ ಬರುವ ರೋಗಿಗಳ ಮನೆಗಳಲ್ಲಿ ಕಾಯುವುದು ಇತ್ಯಾದಿ........

ಹೆಣ್ಣು — ಗಂಡಿನ ನಡುವಿನ ಆಕರ್ಷಣೆ ಏನಿರಬಹುದು? ಹತ್ತು ವರುಷ ಹೋರಾಡಿದ ತಾಯಿ ಒಂದೆರಡು ತಿಂಗಳುಗಳಲ್ಲಿ ಕರಗಿದಳು. ಅವಳ ಒಳವ್ಯಕ್ತಿತ್ವ ಬಯಸಿದ್ದು — ಕಾಡುವ ಒಂಟಿತನ ತಪ್ಪಿಸಿಕೊಳ್ಳುವುದಾಗಿರಬಹುದು. ಕಟ್ಟಿ ಹಾಕಿದ್ದ ಮೈಯಿ ನವಿರುಗಳ ಸಡಿಲಿಸುವಾಸೆಯಿಂದಿರಬಹುದು. ನಾಲ್ಕು ಜನರ ಮುಂದೆ ಶಾಲು ತಂದೆ ಇವರು ಎಂದು ನಕ್ಕು-ನಲಿಯುವಾಸೆಯಿಂದಿರಬಹುದು. ತನಗೇನೂ ಅನ್ನಿಸಿರಲಿಲ್ಲ. ತಾಯಿ ಮತ್ತು ತನ್ನ ಮಧ್ಯೆ ಅಪರಿಚಿತನೊಬ್ಬನಿದ್ದಾನೆ, ಎಂದು ಮಾತ್ರ ಅನ್ನಿಸಿತು. ತನಗೆ ಮನೆ ತೀರಾ ಕಿರಿ-ಕಿರಿಯನ್ನುಂಟು ಮಾಡಿತ್ತು ಆತ "ಶಾಲೂ" ಎಂದು ಕರೆದಾಗ ಯಾವ ಆತ್ಮೀಯತೆಯ ತಂತು ಕೂಡಾ ಮಿಡಿದಿರಲಿಲ್ಲ. ಕೊನೆ ಕೊನೆಗೆ ಮನೆ ನರಕವಾಗುತ್ತಿದೆ ಅನ್ನಿಸತೊಡಗಿತು.

ಅಮ್ಮ ನನಗೆ ಏನೂ ಹೇಳಲಿಲ್ಲ. ತಾನೂ ಹೊರಗೆ ಹೆಚ್ಚು ಹೊತ್ತು ಕಳೆಯುವುದನ್ನು ಪ್ರತಿಭಟಿಸಲಿಲ್ಲ. ಸಿನಿಮಾಕ್ಕೆ ಕರೆಯಲಿಲ್ಲ. ಕ್ರಿಸ್ ಮಸ್ ದಿನ ಒತ್ತಾಯಿಸಿ ತಾಯಿ ಕೂರಿಸಿದಾಗ ಮಾತ್ರ ಅಪ್ಪನ ಎದುರು ಕೂತಿದ್ದೆ.

"ಹೇಗಿದೆ ಶಾಲೂ ಕಾಲೇಜ್?"

ಎಂದಾಗ, "ನಿಮಗೆ ಸಂಬಂಧವಿರದ ಪ್ರಶ್ನೆ" ಎಂದೆ. ತಾಯಿ ಗದರಿದಳು. "ಹುಟ್ಟಿದಾಗಿನಿಂದ ನೋಡಿರದ, ಎತ್ತಿಕೊಂಡು ಆಡಿಸಿರದ ಯಾವುದೇ ಕೈಗಳಿಗೆ ನನ್ನ ಮೇಲೆ ಏನು ಅಧಿಕಾರವಿದೆ" ಎಂದೆ. "ನಿನಗೆ ಗಂಡ ಆಗಿದ್ದನೋ ಏನೋ, ನನಗಂತೂ ತಂದೆ ಆಗಲೇ ಇಲ್ಲವಲ್ಲ" ಎಂದೆ. ಹೀಗೇ ಮಾತಿಗೆ ಮಾತು ಬೆಳೆದು ತಾಯಿ ಲೋಟ ಬೀಸಿದಳ. ತಾನು ಸುಖವಾಗಿರುವುದು ನಿನ್ಗೆ ಇಷ್ಟವಿಲ್ಲ ಎಂದಳು. "ಇರಬಹುದು" ಎಂದು ಸುಮ್ಮನಾದೆ. ಸಂಬಂಧಗಳ ಸಿಕ್ಕು ಅರ್ಥವಾಗದ ತನಗೇಕೆ ಅದರ ಗೊಡವೆ ಅನ್ನಿಸಿತ. ಆದರೂ ಮನಸ್ಸಿನಲ್ಲಿ ಏನೋ ತಳಮಳ ಅಮ್ಮ ಮೊದಲಿನ ತರವೇ ಆಗಲಿ ದೇವರೇ ಎಂದು ಬೇಡಿದೆ. ನಾನು ಎಣಿಸಿದ್ದೇ ಆಯಿತು. ತಾಯಿ ಕಾಯಿಲೆ ಬಿದ್ದಳು. ತಂದೆಯೇ ವೈದ್ಯಕೀಯ ಪರೀಕ್ಷೆ ನಡೆಸಿದ. ೧೫ ದಿನ ತಾಯಿ ಮಾತಾಡಲಿಲ್ಲ. ಆಕೆಯ ಮೈ ಮೇಲಿದ್ದ ಟ್ಯೂಬ್ಸ್‌ಗಳ ಕಿತ್ತುಹಾಕಿದೆ. ಬೇರೆ ಡಾಕ್ಟರ್ ಕರೆತರತ್ತೇನೆಂದೆ. ಆ ಅಪರಿಚಿತ ನನ್ನಮ್ಮನ ಮೇಲೆ ಒಡೆತನ ಸಾಧಿಸಿದ್ದ. ಆತ ನನ್ನು ಹೊರದೂಡುವ ಶಕ್ತಿಯನ್ನು ಆ ಒಂದು ತಿಂಗಳಲ್ಲಿ ಅಮ್ಮ ನನ್ನಿಂದ ಕಸಿದುಕೊಂಡು ಬಿಟ್ಟಿದ್ದಳು. ನನಗೆ ಅನಾಥೆ ಎನ್ನಿಸಿತು. ಇದ್ದಕ್ಕಿದ್ದ ಹಾಗೆ

ಒಂದು ತಿಂಗಳಲ್ಲಿ ಅಮ್ಮ ತನ್ನನ್ನು ಅನಾಥೆಯನ್ನಾಗಿಸಿದಳು ಎನ್ನಿಸಿತು. ನನಗೆ ಅವಳ ಮೇಲಿದ್ದ ಎಲ್ಲಾ ಹಕ್ಕು ಕಿತ್ತು ಆ ಅಪರಿಚಿತನ ಕೈಯಲ್ಲಿಟ್ಟದ್ದಳು. ಟ್ಯೂಬ್ಸ್ ಕಿತ್ತು ಹಾಕಿದರೂ ಪ್ರಯೋಜನವಾಗಲಿಲ್ಲ. ಆಕೆಗೆ ಬೆಂಗಾವಲಾದ ಆತ ಆಕೆಯ ಮೈಯಲ್ಲಿ ವಿಷವೇರಿಸಿದ. ಯಾವ ಟ್ಯೂಬ್ ಯಾವ ಇಂಜೆಕ್ಷನ್? ಕೈ ಸನ್ನೆ, ಬಾಯ್ಸನ್ನೆ ಮಾಡಿ ತಾಯಿ ಸತ್ತಳು. ೧೦ ವರುಷದ ಹೋರಾಟದ ಬದುಕಿಗೆ ಒಂದು ಘಳಿಗೆ ವಿಶ್ರಮಿಸೋಣ ಎನ್ನಿಸಿತೇನೋ ಆಕೆಗೆ.

ಸತ್ತ ಮರುಗಳಿಗೆಯಲ್ಲಿ ತಾನೂ ಆತನಿಗೆ ಮುಖ ಕೊಡಲಿಲ್ಲ. ಹೆಣವನ್ನು ಹಾಗೆಯೇ ತೆಗೆದುಕೊಂಡು ಹೋಗಲು ತಾನು ಬಿಟ್ಟಿರಲಿಲ್ಲ. ಪೋಸ್ಟ್ ಮಾರ್ಟಂ ಆಗಲೇಬೇಕೆಂದು ಹಟ ಹಿಡಿದೆ. ಅಮ್ಮನ ದೆವ್ವ ನನ್ನ ಮೈಯಲ್ಲಿತ್ತು. ಆ ಕ್ಷಣ ಪೋಸ್ಟ್ ಮಾರ್ಟಂ ಎಂದು ಹಟ ಹಿಡಿದೆ. ನನ್ನ ಊಹೆ ನಿಜವಾಯಿತು. ತಂದೆ ಮತ್ತೆ ಕಾಣಲಿಲ್ಲ.

. . . .

ದೇವರೇ .... ಯಾವ ತಂದೆ? ಯಾವ ಮಗಳು? ಎಲ್ಲಿಯೂ ತಂತುಗಳಿಲ್ಲ. ಮಗಳು ಒಂಟಿಯಾಗುತ್ತಾಳೆ ಎಂದೂ ತಂದೆಗೆ ಅನಿಸಲಿಲ್ಲ. ಅವನ ರಕ್ತನಾಳದ ಯಾವ ತರಂಗಗಳೂ ಧ್ವನಿ ಕೊಡಲಿಲ್ಲ. ಕುಡಿತದ ಅಮಲಿನಲ್ಲಿಯೇ ಇರುವ ತಂದೆ ಯಾವುದನ್ನೂ ಕಾಣಲಾರದೇ ಹೋದ. ತನ್ನಿಂದ ಅಮ್ಮ ಹಕ್ಕು ಕಸಿದು ಅವನಿಗೆ ಕೊಟ್ಟದ್ದನ್ನು ಕಾಣಲಾರದೇ ಹೋದ. ತನಗೆ ಕಾಣದಂತೆ ಅವನ ಬಟ್ಟೆ ಒಗೆದು ಮಡಚಿ, ಬೆನ್ನಿಗೆ ಎಣ್ಣೆ ತಿಕ್ಕಿದ್ದನ್ನು ತಂದೆ ಕಾಣಲಾರದೇ ಹೋದ. ತಾಯಿಯ ಸಾವು ನಿಗೂಢವಾಗಿತ್ತು. ತನಗೆ ಕಾಡಿದ ಸಂಶಯ ತಾಯಿಗೆ ಕಾಡಲಿಲ್ಲ. ತನಗೆ ಬಡಿದಿದ್ದ ಸಾವಿನ ವಾಸನೆ ತಾಯಿಗೆ ಬಡಿದಿರಲಿಲ್ಲ. ತಾನು ಕಂಡ ಸಾವಿನ ಹೆಜ್ಜೆಗಳ ತಾಯಿ ಕಾಣಲಾರದೇ ಹೋದಳು.

ಮನಸ್ಸಿನ ಸಮಾಧಾನಕ್ಕೆ ಕ್ರೈಸ್ತ ದಾರಿಯಾಗಲಿಲ್ಲ. ಬೆಳತನಕ ಉರಿಸಿದ ಮೊಂಬತ್ತಿಗಳು ಮನಸ್ಸಿನ ದುಗುಡ ಕಳೆಯಲಿಲ್ಲ. ಹಲವಾರು ಬಾರಿ ತಾಯಿಯ ಸಮಾಧಿಯ ಬಳಿ ಕೂತು ಬಂದರೂ ಏಕಾಂಗಿತನ ಕಳೆಯಲಿಲ್ಲ. ಮೂರು ವರ್ಷ ಕಳೆದಿದೆ. ಅಮ್ಮನ ಹಾದಿಯಲ್ಲಿಯೇ ಬದುಕು. ಅರ್ಥವಿಲ್ಲದ ಕೋರ್ಟ್, ಪೊಲೀಸ್, ಇತ್ಯಾದಿ. ತಂದೆ ಇಂದು ಬಿಡುಗಡೆಯಾಗಿದ್ದಾನೆ. ತಾಯಿಯ ನಿಗೂಢ ಸಾವಿನ ಭೂತ ಬೆಂಬತ್ತಿದೆ. ಹೀಗೆ ಬರೆಯುತ್ತಲೇ, ಬರೆಯುತ್ತಲೇ ಖಾಲಿ ಮಾಡುತ್ತಾ ಹೋಗಬೇಕು.

ಸಾವನ್ನು ಜೀರ್ಣಿಸಿಕೊಳ್ಳಬೇಕು. ಆಕೆಯ ಸಾವಿಗೆ, ಮತ್ತೆ ತನ್ನಲ್ಲಿನ ನೋವಿಗೆ ಧ್ವನಿ ಕೊಡಬೇಕು .... ಅಂತ ಹೀಗೇ ಏನೇನನ್ನೋ ಚಿಂತಿಸುತ್ತಾ ಶಾಲು ಬರೆಯಲು ಪ್ರಾರಂಭಿಸಿದಾಗ ಆಕೆ ಬರೆದದ್ದು ಇಷ್ಟು ಮಾತ್ರ:

ಗಾಂಧಿ ದೊಡ್ಡ ಮನುಷ್ಯ
ಆಹಾರದ ಮೂಲದಲ್ಲಿ
ಕಾಮದ ಮೂಲದಲ್ಲಿ
ಹಣದ ಮೂಲದಲ್ಲಿ
ಹಿಂಸೆಯ ರೇಖೆಗಳನ್ನು ಕಂಡಿದ್ದ
ಕ್ಯಾಪಿಟಲಿಸಂನ ಮುಖಗಳನ್ನು ಕಂಡಿದ್ದ.

0 0 0

ಸುದ್ದಿ ಸಂಕಲನ

ಭಾರತದ ಶಿಶುವಿಗೆ ಬಾಡಿಗೆ ತಾಯಿ

ಸ್ವತಃ ಗರ್ಭಿಣಿಯಾಗಿ ಮಗುವನ್ನು ಪಡೆಯಲು ಸಾಧ್ಯವಾಗದ ಭಾರತೀಯ ನರ್ಸ್ ಒಬ್ಬಳಿಗೆ ಬಾಡಿಗೆ ತಾಯಿಯೊಬ್ಬರು ದೊರಕಿ ವಾದ ವಿವಾದಕ್ಕೆ ಕಾರಣರಾಗಿದ್ದಾರೆ. ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯ ಮಹಿಳೆಗೆ ಮಗುವನ್ನು ತನ್ನ ಗರ್ಭದಲ್ಲಿ ಬೆಳೆಸಿ ಕೊಡಲು ಮುಂದಾದ ಈ ಬಿಳಿಯ ಮಹಿಳೆಗೆ ಈಗಾಗಲೇ ಐದು ಮಕ್ಕಳಿದ್ದಾರೆ. ವರ್ಣ ಭೇದದ ಹಿನ್ನೆಲೆಯಲ್ಲಿ ಬಂದ ವಿರೋಧಕ್ಕೆ ಜಗ್ಗದ 28 ವರ್ಷ ವಯಸ್ಸಿನ ಡಾನ್ ಚೌಲರ್ 'ಮಗುವನ್ನು ಅಪೇಕ್ಷಿಸುವ ಮಹಿಳೆಯೊಬ್ಬಳಿಗೆ ನೆರವಾಗುತ್ತಿದ್ದೇನೆ. ಆಕೆ ಕರಿಯಳೋ ಬಿಳಿಯಳೋ ಅಪ್ರಸ್ತುತ ಈ ಬಗ್ಗೆ ಟೀಕೆಯನ್ನು ನಾನು ಲಕ್ಷಿಸುವುದಿಲ್ಲ ಇದಕ್ಕೆ ನನ್ನ ಪತಿಯ ಬೆಂಬಲವೂ ಇದೆ' ಎನ್ನುತ್ತಾರೆ. ನರ್ಸ್‌ಳ ಭ್ರೂಣವನ್ನು ತನ್ನ ಗರ್ಭದಲ್ಲಿ ಧರಿಸಿರುವ ಡಾನ್ ಚೌಲರ್ 9 ತಿಂಗಳ ಕಾಲ ಮಗುವನ್ನು ಗರ್ಭದಲ್ಲಿ ಬೆಳೆಸಿ ಹೆತ್ತುಕೊಡುತ್ತಿರುವುದಕ್ಕಾಗಿ ಸೂಕ್ತ ಪ್ರತಿಫಲವನ್ನೂ ಪಡೆಯುತ್ತಾರೆ.

ಗರ್ಭರಕ್ಷಕ–ಅರಕ್ಷರು

ಮಾದಕವಸ್ತು ಸೇವನೆ, ಮದ್ಯಪಾನ, ಧೂಮಪಾನ ಇವುಗಳ ಸೇವನೆ ಎಲ್ಲರಿಗೂ ಹಾನಿಕಾರಕವೇ. ವಿಶೇಷವಾಗಿ ಗರ್ಭಿಣಿಯರಿಗೆ ಈ ಚಟಗಳಿದ್ದಲ್ಲಿ ಅವರಿಂದ ಜನಿಸುವ ಮಕ್ಕಳ ಮೇಲೆ ಆಗಬಹುದಾದ ಪರಿಣಾಮಗಳು ತುಂಬಾ ಅಪಾಯಕಾರಿ ಎಂಬ ವಿಷಯ ಬೆಳಕಿಗೆ ಬಂದಿದೆ. ಅಮೇರಿಕಾದಂತಹ ಮುಂದುವರೆದ ರಾಷ್ಟ್ರಗಳಲ್ಲಿ ಸ್ತ್ರೀಯರೂ ಈ ಚಟಕ್ಕೆ ಒಳಗಾಗಿರುವುದು ತೀರಾ ಸಾಮಾನ್ಯ. ಮಾದಕ ವಸ್ತುಗಳ ಸೇವನೆ ವಿರುದ್ಧ ಸರ್ಕಾರ ಏನೇನು ಮಾಡಿದರೂ ಜನರನ್ನು ತಡೆಯಲಾಗಲಿಲ್ಲ. ಈಗ ಆ ಕೆಲಸಕ್ಕೆ ನ್ಯೂಯಾರ್ಕಿನ ಸ್ವಯಂ ಸೇವಾ ಸಂಸ್ಥೆಗಳೇ ಮುಂದಾಗಿವೆ. ಗರ್ಭಿಣಿಯರ ಚಟುವಟಿಕೆಗಳ ಮೇಲೆ ನಿಗಾ ಇಟ್ಟು ಕುಡಿತವನ್ನೋ ಅಥವಾ ಮಾದಕ ವಸ್ತುಗಳನ್ನೋ ಸೇವಿಸುತ್ತಿದ್ದರೆ ಆಕೆಗೆ ಛೀಮಾರಿ ಹಾಕುವುದಷ್ಟೇ ಅಲ್ಲ, ಆಕೆಗೆ ಆ ವಸ್ತುಗಳನ್ನು ಪೂರೈಸಿದವರ ವಿರುದ್ಧ ಕಾನೂನು ಕ್ರಮವನ್ನು ಜರುಗಿಸುತ್ತಾರೆ.

ಈಚೆಗೆ ಹೋಟೆಲೊಂದರಲ್ಲಿ ಗುಂಡು ಇಳಿಸುತ್ತಿದ್ದ ಗರ್ಭಿಣಿ ಮಹಿಳೆಯನ್ನು ನೋಡಿದ ಇಬ್ಬರು ಆಕೆಗೆ ಗುಂಡನ್ನು ಪೂರೈಸಿದ ಸಪ್ಲೈಯರ್ ಮೇಲೆ ಹಲ್ಲೆ ನಡೆಸಿದರು. ಈ ಸುದ್ದಿ ನಗರದೆಲ್ಲೆಡೆ ಹರಡಿ, ಆ ಸಪ್ಲೈಯರ್‌ಗೆ ಚೆನ್ನಾಗಿ ಹೊಡೆದ ಹುಡುಗಿ, ಹುಡುಗ ಹೀರೋಗಳಾಗಿದ್ದರು. ಅಷ್ಟೇ ಅಲ್ಲದೆ ವಾರ ಕಳೆಯುವುದರೊಳಗೆ ಇಂಥ 'ಟೀಂ' ಎಲ್ಲೆಡೆ ಹುಟ್ಟಿಕೊಂಡವು. ಸಮ ವಸ್ತ್ರವನ್ನೂ ಧರಿಸುವ ಈ 'ಪೊಲೀಸರು' ಎಲ್ಲೆಡೆಗೂ ಭೇಟಿ ನೀಡುತ್ತಿರುತ್ತಾರೆ. ಎಲ್ಲರಿಗೂ ಮಾದಕ ವಸ್ತು, ಕುಡಿತ, ಧೂಮಪಾನಗಳ ಬಗ್ಗೆ ತಿಳುವಳಿಕೆ ನೀಡುತ್ತಾರಾದರೂ ವಿಶೇಷವಾಗಿ ಗರ್ಭಿಣಿಯರಿಗೆ ಎಚ್ಚರಿಕೆ ನೀಡುತ್ತಾರೆ.

ಗರ್ಭಸ್ಥ ಶಿಶುವಿಗೆ ಮಾದಕ ವಸ್ತು ನೀಡಿದ ತಾಯಿಗೆ ಶಿಕ್ಷೆ

ಗರ್ಭದಲ್ಲಿದ್ದ ಮಗುವಿಗೆ ಹೊಕ್ಕುಳ ಬಳ್ಳಿ ಮೂಲಕ ಮಾದಕ ವಸ್ತು ನೀಡಿದ ಆಪಾದನೆಯ ಮೇಲೆ ಅಮೇರಿಕಾದಲ್ಲಿ ಪ್ರಥಮ ಬಾರಿಗೆ ಮಹಿಳೆಯೊಬ್ಬಳಿಗೆ 14 ವರ್ಷಗಳ ನಿರ್ಭಂದಿತ ವಾಸ್ತವ್ಯ ಶಿಕ್ಷೆಯಾಗಿದೆ ಮತ್ತು ಮಾದಕ ವಸ್ತು ಚಿಕಿತ್ಸಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಫ್ಲೋರಿಡಾ ನ್ಯಾಯಾಲಯ ಆದೇಶಿಸಿದೆ.

1987 ರಲ್ಲಿ ಮಗುವಿಗೆ ಜನ್ಮ ನೀಡುವ ಹಿಂದಿನ ದಿನ ರಾತ್ರಿ ಕೊಕೇನ್ ಬಳಸಿದ ಜೆನ್ನಿಫರ್ ಕ್ಲಾರೈಸ್ ಮರು ವರ್ಷ ಮಗಳು ಗರ್ಭದಲ್ಲೇ ಇದ್ದಾಗಲೂ ಹೆಚ್ಚಿನ ಪ್ರಮಾಣದಲ್ಲಿ ಕೊಕೇನ್ ತೆಗೆದುಕೊಂಡಿದ್ದನ್ನು ತನ್ನ ವೈದ್ಯರಿಗೆ ತಿಳಿಸಿದ್ದಳು. 89 ರಲ್ಲಿ ಹುಟ್ಟಿದ ಆ ಹೆಣ್ಣು ಮಗುವಿನ ಶರೀರದಲ್ಲಿ ಕೊಕೇನ್ ಇದ್ದುದು ಪತ್ತೆಯಾಗಿತ್ತು. ಈ ರೀತಿ ಪ್ರಪಂಚವನ್ನೇ ಕಂಡಿರದ ಮಕ್ಕಳಿಗೆ ಮಾದಕವಸ್ತು ನೀಡಿದ ಆಪಾದನೆಯ ಮೇಲೆ ಹಲವಾರು ಮಹಿಳೆಯರ ಮೇಲೆ ಮೊಕದ್ದಮೆಗಳು ಹೂಡಿದ್ದರೂ ಎಲ್ಲ ಖುಲಾಸೆಯಾಗಿದ್ದವು. ಶಿಕ್ಷೆ ನೀಡಿದ ಪ್ರಕರಣ ಮಾತ್ರ ಇದೇ ಮೊದಲನೆಯದು.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು — ೫೬೦೦೬೭.

ನಂ ಮ್ಯಾಗ್ (5)ಪಿಆರ್ ಬಿ ಡಿಕ್ಲೇರ್ಡ್: 284—8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ :"ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು—560067